

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 6 ಭಾನುವಾರ 2023

ಸಂಪುಟ: 44 | ಸಂಚಿಕೆ: 112 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com


₹ 4



ಮೂರನೇ ಗ್ಯಾರಂಟಿ 'ಗೃಹಜ್ಯೋತಿ'ಗೆ ಸಿಎಂ ಸಿದ್ದರಾಮಯ್ಯ ಅಧಿಕೃತ ಚಾಲನೆ

ಗ್ಯಾರಂಟಿಯಿಂದ ರಾಜ್ಯದ ಅಭಿವೃದ್ಧಿಗೆ ಅಡ್ಡಿಯಿಲ್ಲ

● ಆ.24ಕ್ಕೆ 'ಗೃಹಲಕ್ಷ್ಮಿ' ಆರಂಭಿಸುತ್ತೇವೆ ● ಗ್ಯಾರಂಟಿಯಿಂದ ಜನಸಾಮಾನ್ಯರಿಗೆ ತಿಂಗಳಿಗೆ4 ರಿಂದ 5; ವರ್ಷಕ್ಕೆ 40 ರಿಂದ 60 ಸಾವಿರ ಉಳಿತಾಯ



ಕಲಬುರಗಿ, ಆ.5–ಬಹು ನಿರೀಕ್ಷಿತ 'ಗೃಹಜ್ಯೋತಿ' ಯೋಜನೆಗೆ ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಅಧಿಕೃತ ಚಾಲನೆ ನೀಡಿದರು.

ನೂತನ ವಿದ್ಯಾಲಯ (ಎನ್‌ವಿ) ಮೈದಾನದಲ್ಲಿ ಇಂಧನ ಇಲಾಖೆ ಹಾಗೂ ಜೆಸ್ಕಾಂ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಐದು ಗ್ಯಾರಂಟಿಗಳ ಪೈಕಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವ 'ಗೃಹಜ್ಯೋತಿ' ಯೋಜನೆಯನ್ನು ವೇದಿಕೆಯ ಮೇಲೆ ನಿರ್ಮಿಸಲಾದ ಮಾದರಿ ಮನೆಯ ವಿದ್ಯುತ್ ದೀಪ ಬೆಳಗಿಸುವ ಮೂಲಕ ಮುಖ್ಯ ಮಂತ್ರಿಗಳು ಚಾಲನೆ ನೀಡಿದರು.

ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಅಭಿವೃದ್ಧಿಗೆ ಹಿನ್ನಡೆಯಾಗುವುದಿಲ್ಲ ಎಂದು ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಬಿಜೆಪಿಗೆ ತಾಕತ್ತಿದ್ದರೆ ಐದು ಗ್ಯಾರಂಟಿಗಳನ್ನು ರಾಷ್ಟ್ರದ ಎಲ್ಲಾ ರಾಜ್ಯಗಳಲ್ಲಿ ಜಾರಿ ಮಾಡುವ ತೀರ್ಮಾನ ಮಾಡಲಿ ಎಂದು ಸವಾಲು ಹಾಕಿದ್ದಾರೆ. ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಉಚಿತ ವಿದ್ಯುತ್ ನೀಡುತ್ತಿರುವ ಶೂನ್ಯ ಬಿಲ್ ನೀಡಿ ಬೃಹತ್ ಸಮಾವೇಶದಲ್ಲಿ ಮಾತನಾಡಿದ ಅವರು, ವಿಧಾನಸಭೆ ಚುನಾವಣೆಯಲ್ಲಿ ಜನರಿಗೆ ಭರವಸೆ ನೀಡಿದಂತೆ 5 ಗ್ಯಾರಂಟಿಗಳನ್ನು ನೀಡುತ್ತೇವೆ. ಗ್ಯಾರಂಟಿಗಳನ್ನು ಜಾರಿ ಮಾಡಿದರೆ ರಾಜ್ಯ ದಿವಾಳಿ ಆಗುತ್ತದೆ ಎಂದು ಉಯಿಲೆಬ್ಬಿಸುತ್ತಿದ್ದಾರೆ. ಈ ಯೋಜನೆಗಳಿಂದ ರಾಜ್ಯ ದಿವಾಳಿ ಆಗುವುದಿಲ್ಲ.

ಈ ದೇಶವನ್ನು ದಿವಾಳಿ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ. ಕರ್ನಾಟಕದಲ್ಲಿ ಈ ಹಿಂದೆ ಎಲ್ಲಾ ಭರವಸೆಗಳನ್ನು ಈಡೇರಿಸಿದಾಗಲೂ ಆರ್ಥಿಕವಾಗಿ ಸುಭದ್ರವಾಗಿತ್ತು. ಬಿಜೆಪಿ ಅಧಿಕಾರದಲ್ಲಿದ್ದಾಗ ರಾಜ್ಯದ ಸಂಪತ್ತು ಲೂಟಿ ಮಾಡಿ, ನಿರುದ್ಯೋಗ ಸೃಷ್ಟಿಸಿ, ಬೆಲೆ ಏರಿಕೆ ಮಾಡಿ ಬಡಜನರಿಗೆ ಅನ್ಯಾಯ ಮಾಡಿದ್ದಾರೆ.

ನಾವು ಯೋಜನೆಗಳಿಗೆ ಅಗತ್ಯವಾದ ಹಣ ಕ್ರೋಢೀಕರಿಸುವುದರ ಜೊತೆಗೆ ಎಂದಿನಂತೆ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ. ಇದರ ಬಗ್ಗೆ ಸಂಶಯ ಬೇಡ ಎಂದಿದ್ದಾರೆ. ಗ್ಯಾರಂಟಿಗಳನ್ನು ನೀಡುವುದರಿಂದ ರಾಜ್ಯದ ಬೊಕ್ಕಸ ಬರಿದಾಗುತ್ತದೆ ಎಂದು ನರೇಂದ್ರ ಮೋದಿ ಹೇಳಿರುವ ಹೇಳಿಕೆ ಅಪ್ಪಟ ಸುಳ್ಳು. ಇದನ್ನು ನಂಬಬೇಡಿ. ಈಗಾಗಲೇ ಮೂರು ಗ್ಯಾರಂಟಿ ಅನುಷ್ಠಾನಗೊಂಡು ಅರ್ಹ ಫಲಾನುಭವಿಗಳ ಕೈ ತಲುಪುತ್ತಿವೆ. ಗೃಹಲಕ್ಷ್ಮಿ ಯೋಜನೆಗೆ ಆಗಸ್ಟ್ 24ರಂದು ಚಾಲನೆ ನೀಡಲಿದ್ದೇವೆ. ರಾಜ್ಯದ ● 9ನೇ ಪುಟಕ್ಕೆ

ಗೃಹಜ್ಯೋತಿ ನೋಂದಣಿಗೆ ಕೊನೆಯ ದಿನಾಂಕವಿಲ್ಲ

ಇದೇ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವ ಕೆ.ಜೆ.ಜಾರ್ಜ್ ಅವರು, ಗೃಹಜ್ಯೋತಿ ಯೋಜನೆ ನೋಂದಣಿಗೆ ಅಂತಿಮ ದಿನಾಂಕ ಇಲ್ಲ ಎಂದು ಹೇಳಿದರು. ರಾಹುಲ್ ಗಾಂಧಿ ಕರ್ನಾಟಕದಲ್ಲೂ ಜೋಡೋ ಯಾತ್ರೆ ಮಾಡಿದ್ದರು. ಭಾರತ ಜೋಡೋ ಯಾತ್ರೆ ವೇಳೆ ಸಾಮಾನ್ಯ ಜನರ ಜೊತೆ ಚರ್ಚೆ ಮಾಡಿ ಅವರ ಸಮಸ್ಯೆ ಅರಿತುಕೊಂಡಿದ್ದರು. ಆ ಸಂದರ್ಭದಲ್ಲಿ ಕರ್ನಾಟಕದಲ್ಲಿ ಮಧ್ಯಮ ವರ್ಗದವರು ಸಂಕಷ್ಟದಲ್ಲಿದ್ದಾರೆ. ಅವರ ಕೈ ಬಲಪಡಿಸಬೇಕು ಎಂದು ಹೇಳಿದ್ದರು. ಅವರ ಸೂಚನೆ ಮೇರೆಗೆ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಲಾಗಿತ್ತು.

ಒಂದು ಕೋಟಿ 42 ಲಕ್ಷ ಜನರು ಗೃಹಜ್ಯೋತಿ ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆ. ಗೃಹಜ್ಯೋತಿ ನೋಂದಣಿಗೆ ಕಡೆಯ ದಿನಾಂಕ ವೆಂದೇನೂ ಇಲ್ಲ. ಉಚಿತವಾಗಿ ನೀಡುವುದು ಉಡುಗೊರೆಯಲ್ಲ. ಬದಲಾಗಿ ಜನರ ಆರ್ಥಿಕ ಸ್ಥಿತಿ ಸುಧಾರಿಸುವ ಪ್ರಯತ್ನವಾಗಿದೆ. ಸಾಮಾನ್ಯ ಜನರಿಗೆ ಹಣ ಉಳಿದರೆ, ಅವರು ಬೇರೆ ರೂಪದಲ್ಲಿ ಹಣ ಖರ್ಚು ಮಾಡುತ್ತಾರೆ. ಇದರಿಂದ ಸರ್ಕಾರಕ್ಕೆ ಮತ್ತೆ ತೆರಿಗೆ ಬರಲಿದೆ. ಕರ್ನಾಟಕ ಲೋಕಸಭಾ ಕ್ಷೇತ್ರಗಳಲ್ಲಿ ಹೆಚ್ಚಿನ ಕೈ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ಹಾಗೆಯೇ ಈ ಬಾರಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಕೂಡ ಗೆಲ್ಲಿಸಬೇಕು ಎಂದು ತಿಳಿಸಿದರು.



ಮೈಸೂರಲ್ಲಿ ರಾಷ್ಟ್ರಪತಿಗೆ ಆತ್ಮೀಯ ಸ್ವಾಗತ



ಮೈಸೂರು, ಆ. 5(ಆರ್‌ಕೆ)– ತಮಿಳುನಾಡಿನ ಮಧುಮಲೈಗೆ ತೆರಳುವ ಮಾರ್ಗಮಧ್ಯೆ ಮೈಸೂರಿಗೆ ಆಗಮಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಮೇಯರ್ ಶಿವಕುಮಾರ್ ಪುಷ್ಪಗುಚ್ಛ ನೀಡಿ ಆತ್ಮೀಯವಾಗಿ ಬರಮಾಡಿಕೊಂಡರು. ದೆಹಲಿಯಿಂದ ವಿಶೇಷ ವಿಮಾನದಲ್ಲಿ ಇಂದು ಮಧ್ಯಾಹ್ನ 2.45 ಗಂಟೆಗೆ ಆಗಮಿಸಿದ ರಾಷ್ಟ್ರಪತಿಗಳು, ನಂತರ ಹೆಲಿಕಾಪ್ಟರ್‌ನಲ್ಲಿ ತಮಿಳುನಾಡಿನ ಮಧುಮಲೈ ಹುಲಿ ಸಂರಕ್ಷಿತ ಮೀಸಲು ಅರಣ್ಯ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ತೆರಳಿದರು. ಅಲ್ಲಿ ಆಸ್ಕರ್ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ 'ದಿ ಎಲಿಫೆಂಟ್ ವಿಸ್ಪರರ್ಸ್' ಚಿತ್ರದಲ್ಲಿನ ಆನೆ ಮರಿ ಪಾಲಕರಾದ ಬೊಮ್ಮನ್ ಮತ್ತು ಬೆಳ್ಳಿ ದಂಪತಿಗಳನ್ನು ಸನ್ಮಾನಿಸಿ, ಅವರೊಂದಿಗೆ ಸಂವಾದ ನಡೆಸಿದರು. ನಂತರ ಸಂಜೆ 5.30 ಗಂಟೆಗೆ ಮೈಸೂರಿಗೆ ವಾಪಸ್ಸಾದ ಮುರ್ಮು ಅವರು, ಇಲ್ಲಿಂದ ಚೆನ್ನೈಗೆ ತೆರಳಿದರು. ಈ ಸಂದರ್ಭದಲ್ಲಿಯೂ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಸೇರಿದಂತೆ ಹಲವು ಗಣ್ಯರು, ನಾಗರಿಕ ಮತ್ತು ಪೊಲೀಸ್ ಅಧಿಕಾರಿಗಳು ಉಪಸ್ಥಿತರಿದ್ದರು.

ಇಂದು ಮಧ್ಯಾಹ್ನ ರಸ್ತೆ ಮೂಲಕ ಮೈಸೂರಿಗೆ ಆಗಮಿಸಿದ ರಾಜ್ಯಪಾಲರು ಮಾನಸ ಗಂಗೋತ್ರಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅತಿಥಿಗೃಹದಲ್ಲಿ ವಿಶ್ರಾಂತಿ ಪಡೆದ ಬಳಿಕ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ರಾಷ್ಟ್ರಪತಿಗಳನ್ನು ಬರಮಾಡಿಕೊಂಡರು. ನಂತರ ನಂಜನಗೂಡು ರಸ್ತೆಯ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿ ನೀಡಿ, ಶುಕವನ ವೀಕ್ಷಿಸಿದರು.

ಅಲ್ಲಿಂದ ಚಾಮುಂಡಿಬೆಟ್ಟಕ್ಕೆ ತೆರಳಿ ಚಾಮುಂಡೇಶ್ವರಿದೇವಿಯ ದರ್ಶನ ಪಡೆದು, ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸಂಜೆ ರಾಷ್ಟ್ರಪತಿಗಳನ್ನು ಬೀಳ್ಕೊಟ್ಟ ಬಳಿಕ ಬೆಂಗಳೂರಿಗೆ ಹಿಂತಿರುಗಿದರು.

ಸಿಖ್ ವಿರೋಧಿ ದಂಗೆ: ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಕೊಲೆ ಆರೋಪ ಹೊರಿಸಿದ ಸಿಬಿಐ!



ನವದೆಹಲಿ, ಆ.5– 1984ರ ಸಿಖ್ ವಿರೋಧಿ ದಂಗೆ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ವಿರುದ್ಧ ಕೇಂದ್ರೀಯ ತನಿಖಾ ದಳ(ಸಿಬಿಐ) ಕೊಲೆ ಆರೋಪ ಹೊರಿಸಿದೆ. ದೆಹಲಿಯ ಗುರುದ್ವಾರ ಪುಲ್ ಬಂಗಾಶ್ ಬಳಿ ಸಿಖ್ಖರ ಹತ್ಯೆಗೆ ಕಾಂಗ್ರೆಸ್ ನಾಯಕ ಜಗದೀಶ್ ಟೈಟ್ಲರ್ ಗುಂಪನ್ನು ಪ್ರಚೋದಿಸಿದ್ದರು ಎಂದು ಆರೋಪಪಟ್ಟಿಯಲ್ಲಿ ಹೇಳಲಾಗಿದೆ. ಟೈಟ್ಲರ್ ಸಿಖ್ಖರ ಹತ್ಯೆಗೆ ಜನಸಮೂಹವನ್ನು ಪ್ರಚೋದಿಸಿದರು. ಇದರ ಪರಿಣಾಮವಾಗಿ ಗುಂಪು ಗುರುದ್ವಾರ ಪುಲ್ ಬಂಗಾಶ್ ಅನ್ನು ಸುಟ್ಟು ಹಾಕಿತು. ಅಲ್ಲದೆ 1984ರ ನವೆಂಬರ್ 1ರಂದು ಸಿಖ್ ಸಮುದಾಯದ ಮೂವರನ್ನು ಹತ್ಯೆ ಮಾಡಿತ್ತು ● 9ನೇ ಪುಟಕ್ಕೆ

ತೋಷಖಾನಾ ಭ್ರಷ್ಟಾಚಾರ ಪ್ರಕರಣ

ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್‌ಖಾನ್‌ಗೆ 3 ವರ್ಷ ಜೈಲು



ಇಸ್ಲಾಮಾಬಾದ್: ಮಹತ್ವದ ಬೆಳವಣಿಗೆಯೊಂದರಲ್ಲಿ ಶನಿವಾರ ಪಾಕಿಸ್ತಾನ್ ತೆಹ್ರೀಕ್ ಎ ಇನ್ಸಾಫ್(PTI) ಮುಖ್ಯಸ್ಥ ಇಮ್ರಾನ್ ಖಾನ್‌ಗೆ ಮೂರು ವರ್ಷಗಳ ಜೈಲು ಶಿಕ್ಷೆಯಾಗಿದ್ದು, ಅಲ್ಲಿನ ಪೊಲೀಸರು ಅವರನ್ನು ಬಂಧಿಸಿದ್ದಾರೆ.

ಪಾಕಿಸ್ತಾನದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಇಮ್ರಾನ್ ಖಾನ್ ಅವರನ್ನು ತೋಷಖಾನಾ ಪ್ರಕರಣದಲ್ಲಿ ದೋಷಿ ಎಂದು ತೀರ್ಪು ನೀಡಿ ಮೂರು ವರ್ಷಗಳ ಜೈಲುಶಿಕ್ಷೆ ಮತ್ತು 1 ಲಕ್ಷ ರೂಪಾಯಿ ದಂಡ ವಿಧಿಸಿದೆ. ಕೋರ್ಟ್ ಆದೇಶವನ್ನು ಉಲ್ಲಂಘಿಸಿದರೆ ಹೆಚ್ಚುವರಿ ಆರು ತಿಂಗಳು ಜೈಲಿನಲ್ಲಿ ಇರಬೇಕಾಗುತ್ತದೆ ಎಂದು ಸಹ ಎಚ್ಚರಿಕೆ ನೀಡಲಾಗಿದೆ. ಈ ತೀರ್ಪಿನಿಂದಾಗಿ ಐದು ವರ್ಷಗಳ ಅವಧಿಗೆ ರಾಜಕೀಯದಿಂದ ಅನರ್ಹಗೊಳಿಸಲಾಗುತ್ತದೆ. ಖಾನ್ ವಿಚಾರಣೆಗೆ ಹಾಜರಾಗಿರಲಿಲ್ಲ, ಹೀಗಾಗಿ ನ್ಯಾಯಾಧೀಶರು ಅವರನ್ನು ಬಂಧಿಸಲು ಆದೇಶಿಸಿದರು. ಆದರೆ, ತಕ್ಷಣವೇ ಮೇಲ್ಮನವಿ ಸಲ್ಲಿಸುವುದಾಗಿ ಅವರ ಕಾನೂನು ತಂಡ ಹೇಳಿದೆ. ಪಿಟಿಐ ಮುಖ್ಯಸ್ಥ ಇಮ್ರಾನ್ ಖಾನ್ ದೇಶಾದ್ಯಂತ 140ಕ್ಕೂ ಹೆಚ್ಚು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ● 9ನೇ ಪುಟಕ್ಕೆ

ಮೈಸೂರು ಮಿತ್ರ ಭಾನುವಾರ 6 ಆಗಸ್ಟ್ 2023

ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ಗೆ ಆರ್ಥಿಕ ಸಂಕಷ್ಟ; ಠೇವಣಿದಾರರಲ್ಲಿ ಆತಂಕ

ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಆದರೆ, ಸಾಲ ವಸೂಲಾತಿ ಸಮರ್ಪಕವಾಗಿ ಆಗದ ಹಿನ್ನೆಲೆಯಲ್ಲಿ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಈ ಕಾರಣದಿಂದಾಗಿ ರಿಸರ್ವ್ ಬ್ಯಾಂಕ್ ಠೇವಣಿ ಹಿಂಪಡೆತಕ್ಕೆ ನಿರ್ಬಂಧ ವಿಧಿಸಿದ್ದು, ಮುಂದಿನ 6 ತಿಂಗಳಲ್ಲಿ ಸಾಲ ವಸೂಲಾತಿ ಮಾಡಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವಂತೆ ಸೂಚಿಸಿದೆ.

ಮೈಸೂರು,ಆ.5(ಬಿಎಲ್‌ಯು)– ರಾಜ್ಯದ ಪ್ರತಿಷ್ಠಿತ ಸಹಕಾರಿ ಬ್ಯಾಂಕ್ ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್ ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದು, ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿರುವ ಸದಸ್ಯರು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ಸ್ವಾತಂತ್ರ್ಯ ಹೋರಾಟಗಾರರಿಂದ ಸ್ಥಾಪನೆಯಾದ ಈ ಬ್ಯಾಂಕ್ ರಾಜ್ಯಾದ್ಯಂತ ಮೈಸೂರು ಸೇರಿದಂತೆ 13 ಶಾಖೆಗಳನ್ನು ಹೊಂದಿದೆ. ಬೆಂಗಳೂರನ್ನು ಕೇಂದ್ರ ಸ್ಥಾನವಾಗಿಸಿಕೊಂಡಿರುವ ಈ ಬ್ಯಾಂಕ್‌ನಲ್ಲಿ 30 ಸಾವಿರ ಸದಸ್ಯರಿದ್ದಾರೆ. ಬ್ಯಾಂಕ್‌ನ ಆರ್ಥಿಕ ಸಂಕಷ್ಟದ ಮಧ್ಯೆ ರಿಸರ್ವ್ ಬ್ಯಾಂಕ್ ಗಮನಹರಿಸಿದ್ದು, ಬ್ಯಾಂಕಿಂಗ್ ರೆಗ್ಯುಲೇಷನ್ ಕಾಯ್ದೆ 35ಎ ಪ್ರಕಾರ ಮುಂದಿನ 6 ತಿಂಗಳಲ್ಲಿ ಠೇವಣಿದಾರರು ಗರಿಷ್ಠ 50 ಸಾವಿರ ರೂ. ಮಾತ್ರ ಹಿಂಪಡೆಯಬಹುದು ಎಂದು ರಿಸರ್ವ್ ಬ್ಯಾಂಕ್ ನಿರ್ಬಂಧ ವಿಧಿಸಿದೆ. ಇದರಿಂದಾಗಿ ಲಕ್ಷಾಂತರ ರೂ. ಠೇವಣಿ ಇಟ್ಟಿರುವವರು ತಮ್ಮ ಹಣ ಪಡೆಯಲು ಸಾಧ್ಯವಾಗದೇ ಪರಿತಪಿಸುವಂತಾಗಿದೆ.

ಆದರೆ, ಆರ್‌ಬಿಐ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ ಬ್ಯಾಂಕ್‌ಗಳ ಗ್ರಾಹಕರ ನೆರವಿಗೆ ಬರುವ ನಿಟ್ಟಿನಲ್ಲಿ "ಡಿಪಾಸಿಟ್ ಇನ್ಶುರೆನ್ಸ್ ಕ್ರೆಡಿಟ್ ಗ್ಯಾರಂಟಿ ಕೋ-ಆಪರೇಷನ್" ಸ್ಥಾಪನೆ ಮಾಡಿದ್ದು, ಇಲ್ಲಿಗೆ ಅರ್ಜಿ ಸಲ್ಲಿಸಿದರೆ ಠೇವಣಿದಾರರಿಗೆ ವಿಮೆ ಹಣ ಗರಿಷ್ಠ 5 ಲಕ್ಷ ರೂ. ದೊರೆಯಲಿದೆ. ಅದಕ್ಕಿಂತ ಹೆಚ್ಚಿನ ಮೊತ್ತ ಠೇವಣಿ ಇಟ್ಟಿರುವವರು ತಮ್ಮ ಉಳಿದ ಹಣ ಹಿಂಪಡೆಯಲು ಬ್ಯಾಂಕ್ ಆರ್ಥಿಕ ಸಂಕಷ್ಟದಿಂದ ಹೊರ ಬರುವವರೆಗೆ ಕಾಯುವುದು ಅನಿವಾರ್ಯವಾಗಿದೆ.

ಠೇವಣಿದಾರರು ವಿಮೆ ಹಣ ಪಡೆಯಲು ಸಹಕಾರಿಯಾಗುವಂತೆ ಬ್ಯಾಂಕ್‌ನಲ್ಲೇ ಡಿಪಾಸಿಟ್ ಇನ್ಶೂರೆನ್ಸ್ ಕ್ರೆಡಿಟ್ ಕೋ-ಆಪರೇಷನ್‌ಗೆ ಸಲ್ಲಿಸುವ ಅರ್ಜಿ ನೀಡಲಾಗುತ್ತಿದೆ. ಠೇವಣಿದಾರರು ಸೆಪ್ಟೆಂಬರ್ 7ರೊಳಗೆ ಅರ್ಜಿ ಸಲ್ಲಿಸಬೇಕಾಗಿದ್ದು, ಅವರ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ವಿಮೆ ಹಣ ಅಕ್ಟೋಬರ್ 22ರೊಳಗೆ ಜಮೆ ಆಗಲಿದೆ ಎಂದು ಮೈಸೂರು ಶಾಖೆ ವ್ಯವಸ್ಥಾಪಕ ಪ್ರಸಾದ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಮ್ಮ ಬ್ಯಾಂಕ್ ದಿವಾಳಿಯಾಗಿಲ್ಲ. ಆದರೆ, ಸುಮಾರು 450ರಿಂದ 500 ಕೋಟಿ ರೂ.ವರೆಗೆ ಸಾಲ ಮರುಪಾವತಿಯಾಗದ ಕಾರಣ ಬ್ಯಾಂಕ್ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ. ಅದು ಹೊರತುಪಡಿಸಿ ಬ್ಯಾಂಕ್‌ನಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಈ ಬಗ್ಗೆ ಆರ್‌ಬಿಐಗೆ ದಾಖಲೆಗಳನ್ನು ಸಲ್ಲಿಸಿದ್ದೇವೆ. ಬ್ಯಾಂಕ್‌ನಲ್ಲಿ ಅವ್ಯವಹಾರ ನಡೆಯದ ಹಿನ್ನೆಲೆಯಲ್ಲಿ ರಿಸರ್ವ್ ಬ್ಯಾಂಕ್ ಸಾಲ ವಸೂಲಾತಿಗೆ ಕ್ರಮ ಕೈಗೊಂಡು ಮುಂದಿನ 6 ತಿಂಗಳಲ್ಲಿ ಆರ್ಥಿಕ ಪರಿಸ್ಥಿತಿ ಸುಧಾರಿಸಿಕೊಳ್ಳುವಂತೆ ಸೂಚಿಸಿದೆ. 103 ಕೋಟಿ ರೂ. ಸಾಲ ಪಡೆದಿರುವವರು ಸಾಲ ವಸೂಲಾತಿಗೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷ ಹೆಚ್.ಸಿ. ಕೃಷ್ಣ ಅವರು ಸಾಲ ವಸೂಲಾತಿಗೆ ಬ್ಯಾಂಕ್ ಕಠಿಣ ಕ್ರಮ ಕೈಗೊಳ್ಳಲಿದೆ. ತಾಂತ್ರಿಕವಾಗಿ ಎದುರಾಗಿರುವ ಸಮಸ್ಯೆಗಳನ್ನು ಪರಿಹರಿಸಿಕೊಂಡು ಆರು ತಿಂಗಳೊಳಗಾಗಿ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆಗೆ ತರಲಾಗುವುದು. ಹೀಗಾಗಿ ಠೇವಣಿದಾರರು ಆತಂಕಪಡಬೇಕಾದ ಅವಶ್ಯಕತೆ ಇಲ್ಲ ಎಂದು ಅವರು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ

ಮೈಸೂರು, ಆ.5–ಮೈಸೂರಿನ ಕ್ರಿಯಾ ಸಮಾಜ ಸೇವಾ ಸಂಸ್ಥೆಯ ಅಂಗ ಸಂಸ್ಥೆಯಾದ ಕ್ರಿಯಾ ಸ್ಪರ್ಧಿ ಮತ್ತು ಕೆಎಸ್‌ಆರ್‌ಪಿ ಸಹಯೋಗದಲ್ಲಿ ಪಿಡಿಓ, ಸೆಕ್ರೆಟರಿ, ಎಸ್‌ಡಿಎ ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಗೆ ಉಚಿತ ತರಬೇತಿ ನೀಡಲಾಗುತ್ತಿದೆ. ಈ ತರಬೇತಿಯು ಎರಡು ತಿಂಗಳ ಕಾಲ ನಡೆಯಲಿದ್ದು, ನುರಿತ ಅಧ್ಯಾಪಕರಿಂದ ಬೋಧನೆ ಇರುತ್ತದೆ. ಅಣಕು ಪರೀಕ್ಷೆಗಳ ಮೂಲಕ ಅಭ್ಯರ್ಥಿಗಳಿಗೆ ತರಬೇತಿ ನೀಡಲಾಗುವುದು. ಆಸಕ್ತರು ನೋಂದಣಿಗೆ ಕಡೆಯ ದಿನ ಆ.15. ಮಾಹಿತಿಗೆ ಮೊ.ಸಂ.8971896519, 720427 6933 ಸಂಪರ್ಕಿಸಬಹುದು. ತರಬೇತಿಯು ಪೊಲೀಸ್ ಭವನದ ಬಳಿಯಿರುವ ಕ್ರೆಸೆಂಟ್ ಬ್ಯಾರಕ್‌ನಲ್ಲಿ ಆಗಸ್ಟ್ 16ರಿಂದ ಸಂಜೆ 5.30ರಿಂದ 8 ಗಂಟೆಯವರೆಗೆ ನಡೆಯಲಿದೆ.

ಮೈಸೂರಲ್ಲಿ ಮತ್ತೊಂದು ಗ್ಯಾರಂಟಿ ಗೃಹಜ್ಯೋತಿಗೆ ಚಾಲನೆ

ಗ್ಯಾರಂಟಿ ಯೋಜನೆಗಳ ಮೂಲಕ ಪ್ರತಿ ಫಲಾನುಭವಿಗೆ ತಿಂಗಳಿಗೆ 5 ಸಾವಿರ ರೂ. ಉಚಿತ ಸೌಲಭ್ಯ

- ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ವಿವರಣೆ
- ಈ ತಿಂಗಳಿನಿಂದಲೇ ಶೂನ್ಯ ವಿದ್ಯುತ್ ಬಿಲ್; ಕತ್ತಲಿನಿಂದ ಬೆಳಕಿನೆಡೆಗೆ
- ಶೇ.20ರಷ್ಟು ಜನರು ಈ ಯೋಜನೆಗೆ ಇನ್ನು ನೋಂದಣಿ ಮಾಡಿಸಿಲ್ಲ

ಮೈಸೂರು, ಆ.5(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ ಸೇರಿದಂತೆ ಐದು ಗ್ಯಾರಂಟಿ ಯೋಜನೆಗಳಿಂದ ಒಂದು ಕುಟುಂಬ ತಿಂಗಳಿಗೆ ಕನಿಷ್ಠ ಐದು ಸಾವಿರ ರೂ. ಹಣಕಾಸಿನ ಸೌಲಭ್ಯ ಪಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರಿನ ಕಲಾಮಂದಿರದಲ್ಲಿ ಶನಿವಾರ ಮೈಸೂರು ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಗೆ ವಿಧ್ಯುಕ್ತ ಚಾಲನೆ ನೀಡಿ ಮಾತನಾಡಿದ ಅವರು, ಬಡ, ಮಧ್ಯಮ, ದೀನ–ದಲಿತ ಕುಟುಂಬಗಳು ಗ್ಯಾರಂಟಿ ಯೋಜನೆಗಳಿಂದ ಆರ್ಥಿಕ ಸ್ವಾವಲಂಬನೆ ಹೊಂದಬಹುದು. ಗ್ಯಾರಂಟಿ ಯೋಜನೆಗಳಿಂದ ಪ್ರತೀ ಕುಟುಂಬಕ್ಕೆ ವಾರ್ಷಿಕ 48 ಸಾವಿರದಿಂದ 60 ಸಾವಿರ ರೂ.ವರೆಗೆ ನೇರ ಸೌಲಭ್ಯ ದೊರೆಯಲಿದೆ. ಗ್ಯಾರಂಟಿ ಯೋಜನೆಯು ಜನರನ್ನು ಸೋಮಾರಿಗಳನ್ನಾಗಿ ಮಾಡುವ ಬೇಜವಾಬ್ದಾರಿ ಕಾರ್ಯಕ್ರಮಗಳಾಗದೆ ಜನರ ಬದುಕನ್ನು ಹಸನಾಗಿಸುವ ಯೋಜನೆಯಾಗಿದೆ ಎಂದು ಹೇಳಿದರು.

ಹಲವು ರೀತಿಯ ಆರ್ಥಿಕ ಸಂಕಷ್ಟ, ಸವಾಲುಗಳು ಎದುರಾದರೂ ರಾಜ್ಯ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುತ್ತಿದೆ. ಇದಕ್ಕಾಗಿ 52 ಸಾವಿರ ಕೋಟಿ ರೂಪಾಯಿ ಹಣ ಮೀಸಲಿಟ್ಟಿದ್ದು, ಎಂಟು ತಿಂಗಳ ಅವಧಿಯಲ್ಲಿ 32 ಸಾವಿರ ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದು ಡಾ.ಮಹದೇವಪ್ಪ ಅಂಕಿ ಅಂಶಗಳ ವಿವರ ನೀಡಿದರು.

ಏಷ್ಯಾ ಖಂಡದಲ್ಲೇ ಮೊದಲ ಬಾರಿಗೆ ವಿದ್ಯುಚ್ಛಕ್ತಿ ಉತ್ಪಾದಿಸಿದ ಭೂಮಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ವಿಶ್ವೇಶ್ವರಯ್ಯ ಅವರ ಸ್ಮರಣೆ ಮಾಡುತ್ತಾ ಗೃಹಜ್ಯೋತಿ ಯೋಜನೆಗೆ ಚಾಲನೆ ನೀಡಲಾಗಿದೆ. ಇದರಿಂದ ರಾಜ್ಯದ 142 ಕೋಟಿ ಕುಟುಂಬಗಳು ಇದರ ಉಪಯೋಗ ಪಡೆಯಲಿವೆ. ಮೈಸೂರು ಜಿಲ್ಲೆಯ ಜನರು ಒಂದು ತಿಂಗಳಿಗೆ 54.78 ಕೋಟಿ ರೂಪಾಯಿ ವಿದ್ಯುತ್ ಬಿಲ್ ಕಟ್ಟುವುದರಿಂದ ಮುಕ್ತರಾಗಬಹುದು. ವರ್ಷಕ್ಕೆ 657.96 ಕೋಟಿ ವಿದ್ಯುತ್ ಹಣ ಉಳಿತಾಯವಾಗಲಿದೆ ಎಂದು ಸಚಿವ ಡಾ.ಮಹದೇವಪ್ಪ ತಿಳಿಸಿದರು.

ವಿದ್ಯುತ್ ಬಿಲ್ ಭರಿಸಲಾಗದೆ ಬಹಳಷ್ಟು ಜನರು ಹೆಚ್ಚಾಗಿ ಲೈಟ್ ಹಾಕುತ್ತಿರಲಿಲ್ಲ. ಕತ್ತಲೆಯಲ್ಲೇ ಕಾಲ ಕಳೆಯುತ್ತಿದ್ದರು. ಆದರೆ ಈಗ 200 ಯೂನಿಟ್ ತನಕ ಹಣ ನೀಡದೆ ವಿದ್ಯುತ್ ಬಳಸಬಹುದು. ಇದರಿಂದ ಮನೆಗಳಲ್ಲಿ ಕತ್ತಲೆ ದೂರವಾಗಿ ಬೆಳಕು ಪಸರಿಸಿದೆ ಎಂದರು.

ಗ್ಯಾರಂಟಿ ಯೋಜನೆ ಘೋಷಣೆ ಮಾಡಿದಾಗ ಕೆಲವರು ಟೀಕೆ ಮಾಡಿದರು. ಇವರಿಗೆ ತಲೆ ಕೆಟ್ಟಿದೆಯಾ, ಅಷ್ಟು ಪ್ರಮಾಣದ ಹಣವನ್ನು ಉಚಿತವಾಗಿ ನೀಡಲು ಸಾಧ್ಯವೆ? ಎಂದು ಪ್ರಶ್ನೆ ಮಾಡಿದರು. ಆದರೆ ನುಡಿದಂತೆ ನಡೆದಿರುವ ಸರ್ಕಾರ ಹಲವು ಸವಾಲುಗಳನ್ನು ಮೆಟ್ಟಿನಿಂತು ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ. ಭಾರತದ ಯಾವ ರಾಜ್ಯದಲ್ಲೂ ಅನುಷ್ಠಾನಗೊಳಿಸಲು ಸಾಧ್ಯವಾಗದ ಯೋಜನೆಯನ್ನು ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಜಾರಿಗೊಳಿಸುತ್ತಿದೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗಾಗಿ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿರುವ ಉಳಿದ ಯೋಜನೆಗಳನ್ನು ಕೂಡ ಜಾರಿಗೊಳಿಸುತ್ತೇವೆ ಎಂದು ಡಾ.ಮಹದೇವಪ್ಪ ಭರವಸೆ ನೀಡಿದರು.

ಇದೇ ವೇಳೆ ಮಾತನಾಡಿದ ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ಗೃಹಜ್ಯೋತಿ ಯೋಜನೆಯಲ್ಲಿ ಜನರು ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಗಡುವು ಇಲ್ಲ. ಉಳಿದ ಶೇ.20ರಷ್ಟು ಜನರು ಆದಷ್ಟು ಬೇಗ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗೃಹಲಕ್ಷ್ಮಿ ಯೋಜನೆಗೆ ಆಗಸ್ಟ್ 15ರಂದು ಚಾಲನೆ ನೀಡಲಾಗುವುದು. ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆಗಳ ಬಗ್ಗೆ ಆರೋಪ, ಟೀಕೆ ಮಾಡುವವರಿಗೆ ನಾವು ಉತ್ತರ ಕೊಡುವುದಿಲ್ಲ. ಬಡವರು ಹಾಗೂ ಮಧ್ಯಮ ವರ್ಗದವರಿಗೆ ಇದರಿಂದ ಉಪಯೋಗ ಆಗಬೇಕು ಎಂಬುದಷ್ಟೇ ನಮ್ಮ ಉದ್ದೇಶ ಎಂದು ಸಚಿವ ವೆಂಕಟೇಶ್ ಸ್ಪಷ್ಟಪಡಿಸಿದರು.

ಗೃಹಜ್ಯೋತಿ ಯೋಜನೆ ಸೌಲಭ್ಯದಿಂದ ಗ್ರಾಹಕರು ಪಡೆದಿರುವ ಶೂನ್ಯ ವಿದ್ಯುತ್ ಬಿಲ್ ಅನ್ನು ಡಾ.ಮಹದೇವಪ್ಪ ಸಾಂಕೇತಿಕವಾಗಿ ಈ ಸಂದರ್ಭದಲ್ಲಿ ವಿತರಿಸಿದರು. ಸಮಾರಂಭದಲ್ಲಿ ಮೇಯರ್ ಶಿವಕುಮಾರ್, ಉಪಮೇಯರ್ ಡಾ.ಜಿ. ರೂಪ, ವಿಧಾನಸಭಾ ಸದಸ್ಯ ಡಿ.ರವಿಶಂಕರ್, ವಿಧಾನಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಸಿ.ಎನ್.ಮಂಜೇಗೌಡ, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶ್ರೀಧರ್, ಪ್ರಧಾನ ವ್ಯವಸ್ಥಾಪಕ ಪಿ.ರವಿಕುಮಾರ್, ಅಧೀಕ್ಷಕ ಅಭಿಯಂತರರಾದ ಎ.ಎ.ಸುನೀಲ್‌ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಕಲಾಮಂದಿರದಲ್ಲಿ ಗೃಹಜ್ಯೋತಿ ಯೋಜನೆಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿಧ್ಯುಕ್ತ ಚಾಲನೆ ನೀಡಿದರು.

ಗಂಡಸರೇ ಈಗ ಹೆಂಗಸರನ್ನು ಗೋಗರೆಯುವ ಪರಿಸ್ಥಿತಿ ಬಂದಿದೆ!

ಮೈಸೂರು, ಆ.5(ಬಿಎಲ್‌ಯು)– ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮಹಿಳೆಯರು ಉಚಿತ ಪ್ರಯಾಣ ಮಾಡುವ ಕಾಂಗ್ರೆಸ್ ಸರ್ಕಾರದ ಶಕ್ತಿ ಯೋಜನೆಯಿಂದ ಈಗ ಗಂಡಸರೇ ಮಹಿಳೆಯರನ್ನು ನಾನಾ ಕಾರಣಕ್ಕೆ ಗೋಗರೆಯುವ ಪರಿಸ್ಥಿತಿ ಎದುರಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಹೇಳಿದರು.

ಈ ಮೊದಲು ಬಸ್‌ಗಳಲ್ಲಿ ಗಂಡಸರು ಹೆಂಗಸರಿಗೆ ಕೀಟಲೆ ಮಾಡುತ್ತಿದ್ದರು. ಸೀಟ್ ಕೊಡದೆ ಸತಾಯಿಸುತ್ತಿದ್ದರು. ಆದರೆ ಈಗ ಶಕ್ತಿ ಯೋಜನೆಯಡಿ ಶೇ.50ರಷ್ಟು ಸೀಟ್‌ಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ. ಇದರಿಂದ ಸೀಟ್ ಕೊಡಿ ಎಂದು ಗಂಡಸರೇ ಹೆಂಗಸರನ್ನು ಗೋಗರೆಯುವ ಪರಿಸ್ಥಿತಿ ಬಂದಿದೆ ಎಂದರು.

ಬಹಳಷ್ಟು ಮಹಿಳೆಯರು ಪಕ್ಕದ ಊರು, ನೆಂಟರ ಮನೆ, ದೇವಸ್ಥಾನ ಸೇರಿದಂತೆ ಯಾವ ತೀರ್ಥಕ್ಷೇತ್ರಗಳ ಮುಖವನ್ನೇ ನೋಡಿರಲಿಲ್ಲ. ಆದರೆ ಈಗ ಸೀರೆ ಸೆರಗಿಗೆ 2 ಸಾವಿರ ರೂ. ಹಾಕಿಕೊಂಡು ತಮಗೆ ಇಷ್ಟ ಬಂದ ಕಡೆ ಹೋಗುತ್ತಿದ್ದಾರೆ. ಉಚಿತ ಪ್ರವಾಸ ಮಾಡಿ ಸಂತಸಗೊಳ್ಳುತ್ತಿದ್ದಾರೆ. ಜ್ಞಾನಾರ್ಜನೆಗೆ ದೇಶ ಸುತ್ತು, ಇಲ್ಲವೇ ಕೋಶ ಓದು ಅನ್ನೋ ಮಾತಿದೆ. ಆದರೆ ಈಗ ಮಹಿಳೆಯರು ಪ್ರವಾಸ ಮಾಡಿ ಸ್ಥಳಗಳ ಮಹತ್ವ ಅರಿಯುತ್ತಿದ್ದಾರೆ. ಈ ಮೂಲಕ ಜ್ಞಾನ ವೃದ್ಧಿ ಮಾಡಿಕೊಳ್ಳುತ್ತಿದ್ದಾರೆ ಎಂದರು.

ಆಗಸ್ಟ್ ತಿಂಗಳಿನಿಂದ ಫ್ರೀ ಕರೆಂಟ್ ಬಿಲ್

ಮೈಸೂರು ಜಿಲ್ಲೆಯಲ್ಲಿ ಒಟ್ಟು 9,78, 857 ವಿದ್ಯುತ್ ಗ್ರಾಹಕರಿದ್ದಾರೆ. ಇವರಲ್ಲಿ 7.80.428 ಮಂದಿ ಗೃಹಜ್ಯೋತಿ ಯೋಜನೆಯಲ್ಲಿ ಅರ್ಜಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಈ ಮೂಲಕ ಶೇ.79.73ರಷ್ಟು ಪ್ರಗತಿ ಸಾಧಿಸಲಾಗಿದೆ. ಉಳಿದಂತೆ 1,98,429 ಗ್ರಾಹಕರು ಅರ್ಜಿ ನೋಂದಣಿ ಮಾಡಿಸಿಕೊಳ್ಳಬೇಕಿದೆ. ಆ.15ರೊಳಗೆ ಶೇ.100ರಷ್ಟು ಅರ್ಜಿ ನೋಂದಣಿ ಮಾಡುವ ಗುರಿಯನ್ನು ಚೆಸ್ಕಾಂ ಹೊಂದಿದೆ.

ಮೈಸೂರು ಜಿಲ್ಲೆಯಲ್ಲಿ ಸಾಲಿಗ್ರಾಮ ತಾಲೂಕಿನ ಗ್ರಾಹಕರು ಅತೀ ಹೆಚ್ಚಾಗಿ ಅರ್ಜಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಸಾಲಿಗ್ರಾಮ ತಾಲೂಕಿನ ಶೇ.89.57ರಷ್ಟು ಗ್ರಾಹಕರು ಅಂದರೆ 25,081 ಗ್ರಾಹಕರು ಅರ್ಜಿ ನೋಂದಣಿ ಮಾಡಿಸಿಕೊಂಡಿದ್ದಾರೆ.

ರಾಜ್ಯ ಸರ್ಕಾರದ ಸೇವಾ ಸಿಂಧು ಪೋರ್ಟಲ್ ಅಥವಾ ಚೆಸ್ಕಾಂ ಶಾಖೆಗಳಲ್ಲಿ ನೋಂದಣಿ ಮಾಡಿಸಿಕೊಳ್ಳಬಹುದು. ಮೈಸೂರು ಒನ್, ಕರ್ನಾಟಕ ಒನ್, ಗ್ರಾಮಗಳಲ್ಲಿ ಗ್ರಾಮ ಒನ್, ನಾಡ ಕಚೇರಿ, ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ನೋಂದಣಿ ಮಾಡಿಸಿಕೊಳ್ಳಬಹುದು. ಜು.27ರೊಳಗೆ ನೋಂದಣಿಯಾದ ಗ್ರಾಹಕರಿಗೆ ಜು.1ರಿಂದ ಬಳಸಿದ ವಿದ್ಯುತ್ ಉಚಿತವಾಗಿ ದೊರೆಯಲಿದೆ. ಆ.1ರಿಂದ ವಿತರಣೆಯಾಗುವ ಬಿಲ್‌ಗಳಲ್ಲಿ ಯೋಜನೆಯ ರಿಯಾಯಿತಿ ದೊರೆಯಲಿದೆ.

ನಿಧನ



ಕೆ.ಪಿ.ವೀಣಾ

ಮೈಸೂರು, ಆ. 5– ಮೈಸೂರಿನ ಕನ್ನಡಿಗರ 'ಪ್ರಜಾನುಡಿ' ಪತ್ರಿಕೆ ಸಂಪಾದಕ ವೀರಭದ್ರಪ್ಪ ಬಿಸ್ಲಳ್ಳಿ ಅವರ ಪತ್ನಿ ಕೆ.ಪಿ.ವೀಣಾ (47) ಶುಕ್ರವಾರ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ವೃತ್ತಿಯಲ್ಲಿ ವಕೀಲರಾದ ಇವರು, ಪತಿ, ಓರ್ವ ಪುತ್ರ ಆಶಿಕ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಬೆಂಗಳೂರಿನ ಬನಶಂಕರಿಯಲ್ಲಿರುವ ರುದ್ರಭೂಮಿಯಲ್ಲಿ ಶನಿವಾರ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಮೇರಿ ತಂಪಿ

ಮೈಸೂರಿನ ಮೇಟಗಳ್ಳಿ ನಿವಾಸಿ ದಿವಂಗತ ಎಂ.ಸಿ.ತಂಪಿ ಅವರ ಪತ್ನಿ ಮೇರಿ ತಂಪಿ (89) ಶನಿವಾರ ನಿಧನರಾದರು.

ಮೃತರು ಪುತ್ರ ಎಂ.ಡಿ.ಅಬ್ರಾಹಂ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ನಜರ್‌ಬಾದ್‌ನಲ್ಲಿರುವ ಸೇಂಟ್ ಗ್ರೇಗೋರಿಯಸ್ ಸಿರಿಯನ್ ಚರ್ಚ್‌ನಲ್ಲಿ ಸೋಮವಾರ ಮಧ್ಯಾಹ್ನ 2.15ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ತಿಲೋತ್ತಮ ಜಿ.ಭಟ್

ಕರ್ನಾಟಕ ಯಕ್ಷಗಾನ ಅಕಾಡೆಮಿ ಮಾಜಿ ಸದಸ್ಯ ಹಿರಿಯ ಲೇಖಕ ಜಿ.ಎಸ್. ಭಟ್ಟ ಅವರ ಪತ್ನಿ ತಿಲೋತ್ತಮ ಜಿ.ಭಟ್ (75) ಶುಕ್ರವಾರ ನಿಧನರಾದರು. ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ಬಳಿಯ ನಿವಾಸಿಯಾಗಿದ್ದ ಅವರು ಮೈಸೂರು ತಾ. ದೇವಲಾಪುರ ಪ್ರೌಢಶಾಲಾ ಸಹ ಶಿಕ್ಷಕಿಯಾಗಿ ನಿವೃತ್ತರಾಗಿದ್ದರು. ಮೃತರಿಗೆ ಪತಿ ಜಿ.ಎಸ್.ಭಟ್ಟ, ಪುತ್ರ ಡಾ.ರಾಜೀವ್ ಭಟ್, ಪುತ್ರಿ ನೀತಾ ಡಾ.ಶ್ರೀಧರ ಹೆಗಡೆ ಇದ್ದಾರೆ. ವಿಜಯನಗರ ಚಿರಶಾಂತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.



ರಾಚಪ್ಪ ಸ್ವಾಮಿ

ಮೈಸೂರಿನ ಗಾಯತ್ರಿಪುರಂ ನಿವಾಸಿ ರಾಚಪ್ಪ ಸ್ವಾಮಿ(ರಾಜು–59) ಅವರು ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕೆಸರೆಯ ವೀರಶೈವ ರುದ್ರಭೂಮಿಯಲ್ಲಿ ಭಾನುವಾರ ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಪತ್ರಕರ್ತರಿಗೆ ಆಧಾರ್ ಅಪ್‌ಡೇಟ್ ಪ್ರಕ್ರಿಯೆ ಆರಂಭ



ಮೈಸೂರು,ಆ.5(ಆರ್‌ಕೆ)–ಮೈಸೂರಿನ ತ್ಯಾಗರಾಜ ರಸ್ತೆಯ ಅಕ್ಕನ ಬಳಗದ ಬಳಿ ಇರುವ ಪತ್ರಕರ್ತರ ಭವನದಲ್ಲಿ ಇಂದಿನಿಂದ ಎರಡು ದಿನಗಳ ಕಾಲ ಪತ್ರಕರ್ತರು ಹಾಗೂ ಕುಟುಂಬದವರ ಆಧಾರ್ ಅಪ್‌ಡೇಟ್ ಕಾರ್ಯಕ್ರಮ ಆರಂಭವಾಯಿತು.


ಮೈಸೂರು ಜಿಲ್ಲಾ ಪತ್ರಕರ್ತರ ಸಂಘ (ಎಂಡಿಜೆಎ)ವು ಆಧಾರ್ ಸೇವಾ ಕೇಂದ್ರಗಳ ಸಹಯೋಗದಲ್ಲಿ ಆಯೋಜಿಸಿರುವ ಕಾರ್ಯಕ್ರಮವನ್ನು ಎಂಡಿಜೆಎ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಉದ್ಘಾಟಿಸಿದರು. ಇಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ನಡೆದ ಪ್ರಕ್ರಿಯೆಯಲ್ಲಿ 75 ಮಂದಿ ಪತ್ರಕರ್ತರು ಹಾಗೂ ಕುಟುಂಬ ಸದಸ್ಯರ ಆಧಾರ್ ಕಾರ್ಡ್‌ನಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಅಪ್‌ಡೇಟ್ ಮಾಡಲಾಯಿತು.

18 ವರ್ಷದೊಳಗಿನವರಿಗೆ ಆಧಾರ್ ನೋಂದಣಿ, ಮೇಲ್ಪಟ್ಟವರ ಹೆಸರು, ವಿಳಾಸ ತಿದ್ದುಪಡಿ, ವಿಳಾಸ ಬದಲಾವಣೆ, ಆಧಾರ್ ಜೋಡಣೆಯಂತಹ ಲೋಪದೋಷಗಳನ್ನು ಸರಿಪಡಿಸುವ ಕಾರ್ಯ ನಡೆಯುತ್ತಿದ್ದು, ನಾಳೆ (ಆ. 6)ಯೂ ಸಂಜೆ 4 ಗಂಟೆವರೆಗೆ ಆಧಾರ್ ಅಪ್‌ಡೇಟ್ ಪ್ರಕ್ರಿಯೆ ನಡೆಯಲಿದ್ದು, 5 ಗ್ಯಾರಂಟಿಗಳೂ ಸೇರಿದಂತೆ ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಆಧಾರ್ ಸಂಖ್ಯೆ ಅಪ್‌ಡೇಟ್ ಮಾಡಿಕೊಳ್ಳುವುದು ಅಗತ್ಯವಾಗಿರುವ ಕಾರಣ ಪತ್ರಕರ್ತರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳುವಂತೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ರವಿಕುಮಾರ್ ತಿಳಿಸಿದ್ದಾರೆ.

ಆಧಾರ್ ಸೇವಾ ಕೇಂದ್ರಗಳ ವ್ಯವಸ್ಥಾಪಕರಾದ ಕೃಷ್ಣಪ್ರಸಾದ್, ಜ್ಞಾನೇಶ್‌ಬಾಬು, ಜಿಲ್ಲಾ ಪತ್ರಕರ್ತರ ಸಂಘದ ಎಂ.ಸುಬ್ರಹ್ಮಣ್ಯ, ರಂಗಸ್ವಾಮಿ, ಬಿ. ರಾಘವೇಂದ್ರ, ಶಿವಮೂರ್ತಿ ಜುಪ್ತಿಮಠ ಸೇರಿದಂತೆ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ಇಬ್ಬರು ಸತ್ಯಹರಿಶ್ಚಂದ್ರರಿದ್ದಾರೆ ಒಬ್ಬರು ಕುಮಾರಸ್ವಾಮಿ, ಮತ್ತೊಬ್ಬರು ಬಸವರಾಜ ಬೊಮ್ಮಾಯಿ!!

ಎಂಎಲ್‌ಸಿ ವಿಶ್ವನಾಥ್ ವ್ಯಂಗ್ಯ




ಮೈಸೂರು, ಆ.5(ಬಿಎಲ್‌ಯು)– ಪುರಾಣ ಪುಣ್ಯಕತೆಯ ಸತ್ಯಹರಿಶ್ಚಂದ್ರ ಸತ್ತ ಮೇಲೆ ಕರ್ನಾಟಕದಲ್ಲಿ ಇಬ್ಬರು ಸತ್ಯಹರಿಶ್ಚಂದ್ರರು ಇದ್ದಾರೆ. ಒಬ್ಬರು ಹೆಚ್.ಡಿ.ಕುಮಾರಸ್ವಾಮಿ! ಮತ್ತೊಬ್ಬರು ಬಸವರಾಜ ಬೊಮ್ಮಾಯಿ. ಇದು ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರ ಪ್ರತಿಪಾದನೆ.

ಮೈಸೂರಿನಲ್ಲಿ ಪತ್ರಕರ್ತರ ಜೊತೆ ಮಾತನಾಡಿದ ಅವರು, ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಅವರಿಬ್ಬರು ಮುಖ್ಯಮಂತ್ರಿ ಆಗಿದ್ದವರು. ಇವರಿಬ್ಬರು ಆಗ ಮಾಡಿದ ಅಧ್ವಾನಗಳನ್ನು ರಾಜ್ಯದ ಜನತೆ ಈಗಲೂ ಅನುಭವಿಸುತ್ತಿದ್ದಾರೆ ಎಂದು ಕಿಡಿಕಾರಿದರು. ಪೆನ್‌ಡ್ರೈವ್ ಏನಾಯಿತು ಎಂದು ಕುಮಾರಸ್ವಾಮಿ ಈಗಲಾದರೂ ಹೇಳಬೇಕು. ಬಾಯಿಗೆ ಬಂದಂತೆ ಮಾತನಾಡುತ್ತಾ, ಆಧಾರ ರಹಿತ ಆರೋಪ ಮಾಡುವುದು ಸರಿಯಲ್ಲ. ಹೀಗೆಲ್ಲಾ ಮಾತನಾಡಿ ನಿಮ್ಮ ಘನತೆ ಕಡಿಮೆ ಮಾಡಿಕೊಳ್ಳಬೇಡಿ ಎಂದು ವಿಶ್ವನಾಥ್ ಸಲಹೆ ನೀಡಿದರು.

7 ಸಚಿವರು ಕುಮಾರಸ್ವಾಮಿ ಕುಟುಂಬಸ್ಥರು: ನಾನು ಕೂಡ ಜೆಡಿಎಸ್ ರಾಜ್ಯಾಧ್ಯಕ್ಷನಾಗಿದ್ದೆ. ಸಮ್ಮಿಶ್ರ ಸರ್ಕಾರದಲ್ಲಿ ಜೆಡಿಎಸ್ ಪಾಲಿಗೆ 12 ಸಚಿವ ಸ್ಥಾನ ದೊರೆತ್ತಿತ್ತು. ಆದರೆ 7 ಸಚಿವರು ಹೆಚ್.ಡಿ.ಕುಮಾರಸ್ವಾಮಿ ಅವರ ಕುಟುಂಬಸ್ಥರೇ ಆಗಿದ್ದರು. ಬಂಡೆಪ್ಪ ಕಾಶಂಪೂರ್ ಒಬ್ಬ ಕುರುಬ ಬಿಟ್ಟರೆ ಇನ್ನಿಬ್ಬರು ಲಿಂಗಾಯಿತರಿದ್ದರು. ಎರಡು ಸಚಿವ ಸ್ಥಾನ ಖಾಲಿ ಇದ್ದರೂ ದಲಿತರು ಹಾಗೂ ಮುಸ್ಲಿಂರಿಗೆ ಕೊಡಲಿಲ್ಲ. ಇಂತಹವರು ಈಗ ದಲಿತರ ಉದ್ಧಾರದ ಬಗ್ಗೆ ಮಾತನಾಡುತ್ತಾರೆ. ಒಟ್ಟಾರೆ ಹೇಳುವುದಾದರೆ ಬಿಜೆಪಿ ಹಾಗೂ ಜೆಡಿಎಸ್ ಎರಡು ಪಕ್ಷದವರು ದಲಿತ ವಿರೋಧಿಗಳೇ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.

ಎಂಪಿಗೆ ನಾನು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ: ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ನಾನು ಕೂಡ ಕಾಂಗ್ರೆಸ್ ಪಕ್ಷದ ಟಿಕೆಟ್ ಆಕಾಂಕ್ಷಿ. ಟಿಕೆಟ್ ಕೇಳೋಣ ಎಂದು ನಿರ್ಧಾರ ಮಾಡಿದ್ದೇನೆ. ಆದರೆ ಮುಂದಿನ ದಿನದಲ್ಲಿ ಏನಾಗುತ್ತದೆಯೋ ಕಾದು ನೋಡೋಣ ಎಂದರು. ಮೈಸೂರು–ಕೊಡಗು ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಪಕ್ಷದಿಂದ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೆಸರು ಕೂಡ ಪ್ರಸ್ತಾಪವಿದೆ. ಇದು ಒಳ್ಳೆಯದೆ. ಆದರೆ ಅಂತಿಮವಾಗಿ ಕಾಂಗ್ರೆಸ್ ಹೈಕಮಾಂಡ್ ಯಾವ ತೀರ್ಮಾನ ಕೈಗೊಳ್ಳುತ್ತದೆಯೋ ಎಂದು ಕಾದು ನೋಡಬೇಕಿದೆ ಎಂದು ವಿಶ್ವನಾಥ್ ಹೇಳಿದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ನಾನು ಒಳ್ಳೆಯ ಸ್ನೇಹಿತರು. ಅವರನ್ನು ಭೇಟಿ ಮಾಡುವುದು ತಪ್ಪೇ ಎಂದು ಪ್ರಶ್ನಿಸಿದರು. ಗ್ಯಾರಂಟಿ ಯೋಜನೆಗಳಿಗಾಗಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಹಣವನ್ನು ಬಳಸಿಕೊಂಡಿರುವ ರಾಜ್ಯ ಸರ್ಕಾರದ ಕ್ರಮವನ್ನು ಇದೇ ವೇಳೆ ವಿಶ್ವನಾಥ್ ಸಮರ್ಥಿಸಿಕೊಂಡರು. ಅಗತ್ಯ ಇರುವ ಕಡೆ ಅನುದಾನ ಬಳಸಿಕೊಳ್ಳಲು ಸರ್ಕಾರಕ್ಕೆ ಅಧಿಕಾರವಿದೆ. ಆದರೆ ಜೆಡಿಎಸ್ ಹಾಗೂ ಬಿಜೆಪಿಯವರು ಇದನ್ನೇ ದೊಡ್ಡ ವಿವಾದವಾಗಿ ಬಿಂಬಿಸಿ ಬೊಬ್ಬೆ ಹೊಡೆಯುತ್ತಿದ್ದಾರೆ ಎಂದು ವಿಶ್ವನಾಥ್ ಆಕ್ರೋಶ ವ್ಯಕ್ತಪಡಿಸಿದರು.


ಮನುಷ್ಯ ಚಿರಂಜೀವಿಯಾಗಲಾರ
ಆದರೆ ಆತನ ಚಿಂತನೆಗಳು
ಶಾಶ್ವತವಾಗಿ ಉಳಿಯುತ್ತವೆ.
–ಡಾ. ಬಾಬಾ ಸಾಹೇಬ್ ಅಂಬೇಡ್ಕರ್
ರಾಷ್ಟ್ರ ರಾಜಕಾರಣದ ಸಂಸತ್ತಿನ ಹಿರಿಯ ರಾಜಕಾರಣಿ, ದಲಿತ ರಾಜಕಾರಣದ ಹೆಗ್ಗುರುತು ಹಾಗೂ ಚಾಮರಾಜನಗರ ಲೋಕಸಭಾ ಸದಸ್ಯರಾದ
ಶ್ರೀ ವಿ. ಶ್ರೀನಿವಾಸಪ್ರಸಾದ್ ಅವರಿಗೆ
77ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ಶುಭ ಕೋರುವವರು :- ಬಿ.ಹರ್ಷವರ್ಧನ್ ಮಾಜಿ ಶಾಸಕರು, ನಂಜನಗೂಡು ಕ್ಷೇತ್ರ
Design@maheshprints : 8904224836

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ... ಕೆಲಸದವಳ ಹತ್ತಿರ ಏನಾದರೂ ತರ್ಲೆ ಮಾಡಿದ್ರಾ...?
ಗಂಡ : ಯಾಕೆ... ಏನಾಯ್ತು...?
ಹೆಂಡತಿ : ಇಷ್ಟು ದಿನ 'ಅಮ್ಮ' ಎಂದು ಕರೆಯುತ್ತಿದ್ದವಳು... ಈಗ 'ಅಕ್ಕ' ಎಂದು ಕರೆಯುತ್ತಿದ್ದಾಳೆ...!!

ಮೈಸೂರು ಮಿತ್ರ

ಭಾನುವಾರ, 6 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸತ್ಯದ ಪರೀಕ್ಷೆ ಸುಖದಲ್ಲಿಲ್ಲ, ದುಃಖದಲ್ಲಿದೆ. – ಲೋಕೋಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಗಳು ಒಳ್ಳೆಯವಳಾದರೆ ಬೀಗರೂ ಒಳ್ಳೆಯವರು

ನಿಮ್ಮ ಪತ್ರಗಳು

ಮದ್ರಾಸ್ ಐ ಬಗ್ಗೆ ಇಲಾಖೆ ಎಚ್ಚರಿಕೆ ವಹಿಸಲಿ

ಮಾನ್ಯರೆ,

ಶಾಲಾ–ಕಾಲೇಜು ಮತ್ತು ವಸತಿ ನಿಲಯ ವಿದ್ಯಾರ್ಥಿಗಳಲ್ಲಿ ಮದ್ರಾಸ್ ಐ ತಡೆಗೆ ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

ಈಗಾಗಲೇ ರಾಜ್ಯದ ಕೆಲ ಶಾಲಾ–ಕಾಲೇಜು ಮತ್ತು ವಸತಿ ನಿಲಯದ ಮಕ್ಕಳಿಗೆ ಕಣ್ಣಿನ ಸೋಂಕು ಆವರಿಸಿಕೊಂಡಿದೆ. ಇದರಿಂದಾಗಿ ಸಾಕಷ್ಟು ತೊಂದರೆ ಅನುಭವಿಸುವಂತಾಗಿದೆ. ಆರೋಗ್ಯ ಇಲಾಖೆ ಇದನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ಆರೋಗ್ಯ ಇಲಾಖೆಯು ಎಲ್ಲ ಕಡೆ ತಪಾಸಣೆ ಮಾಡಿಸಬೇಕು. ನಿರ್ಲಕ್ಷ್ಯ ಮಾಡಿದರೆ ವ್ಯತಿರಿಕ್ತ ಪರಿಣಾಮ ಬೀರುವ ಸಾಧ್ಯತೆ ಇದೆ.

ಮದ್ರಾಸ್ ಐ ಆವರಿಸಿಕೊಂಡರೆ ಮೂರ್‍ನಾಲ್ಕು ದಿನಗಳ ಕಾಲ ಶಾಲೆಗೆ ಹೋಗದಂತೆ ವೈದ್ಯರು ಸಲಹೆ ನೀಡುತ್ತಾರೆ. ಇದು ಕಲಿಕೆಯ ಮೇಲೆ ಪರಿಣಾಮ ಬೀರುತ್ತದೆ. ಹೀಗಾಗಿಯೇ ಬಹಳ ಎಚ್ಚರಿಕೆ ವಹಿಸುವುದು ಇಲಾಖೆಯ ಜವಾಬ್ದಾರಿ. ಹೀಗಾಗಿಯೇ ಡಿಎಚ್‌ಒ ಅವರು ಇದನ್ನು ಸಮರ್ಥವಾಗಿ ನಿಭಾಯಿಸಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲೂಕು ಮತ್ತು ಜಿಲ್ಲಾಸ್ಪತ್ರೆಯ ವೈದ್ಯರನ್ನು ಬಳಸಿಕೊಂಡು ಮದ್ರಾಸ್ ಐ ಹರಡದಂತೆ ಎಚ್ಚರಿಕೆ ವಹಿಸಬೇಕಿದೆ. ವಿಶೇಷವಾಗಿ ಶಾಲಾ ಕಾಲೇಜು ಮತ್ತು ವಸತಿ ನಿಲಯಗಳ ಮಕ್ಕಳ ಆರೋಗ್ಯ ಕಾಪಾಡುವುದು ಪ್ರಮುಖ ಜವಾಬ್ದಾರಿ ಸಹ ಆಗಿದೆ. ಇದನ್ನು ಗಂಭೀರವಾಗಿ ಪರಿಗಣಿಸಬೇಕು.

–ಹೇಮಾ ನಂದೀಶ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ, ಮೈಸೂರು.

ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ಒಂದೇ ದರ ನಿಗದಿಯಾಗಲಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಖಾಸಗಿ ಆಸ್ಪತ್ರೆಗಳು ದೇಶದಲ್ಲಿ ಹೆಚ್ಚಾಗಿದ್ದು, ಪ್ರತಿನಿತ್ಯ ದೇಶದಾದ್ಯಂತ ಕೋಟಿಗೂ ಹೆಚ್ಚಿನ ಸಂಖ್ಯೆಯಲ್ಲಿ ಬಡವರು, ಮಧ್ಯಮ ವರ್ಗದವರು, ಮಹಿಳೆಯರು, ಕೂಲಿ ಕಾರ್ಮಿಕರು ಹಾಗೂ ಶಾಲಾ–ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಇತರ ಸಾರ್ವಜನಿಕರು ವಿವಿಧ ರೀತಿಯ ಕಾಯಿಲೆಗೆ ತುತ್ತಾಗಿ ಆಸ್ಪತ್ರೆಗಳಿಗೆ ದಾಖಲಾಗುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಇದನ್ನೇ ಬಂಡವಾಳ ಮಾಡಿಕೊಂಡು ವಿವಿಧ ಕಾಯಿಲೆಗೆ ಮತ್ತು ವಿವಿಧ ರೀತಿಯ ಸೌಲಭ್ಯಗಳಿಗೆ ಹಾಗೂ ಜನರಲ್ ವಾರ್ಡ್, ಡಿಲಕ್ಸ್ ವಾರ್ಡ್, ಸೆಮಿ ವಾರ್ಡ್ ಎಂದು ರೋಗಿಗಳು ಮಲಗುವ ಸ್ಥಳಗಳಿಗೂ ಸೇರಿ ವಿವಿಧ ರೀತಿಯ ದರಗಳನ್ನು ನಿಗದಿಪಡಿಸಿದ್ದಾರೆ. ಹಣವಿರುವವರು ಮಾತ್ರ ಇಂತಹ ಆಸ್ಪತ್ರೆಗಳಲ್ಲಿ ಸೌಲಭ್ಯ ಪಡೆಯುತ್ತಾರೆ. ಆದರೆ ಕಡಿಮೆ ಹಣದಲ್ಲಿ ಜೀವನ ನಡೆಸುವ ಸಾರ್ವಜನಿಕರಿಗೆ ಇಂತಹ ಆಸ್ಪತ್ರೆಯಲ್ಲಿ ಸೌಲಭ್ಯ ಸಿಗುವುದಿಲ್ಲ. ಹಣದ ಸಮಸ್ಯೆಯನ್ನು ಎದುರಿಸುತ್ತಿರುವ ಸಾರ್ವಜನಿಕರು ಖಾಸಗಿ ಆಸ್ಪತ್ರೆಯ ಮತ್ತು ಖಾಸಗಿ ವೈದ್ಯರನ್ನು ದೂರುತ್ತಿದ್ದಾರೆ. ಕೂಡಲೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೂಡಲೇ ಖಾಸಗಿ ಆಸ್ಪತ್ರೆಗಳ ವೈದ್ಯಕೀಯ ಅಧಿಕಾರಿಗಳ ಸಭೆ ಕರೆದು ಎಲ್ಲಾ ಖಾಸಗಿ ಆಸ್ಪತ್ರೆಯಲ್ಲಿ ಒಂದೇ ರೀತಿಯ ದರಗಳನ್ನು ನಿಗದಿಪಡಿಸಿ ಎಲ್ಲಾ ವರ್ಗದ ರೋಗಿಗಳಿಗೂ ಇಂತಹ ಖಾಸಗಿ ಆಸ್ಪತ್ರೆಗಳ ಸೌಲಭ್ಯಗಳು ದೊರೆಯುವಂತೆ ಕ್ರಮ ಕೈಗೊಳ್ಳಬೇಕು.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ಮಲ್ಲಿಕಾರ್ಜುನ ಖರ್ಗೆ ಚಾ.ನಗರದಿಂದ ಸ್ಪರ್ಧಿಸಿ ಮಾದರಿಯಾಗಲಿ

ಮಾನ್ಯರೆ,

2024ರ ಲೋಕಸಭಾ ಚುನಾವಣೆಗೆ ಈಗಾಗಲೇ ಅಭ್ಯರ್ಥಿಗಳ ಆಯ್ಕೆ ಕುರಿತು ಎಲ್ಲಾ ಪಕ್ಷಗಳಲ್ಲಿ ರಣತಂತ್ರ ನಡೆಯುತ್ತಿದೆ. ಮುತ್ಸದ್ಧಿ ಹಿರಿಯ ರಾಜಕಾರಣಿ ಸದ್ಯ ಎಐಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿರುವ ಮಲ್ಲಿಕಾರ್ಜುನ ಖರ್ಗೆ ಈ ಬಾರಿ ಚಾಮರಾಜನಗರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಮಾದರಿ ಆಗಬಹುದಲ್ಲವೇ.

ಈ ಊರಿಗೆ ಕಾಲಿಟ್ಟರೆ ಅಧಿಕಾರ ಕಳೆದು ಹೋಗುತ್ತದೆ ಎಂದು ಹಿಂದೇಟು ಹಾಕುವ ಬಹುತೇಕ ನಾಯಕರುಗಳ ಮೌಢ್ಯಕ್ಕೆ ಇವರು ತಾವು ನಂಬಿರುವ ಬುದ್ಧ, ಬಸವ, ಅಂಬೇಡ್ಕರ್ ಸಿದ್ಧಾಂತದ ಮೂಲಕ ಸ್ಪರ್ಧಿಸಿ ಸೆಡ್ಡು ಹೊಡೆಯಬಹುದು. ಹೈದರಾಬಾದ್–ಕರ್ನಾಟಕ ಸಮಗ್ರ ಕಲ್ಯಾಣದ ಅಭಿವೃದ್ಧಿಗೆ ಆರ್ಟಿಕಲ್ 371ಜೆ ವಿಶೇಷ ಸ್ಥಾನಮಾನ ಜಾರಿಯಲ್ಲಿ ಮಹತ್ತರ ಪಾತ್ರ ವಹಿಸಿದಂತೆ ಇಲ್ಲಿಂದ ಆಯ್ಕೆಯಾಗಿ ಹಿಂದುಳಿದ ಗಡಿನಾಡು ಚಾಮರಾಜನಗರ ಜಿಲ್ಲೆಗೆ ತಮ್ಮ ಅಪಾರ ಅನುಭವ ಹಾಗೂ ದಕ್ಷ ಆಡಳಿತದ ವರ್ಚಸ್ಸಿನಿಂದ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಮಗ್ರ ಯೋಜನೆಗಳನ್ನು ಕ್ಷೇತ್ರಕ್ಕೆ ತಂದು ಸಮರ್ಪಕವಾಗಿ ಜಾರಿಗೊಳಿಸಿ ರಾಷ್ಟ್ರದಲ್ಲೇ ಗಮನ ಸೆಳೆಯುವ ರೀತಿ ಅಭಿವೃದ್ಧಿಪಡಿಸಬಹುದು. ಈ ಮುನ್ನ ಈ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದ ಧ್ರುವನಾರಾಯಣ ಅಕಾಲಿಕ ಮರಣದಿಂದ ಸೂಕ್ತ ಅಭ್ಯರ್ಥಿ ಸಿಗದೇ ಬಡವಾಗಿರುವ ಈ ಜಿಲ್ಲೆಗೆ ಖರ್ಗೆ ಸ್ಪರ್ಧಿಸುವ ಮೂಲಕ ಜನಮಾನಸದಲ್ಲಿ ಚೈತನ್ಯ ತುಂಬಿದ್ದೇ ಆದರೆ ಅದು ಸಾರ್ವಕಾಲಿಕವಾಗಿ ಶಾಶ್ವತವಾಗಿ ಉಳಿಯುತ್ತದೆ.

– ಅನಿಲ್ ಕುಮಾರ್, ನಂಜನಗೂಡು.

ಸುತ್ತೂರು ಶ್ರೀಗಳಿಂದ ದಸರಾ ಉದ್ಘಾಟನೆಯಾಗಲಿ

ಮಾನ್ಯರೆ,

ಈ ಬಾರಿಯ ವಿಶ್ವ ವಿಖ್ಯಾತ ಮೈಸೂರು ದಸರಾವನ್ನು ಅದ್ಧೂರಿಯಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾ ಶಾಸಕರು ಮತ್ತು ಸ್ಥಳೀಯ ಜನಪ್ರತಿನಿಧಿಗಳು ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ತೀರ್ಮಾನ ಕೈಗೊಂಡಿದ್ದಾರೆ. ಈ ಬಾರಿಯ ದಸರಾಗೆ ನೀವು ಕೇಳಿದಷ್ಟು (ಜಿಲ್ಲಾಡಳಿತ) ಹಣ ಬಿಡುಗಡೆ ಮಾಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದಾರೆ. ಎಲ್ಲವೂ ಹೊಸತನದಿಂದ ಕೂಡಿರಲಿ. ನವೀನ ರೀತಿಯಲ್ಲಿ ವಿದ್ಯುತ್ ದೀಪಾಲಂಕಾರವಿರಲಿ. ಎಲ್ಲಕ್ಕಿಂತ ಮುಖ್ಯವಾಗಿ ಸ್ಥಳೀಯ ಯುವ ಕಲಾವಿದರಿಗೆ ಹೆಚ್ಚಿನ ಅವಕಾಶ ನೀಡಬೇಕು ಎಂಬ ಸಲಹೆ ನೀಡಿದ್ದಾರೆ.

ಈ ಬಾರಿಯ ಮೈಸೂರಿನ ದಸರಾ ಉತ್ಸವವೂ ಸಹ ಸ್ಥಳೀಯ ಜನಪ್ರಿಯ ಸ್ವಾಮೀಜಿಗಳಾದ ಸುತ್ತೂರು ಶ್ರೀಗಳಿಂದ ಉದ್ಘಾಟನೆಯಾಗಲಿ. ಈಗಾಗಲೇ ಹಲವು ಜನಪ್ರತಿನಿಧಿಗಳು ಸೇರಿದಂತೆ ಸ್ಥಳೀಯ ಶಾಸಕ ಶ್ರೀವತ್ಸ ಅವರು ಸಹ ಶ್ರೀಗಳ ಹೆಸರನ್ನು ಸೂಚಿಸಿರುವುದರಿಂದ ಸುತ್ತೂರು ಶ್ರೀಗಳಿಂದಲೇ ಈ ಬಾರಿಯ ದಸರಾ ಮಹೋತ್ಸವ ಉದ್ಘಾಟನೆಯಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು,
ರಾಮಕೃಷ್ಣ ವಿದ್ಯಾಶಾಲೆ,
ಮೈಸೂರು. ಮೊ.: 9036389640

ಈ ಜೀವನ...

ಮದುವೆ ಅನಿವಾರ್ಯವೋ... ಅವಶ್ಯಕವೋ...!

ಅಬ್ಬಾ, ಅಂತೂ ನಮ್ಮ ಸಿಂಧುಗೆ ಒಳ್ಳೆಯ ವರ ಸಿಕ್ಕ ಕಣ್ರಿ ಅವಳ ಮದುವೆ ನಿಶ್ಚಯ ಆಯಿತು , ಇನ್ನೆರಡು ತಿಂಗಳಲ್ಲೇ ಮದುವೆ. ಬೇಗ ಬೇಗ ಮದುವೆ ಕಾರ್ಯಗಳನ್ನು ನಡೆಸಬೇಕು. ಎಲ್ಲಾ ಬೇಗ ಬೇಗನೆ ಆಯಿತು ಕಣ್ರಿ ! ಆದರೆ ಇವತ್ತಿನ ಕಾಲದಲ್ಲಿ ಒಬ್ಬ ಒಳ್ಳೆಯ ಹುಡುಗನನ್ನು ಹುಡುಕುವಷ್ಟರಲ್ಲಿ ಸಾಕು ಸಾಕಾಯಿತು ಅನ್ನಿ !! ನಮ್ಮ ಮನೆಯ ಎದುರು ಇರುವ ಕಮಲಮ್ಮ ತನ್ನ ಮಗಳ ಮದುವೆ ನಿಶ್ಚಯದ ಬಗ್ಗೆ ಶಾಂತಮ್ಮನ ಜೊತೆಗೆ ಆಡುತ್ತಿದ್ದ ಮಾತುಗಳಿವು.

ಲೋ ರಮೇಶ, ನಿನಗೆ ಇನ್ನೂ ಒಂದು ಹುಡುಗಿ ಸಿಕ್ಕಿಲ್ಲ, ಇನ್ನು ಯಾವ ಜನ್ಮದಲ್ಲಿ ನಿನಗೆ ಮದುವೆ ಆಗುತ್ತೋ ಆ ದೇವರೇ ಬಲ್ಲ ....!! ಮೂವತ್ತು ವರ್ಷ ಆಯಿತು. ಇನ್ನೂ ನಿನ್ನ ಮದುವೆ ಆಗಿಲ್ಲ. ಎಲ್ಲಿಂದ ಹುಡುಗಿ ಹುಡುಕೋದಪ್ಪ? ನಿನಗೆ ಅಂತ ಒಂದು ಹುಡುಗಿನಾ ಆ ಬ್ರಹ್ಮ ಸೃಷ್ಟಿನೇ ಮಾಡಿಲ್ಲ ಅನ್ನಿಸುತ್ತದೆ. ಎಲ್ಲಾ ನನ್ನ ಕರ್ಮ, ನಾನು ಹೇಳಿದಾಗಲೇ ಮದುವೆಗೆ ಒಪ್ಪಿದ್ರೆ ಹೀಗೆಲ್ಲಾ ಆಗ್ತಾ ಇತ್ತಾ! ಒಂದೇ ಸಮನೆ ಅಮ್ಮನ ಗೋಳಾಟ ಕೇಳಿದ ರಮೇಶನಿಗೆ ಕೋಪ ಬಂದು ಸುಮ್ಮನಿರಮ್ಮ ಸಾಕು ಓದಿಲ್ಲ ಅಂತಾರೆ, ಹುಡುಗಿ ಓದಿಲ್ಲ ಅಂದರೂ ಹುಡುಗ ಚೆನ್ನಾಗಿರಬೇಕು, ಓದಿರಬೇಕು, ಕೆಲಸ ಮಾತ್ರ ಸರ್ಕಾರಿ ಕೆಲಸನೇ ಬೇಕು ಅಂತಾರೆ. ನೀನು ಬೇರೆ ನಮ್ಮ ಜಾತಿ ಹುಡುಗಿ ಬೇಕು, ಶಾಸ್ತ್ರ ಜಾತಕ ಸರಿ ಬರಬೇಕು, ಹುಡುಗಿ ನಮ್ಮ ಮನೆಯವರಿಗೆ, ನನ್ನ ಮಗಳಿಗೆ ಇಷ್ಟ ಆಗಬೇಕು ಅಂತಿಯಾ... ಹೀಗಿದ್ರೆ ನನ್ನ ಮದುವೆ ಈ ಕಾಲಕ್ಕೆ ನಡೆದಾಗನೇ ಬಿಡು... ಇದು ಆತ್ಮೀಯ ಗೆಳೆಯನೊಬ್ಬನ ಕಥೆಯಲ್ಲ, ಪ್ರಸ್ತುತ ಯುವ ಜನಾಂಗದ ದಿನನಿತ್ಯದ ವ್ಯಥೆ.

ಮೇಲಿನ ಎರಡೂ ವಿಚಾರಗಳನ್ನು ಗಮನಿಸಿದ ನನಗೆ ಕೆಲವು ಸಂದೇಹಗಳು ಉಂಟಾದವು. ಮನುಷ್ಯನಾಗಿ ಹುಟ್ಟಿದ ಮೇಲೆ ಮದುವೇನೇ ಮುಖ್ಯನಾ. ಮದುವೆ ಆಗದಿದ್ದರೆ ಬದುಕೋದಕ್ಕೆ ಆಗೊಲ್ವಾ ಅಷ್ಟಕ್ಕೂ ಈ ಮದುವೆ ಎನ್ನುವುದು ಜೀವನಕ್ಕೆ ಅನಿವಾರ್ಯವೋ, ಅಗತ್ಯವೋ ಎಂಬ ಪ್ರಶ್ನೆಗಳು ಒಂದೇ ಸಮನೆ ತಲೆ ತಿನ್ನತೊಡಗಿದ್ದವು

ಮನುಷ್ಯನ ಬದುಕಿನ ಘಟ್ಟಗಳಲ್ಲಿ ಬಾಲ್ಯ, ಯೌವ್ವನ, ಗೃಹಸ್ಥಾಶ್ರಮ, ವೃದ್ಧಾಪ್ಯ ಇವುಗಳು ವಿವಿಧ ಹಂತಗಳು. ಪ್ರತಿಯೊಬ್ಬರ ಬದುಕಿನಲ್ಲೂ ನಡೆಯಬಹುದಾದ ಮತ್ತು ನಡೆಯಬೇಕಾದ ವಿಚಾರಗಳಿವು. ಇವುಗಳಲ್ಲಿ ಈ ಗೃಹಸ್ಥಾಶ್ರಮದ ಕಾಲಘಟ್ಟ ಇದೆಯಲ್ಲ ಅದು ಇತ್ತೀಚಿನ ದಿನಗಳಲ್ಲಿ ರೇಜಿಗೆ ಹಿಡಿಸುವಷ್ಟರ ಮಟ್ಟಿಗೆ ಬಂದು ನಿಂತಿದೆ.

ಮದುವೆ ಆಗದೆ ಇದ್ದರೆ ಅಥವಾ ತಡವಾಗಿ ಆದರೆ ಅಯ್ಯೋ ಜೀವನವೇ ವ್ಯರ್ಥ ಎಂದೂ, ಮದುವೆಯಾಗದವರು ಏನೋ ಮಹಾ ಅಪರಾಧ ಮಾಡಿದವರೆಂಬಂತೆ ಮಾತನಾಡುವವರ ಜನರ ಮಧ್ಯೆ ಬದುಕುವ ನಾವು ಒಂದಂಶವನ್ನು ಅರ್ಥ ಮಾಡಿಕೊಳ್ಳಬೇಕು. ಮದುವೆಯಾಗದೆ ಆಜನ್ಮ ಬ್ರಹ್ಮಚಾರಿಯಾಗಿದ್ದುಕೊಂಡೇ ಸಾಧನೆ ಮಾಡಿರುವವರು ನಮ್ಮ ಮುಂದೆ ಇದ್ದಾರೆ. ಅದು ಮಹಾಭಾರತದಲ್ಲಿ ಭೀಷ್ಮ ಆಗಿರಬಹುದು, ಈಗಿನ ಕಾಲದಲ್ಲಿ ಅಬ್ದುಲ್ ಕಲಾಂ, ವಾಜಪೇಯಿ ಆಗಿರಬಹುದು. ಮದುವೆಯಾಗದೆ ಇದ್ದರೂ ಈ ಮಹನೀಯರು ಮಾಡಿದ ಸಾಧನೆಗಳು ಕಡಿಮೆ ಏನಿಲ್ಲ . ಆಗಿದ್ದರೆ ಮದುವೆ ಆಗೋದೆ ಬೇಡ್ವಾ! ಅಂದರೆ ಇಲ್ಲ ಜೀವನದಲ್ಲಿ ಮದುವೆ ಅನ್ನುವುದು ಮುಖ್ಯ! ಆದರೆ ಆ ಮದುವೆ ಎಂಬ ಹೆಸರಿನಲ್ಲಿ ನಡೆಯುವ ಡೊಂಬರಾಟಗಳು, ಪೀಕಲಾಟಗಳು ಮಾತ್ರ ಬೇಡ.

ಮದುವೆ ಜೀವನದ ಪ್ರಮುಖ ಹಂತ ನಿಜ. ತಮಗಿಷ್ಟವಾದ ಸಂಗಾತಿಯನ್ನು ಆರಿಸಿಕೊಳ್ಳಲು ಎಲ್ಲರಿಗೂ ಸಮನಾದ ಅವಕಾಶಗಳಿವೆ. ಮದುವೆ ಎಂಬ ಪ್ರಸ್ತಾಪ ಬಂದಾಗ ಮಾತ್ರ ಕಪ್ಪು, ಬಿಳುಪು, ದಪ್ಪ, ಸಣ್ಣ, ಎತ್ತರ, ಕುಳ್ಳ ಈ ಎಲ್ಲಾ ಅಂಶಗಳು ಮುಖ್ಯವಾಗುತ್ತದೆ. ಬಾಲ್ಯದಿಂದ ಹೇಗೆ ಇದ್ದರೂ ಮುಖ್ಯ ಅಂತ ಅನಿಸೊಲ್ಲ, ಆದರೆ ಮದುವೆ ಅಂತ ಬಂದರೆ ಇವುಗಳೇ ಮೊದಲು ಎಲ್ಲಕ್ಕಿಂತ ಮುಖ್ಯವಾಗಿ ಪರಿಗಣನೆಗೆ ಬರುವಂತದ್ದು. ತಾನು ಕಪ್ಪಾಗಿದ್ದರೂ ತಾನು ಮದುವೆಯಾಗುವ ಹುಡುಗ ಅಥವಾ ಹುಡುಗಿ ಬಿಳಿಬಣ್ಣದವಳು ಅಥವಾ ಬಿಳಿಬಣ್ಣದವನಾಗಿರಬೇಕೆಂದು ಹಂಬಲಿಸುವವರು ಕಂಡುಬರುತ್ತಾರೆ. ಇತ್ತೀಚಿನ ದಿನಗಳಲ್ಲಿ ಅಂತೂ ಬಣ್ಣಕ್ಕಿಂತ ಹೆಚ್ಚಾಗಿ ಹುಡುಗ ಸರ್ಕಾರಿ ಕೆಲಸದವನಾಗಿರಬೇಕು, ನೋಡೋಕೆ ಹೇಗಿದ್ದರೂ ಸರಿ ಎನ್ನುವ ಧೋರಣೆ ಉಳ್ಳವರು ಕಂಡುಬರುತ್ತಿದ್ದಾರೆ.

ಹಾಗಿದ್ರೆ ಮದುವೆ ಅಂದರೆ ಇಷ್ಟೇ ನಾ... ಬರಿ ಬಣ್ಣವೇ ಅಷ್ಟು ಮುಖ್ಯ ನಾ... ಸರ್ಕಾರಿ ಕೆಲಸದವನಾಗಿದ್ದರೆ ಸಾಕಾ... ಆಸ್ತಿವಂತನಾಗಿದ್ದರೆ ಸಾಕಾ, ಹುಡುಗಿ ಬಿಳಿಯ ಬಣ್ಣವನ್ನು ಹೊಂದಿದ್ದರೆ ಸಾಕಾ... ವರದಕ್ಷಿಣೆ ಕೊಟ್ಟರೆ ಎಂತಹ ಹುಡುಗಿ ಆದರೂ ಸಾಕಾ... ಹೀಗೆ ನಾನಾ ವಿಧವಾದ ಸಂದೇಹದ ಪ್ರಶ್ನೆಗಳು ಉದ್ಭವಿಸುತ್ತವೆ. ನನ್ನ ಪ್ರಕಾರ ಮದುವೆ ಅಂದರೆ ಅದು ಎರಡು ಮಧುರ ಮನಸುಗಳ ಮಿಲನ. ಹಣ, ಬಣ್ಣ, ಆಸ್ತಿ ಎಲ್ಲಕ್ಕಿಂತ ಮುಖ್ಯವಾದುದು ಗುಣ. ಒಳ್ಳೆಯ ಮುಖವನ್ನು ಹುಡುಕಬೇಡಿ, ಒಳ್ಳೆಯ ಮನಸ್ಸನ್ನು ಹುಡುಕಿ; ಒಳ್ಳೆಯ ಗುಣವನ್ನು ಹೊಂದಿರುವವರನ್ನು ಹುಡುಕಿ; ನಮ್ಮ ಮನೆಗೆ ಈ ಹುಡುಗಿ/ಹುಡುಗ ಹೊಂದಾಣಿಕೆ ಆಗ್ತಾನಾ /ಆಗ್ತಾಳ ಅಂತಾ ನೋಡಿ. ಪರಸ್ಪರ ಮಾತನಾಡಿ ಹೊಂದಾಣಿಕೆ ಆಗ್ತಾರೆ / ಆಗಬಲ್ಲರು ಅನ್ನುವವರನ್ನು ಮದುವೆಯಾಗಿ. ಒಂದು ವೇಳೆ ಹೊಂದಾಣಿಕೆ ಆಗದಿದ್ದರೆ ಹೊಂದಾಣಿಕೆ ಮಾಡಿಕೊಳ್ಳುವ ಹಾಗೆ ಮಾಡಿ.



ಮದುವೆ ಅಂದರೆ ಅದು ಎರಡು ಮಧುರ ಮನಸುಗಳ ಮಿಲನ. ಹಣ, ಬಣ್ಣ, ಆಸ್ತಿ ಎಲ್ಲಕ್ಕಿಂತ ಮುಖ್ಯವಾದುದು ಗುಣ. ಒಳ್ಳೆಯ ಮುಖವನ್ನು ಹುಡುಕಬೇಡಿ, ಒಳ್ಳೆಯ ಮನಸ್ಸನ್ನು ಹುಡುಕಿ; ಒಳ್ಳೆಯ ಗುಣವನ್ನು ಹೊಂದಿರುವವರನ್ನು ಹುಡುಕಿ; ನಮ್ಮ ಮನೆಗೆ ಈ ಹುಡುಗಿ/ಹುಡುಗ ಹೊಂದಾಣಿಕೆ ಆಗ್ತಾನಾ/ಆಗ್ತಾಳ ಅಂತಾ ನೋಡಿ. ಪರಸ್ಪರ ಮಾತನಾಡಿ ಹೊಂದಾಣಿಕೆ ಆಗ್ತಾರೆ/ಆಗಬಲ್ಲರು ಅನ್ನುವವರನ್ನು ಮದುವೆಯಾಗಿ. ಒಂದು ವೇಳೆ ಹೊಂದಾಣಿಕೆ ಆಗದಿದ್ದರೆ ಹೊಂದಾಣಿಕೆ ಮಾಡಿಕೊಳ್ಳುವ ಹಾಗೆ ಮಾಡಿ. ಮದುವೆ ಅನ್ನುವುದು ಸಂತೋಷದ ಸಂಭ್ರಮದ ಹಬ್ಬ. ಅದನ್ನು ಇಲ್ಲದ ಒತ್ತಡಗಳನ್ನು ಹಾಕಿ ಸಾಕಪ್ಪಾ ಸಾಕು ಯಾವುದೋ ಒಂದು ಮದುವೆಯಾದರೆ ಸಾಕು ಎನ್ನುವಷ್ಟರ ಮಟ್ಟಿಗೆ ಬೇಸರ ಉಂಟಾಗುವ ಹಾಗೆ ಮಾಡಬೇಡಿ. ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರುತ್ತದೆ ಎಂಬ ನಂಬಿಕೆಯ ಮಾತು ಬಹು ಹಿಂದಿನಿಂದ ಪ್ರಚಲಿತದಲ್ಲಿದೆ.

ಮದುವೆ ಅನ್ನುವುದು ಸಂತೋಷದ ಸಂಭ್ರಮದ ಹಬ್ಬ. ಅದನ್ನು ಇಲ್ಲದ ಒತ್ತಡಗಳನ್ನು ಹಾಕಿ ಸಾಕಪ್ಪಾ ಸಾಕು ಯಾವುದೋ ಒಂದು ಮದುವೆಯಾದರೆ ಸಾಕು ಎನ್ನುವಷ್ಟರ ಮಟ್ಟಿಗೆ ಬೇಸರ ಉಂಟಾಗುವ ಹಾಗೆ ಮಾಡಬೇಡಿ. ಮದುವೆ ಸ್ವರ್ಗದಲ್ಲಿ ನಿಶ್ಚಯವಾಗಿರುತ್ತದೆ ಎಂಬ ನಂಬಿಕೆಯ ಮಾತು ಬಹು ಹಿಂದಿನಿಂದ ಪ್ರಚಲಿತದಲ್ಲಿದೆ.

'ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯ'

(ಈ ಜನ್ಮದಲ್ಲಿ ನಮಗೆ ಒದಗುವ ಪಶು ಸಂಬಂಧಗಳು, ಪತ್ನಿ, ಮಕ್ಕಳು, ಮನೆ ಇತ್ಯಾದಿಗಳೆಲ್ಲ ಪೂರ್ವಜನ್ಮದ ನಮ್ಮ ಋಣಾನುಬಂಧವನ್ನು ಆಧರಿಸಿ ಪೂರ್ವ ನಿರ್ಧರಿತವಾದಂಥವು ಎಂಬುದಾಗಿ ಇದನ್ನು ಸರಳವಾಗಿ ಹೇಳಬಹುದು) ಇಂತಹ ಮಾತುಗಳು ಮದುವೆಗೆ ಇರುವ ಪ್ರಾಮುಖ್ಯತೆಯನ್ನು ತಿಳಿಸುತ್ತದೆ. ಮದುವೆ ಎಂಬುದು ಎರಡು ಹೃದಯಗಳು ಪರಸ್ಪರ ಬೆರೆಯುವ ಸುಮಧುರ ಕ್ಷಣ. ಅದನ್ನು ಇಲ್ಲಸಲ್ಲದ ಕಾರಣಗಳಿಗಾಗಿ ಅಥವಾ ಯಾವುದು ಮುಖ್ಯವೋ ಅದನ್ನು ಹೊರತುಪಡಿಸಿ ಕೃತಕವೆನಿಸಿದ ಸಂಗತಿಗಳ ಮೇಲೆ ಗಮನಹರಿಸಿದರೆ ಮದುವೆಯ ಪಾವಿತ್ರ್ಯತೆ ಕಳೆದುಕೊಳ್ಳುತ್ತದೆ ಎಂಬುದು ನನ್ನ ಅಭಿಪ್ರಾಯ. ಪ್ರಸ್ತುತ ದಿನಗಳಲ್ಲಂತೂ ಮದುವೆಯಾಗದೆ ಜೊತೆಯಾಗಿ ಕಾಲಕಳೆಯುವಂತಹ (ಲೀವಿಂಗ್ ಟುಗೇದರ್) ಪಾಶ್ಚಾತ್ಯದ ಅನುಕರಣೆ ಬಂದ ಮೇಲಂತೂ ಮದುವೆಗಿದ್ದ ಪವಿತ್ರ ಸ್ಥಾನ ಕುಸಿಯುತ್ತಿರುವುದು ಒಂದು ದೊಡ್ಡ ವಿಪರ್ಯಾಸವೇ ಸರಿ.

ಮದುವೆಯ ಬಗ್ಗೆ, ಹೆಂಡತಿಯ ಬಗ್ಗೆ ನಮ್ಮ ಕನ್ನಡದ ಸಾಹಿತಿಗಳು ಬರೆದಿರುವ ಮಾತುಗಳು ಅಥವಾ ಹೇಳಿರುವ ಪದ್ಯಗಳು ಮದುವೆ ಎಷ್ಟು ಮುಖ್ಯ ಎಂಬುದನ್ನು ಸಾರಿ... ಸಾರಿ ಹೇಳುತ್ತವೆ.

ಪ್ರಸಂಗ ಒಂದು: ನಮ್ಮ ಕನ್ನಡನಾಡಿನ ಸಾಹಿತಿ ಪ್ರೇಮಕವಿ ಎಂದೇ ಬಿರುದಾಂಕಿತರಾದ ಕೆ.ಎಸ್. ನರಸಿಂಹಸ್ವಾಮಿ ಅವರು ತಮ್ಮ **ಮೈಸೂರು ಮಲ್ಲಿಗೆ** ಕವನದಲ್ಲಿ ಮಡದಿಯ ಬಗೆಗೆ ಬರೆದಿರುವ ಕವನಗಳು ಸಾರ್ವಕಾಲಿಕವಾದವು

ಹೆಂಡತಿಯೊಬ್ಬಳು ಮನೆಯೊಳಗಿದ್ದರೆ ನನಗದೆ ಕೋಟಿ ರುಪಾಯಿ!
ಹೆಂಡತಿಯೊಬ್ಬಳು ಹತ್ತಿರವಿದ್ದರೆ ನಾನೂ ಒಬ್ಬ ಸಿಪಾಯಿ.
ಒಂದಿರುಳು ಕನಸಿನಲಿ ನನ್ನವಳ ಕೇಳಿದೆನು
ಚೆಂದ ನಿನಗಾವುದೆಂದು
ನಮ್ಮೂರು ಹೊನ್ನೂರೋ, ನಿಮ್ಮೂರು ನವಿಲೂರು
ಚೆಂದ ನಿನಗಾವುದೆಂದು.
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ ಎಂದೆನ್ನ ಕೇಳಲೇಕೆ?
ನಮ್ಮೂರ ಮಂಚದಲಿ ನಿಮ್ಮೂರ ಕನಸಿದನು
ವಿಸ್ತರಿಸಿ ಹೇಳಬೇಕೆ?
ನಮ್ಮೂರು ಚೆಂದವೋ, ನಿಮ್ಮೂರು ಚೆಂದವೋ ಎಂದೆನ್ನ ಕೇಳಲೇಕೆ? ಎನ್ನರಸ ಸುಮ್ಮನಿರಿ ಎಂದಳಾಕೆ.

–ಹೀಗೆ ತಮ್ಮ ಮಡದಿಯ ಮೇಲೆ ಅವರಿಗಿದ್ದ ಪ್ರೀತಿ ಈ ಕವನಗಳನ್ನು ಓದಿದರೆ ತಿಳಿಯುತ್ತದೆ.

ಪ್ರಸಂಗ ಎರಡು: ಕನ್ನಡದ ಅಗ್ರಗಣ್ಯ ಸಾಹಿತಿಗಳಲ್ಲಿ ಒಬ್ಬರೆನಿಸಿಕೊಂಡಿರುವ ಕುವೆಂಪು ತಮ್ಮ ಮಡದಿಯಿಂದ ಸ್ಫೂರ್ತಿಗೊಂಡು **ಜೇನಾಗುವ** ಎಂಬ ಕವನ ಸಂಕಲನವನ್ನೇ ಬರೆದಿದ್ದಾರೆ. ಆ ಕವನ ಸಂಕಲನದಲ್ಲಿ ಬರುವ ಪದ್ಯದ ಸಾಲುಗಳಿವು.

ನಾ ನಿನಗೆ, ನೀನೆನಗೆ ಜೇನಾಗುವಾ
ನಾ ನಿನಗೆ, ನೀನೆನಗೆ ಜೇನಾಗುವಾ
ರಸದೇವ ಗಂಗೆಯಲಿ ಮೀನಾಗುವ,, ಹಣ್ಣಾಗುವ,
ಅತಿರೂಪಿ ಭಗವತಿಗೆ ಮುಡಿಪಾಗುವ
ಬಾ ಬಾರ ಬಾರಾ ಸಖಿ
ಬಾ ಬಾರ ಬಾರಾ ಸಖಿ

– ಮೇಲೆ ತಿಳಿಸಿದ ಎರಡೂ ಘಟನೆಗಳು ಬದುಕಿನಲ್ಲಿ ಮದುವೆ, ಮಡದಿಯರ ಪಾತ್ರ ಎಷ್ಟರಮಟ್ಟಿಗೆ ಇದೆ ಎಂಬುದನ್ನು ತಿಳಿಸುವಂತಿದೆ.

ಪ್ರಸ್ತುತ ಲಕ್ಷ ಲಕ್ಷ ಸಂಪಾದನೆ ಮಾಡುವ ಕೆಲ ಮಹಿಳೆಯರು ಮತ್ತು ಪುರುಷರು ನಮಗೆ ಮದುವೆ ಬೇಡ, ಒಂಟಿ ಜೀವನ ಚೆನ್ನಾಗಿದೆ ಎಂದು ಜವಾಬ್ದಾರಿಗಳಿಂದ ವಿಮುಖರಾಗುವ ಪ್ರಯತ್ನ ಮಾಡುತ್ತಿರುವುದು ಇತ್ತೀಚೆಗೆ ಸರ್ವಸಾಮಾನ್ಯವಾಗಿದೆ. ಆದರೆ ತಿಳಿಯಲೇಬೇಕಾದ ಸತ್ಯ ಎಂದರೆ ಒಂದು ಕಾಲಘಟ್ಟ ಮುಗಿದ ನಂತರ ನಮ್ಮ ಭಾವನೆಗಳಿಗೆ ಸ್ಪಂದಿಸುವ, ನಮ್ಮನ್ನು ಅರ್ಥಮಾಡಿಕೊಳ್ಳುವ ಜೀವವಿಂದು ಜೊತೆಗಿರಬೇಕೆಂದು ಪ್ರತಿಯೊಬ್ಬರಿಗೂ ಅನಿಸಿಯೇ ಇರುತ್ತದೆ. ಮದುವೆ ಎಂದರೆ ಬಂಧನ ಅಲ್ಲ, ಅದು ಹಗ್ಗ–ಜಗ್ಗಾಟವೂ ಅಲ್ಲ, ನಮ್ಮನ್ನು ಅರ್ಥಮಾಡಿಕೊಂಡು ಕೆಲವೊಮ್ಮೆ ಪರಸ್ಪರ ಸೋತು ಗೆದ್ದು ಬದುಕುವ ಸುಮಧುರವಾದ ಅಮೃತ ಕ್ಷಣ.ಈ ಕ್ಷಣವನ್ನು ಪ್ರತಿಯೊಬ್ಬರೂ ಅನುಭವಿಸಿದರೆ ಅದರ ರಸಾನುಭವವಾಗುತ್ತದೆ.


ಜಿ.ಪಿ.ರಾಜರತ್ನಂ ಅವರ ಈ ಪದ್ಯವನ್ನು ಗಮನಿಸಿ;

ಹೇಳ್ಕೊಳ್ಳಕ್ ಒಂದ್ ಊರು, ತಲೆ ಮ್ಯಾಗೆ ಒಂದ್ ಸೂರು,
ಮಲ್ಗಾಕೆ ಭೂಮ್ ತಾಯಿ ಮಂಚ
ಕೈ ಹಿಡ್ದೋಳ್ ಪುಟ್ನಂಜಿ,ನಗನಗ್ತಾ ಉಪ್ಪ್ ಗಂಜಿ,
ಕೊಟ್ರಾಯಿತು ರತ್ನನ್ ಪರ್ಪಂಚ
ಬಡತನ ಗಿಡತನ ಏನಿದ್ರೇನು ನಡತೇನ
ಚೆನ್ನಾಗಿಟ್ಕೋಳೋದೆ ಅಚ್ಚಾ ಅಂದ್ಕೊಂಡಿ ಸುಖವಾಗಿ
ಕಷ್ಟಕ್ಕೆ ನಗುಮುಖವಾಗಿ
ನಡೆಯೋದೇ ರತ್ನನ್ ಪರ್ಪಂಚ

–ದಾಂಪತ್ಯ ಎಂದರೆ ಹೊಂದಾಣಿಕೆಯಿಂದ ಕೂಡಿರುವಂತದ್ದು ಎಂಬುದನ್ನು ಈ ಪದ್ಯ ತಿಳಿಸುತ್ತದೆ. ಇವಿಷ್ಟನ್ನು ಕೇಳಿದ ಮೇಲೆ ಯಾರಾದರೂ ನನಗೆ ಮದುವೆ ಬೇಡ ಅಥವಾ ನಾನು ಮದುವೆ ಆಗೊಲ್ಲ ಅಂತಾ ಹಠ ಹಿಡಿದರೆ ನಿಜಕ್ಕೂ ಅದೊಂದು ಅದ್ಭುತವೇ ಸರಿ.

ಮದುವೆ ಅನಿವಾರ್ಯವಲ್ಲ, ಆದರೆ ಅದು ಸ್ಫೂರ್ತಿಗೊಂದು ಸೆಲೆ, ಭರವಸೆಗೊಂದು ನೆಲೆ, ಹಾಗಾಗಿ ಮದುವೆ ಅನಿವಾರ್ಯವಲ್ಲ, ಅದು ಅಗತ್ಯವಾದುದು. ಮದುವೆ ಎಂದರೆ ಮಮತೆ ದುಡಿಮೆ ವ್ಯವಹಾರ, ಕಟ್ಟಿಕೊಂಡ ಅರ್ಧಾಂಗಿಯ ಬಗ್ಗೆ ಮಮತೆ ಇರಬೇಕು, ದುಡಿದು ಸಾಕುವಲ್ಲಿ ಶಕ್ತನಾಗಿರಬೇಕು. ಅಂತೆಯೇ ವ್ಯವಹಾರಿಕ ಜ್ಞಾನವನ್ನು ಹೊಂದುವುದು. ಆಗ ಸಂಸಾರ ಸುಸ್ವರವಾಗಿರುತ್ತದೆ. ಇಲ್ಲವಾದರೆ ಬದಲಾದ ವ್ಯಾಖ್ಯಾನವಾದಂತೆ ಅಂದರೆ ಮ– ಮಜ, ದು–ದುಃಖ, ವ್ಯ–ವ್ಯಸನ ಅಂದರೆ ಚಿಂತೆ ಪ್ರಾರಂಭವಾಗಿ ಮದುವೆ ಎಂದರೆ ವಾಕರಿಕೆ ಬರಿಸುವಷ್ಟು ಜುಗುಪ್ಸೆ ತಂದೊಡ್ಡಬಹುದು. ಈ ತರ ಆಗದಂತೆ ಬದುಕ ನಡೆಸಿದರೆ ಮಾತ್ರ ಮದುವೆ ಜನುಮ ಜನುಮ ಜೀವಗಳ ಭಾವಗಳ ಅನುಸಂಧಾನದ ಮಿಲನವಾಗಬಲ್ಲದು.

ಚಂದ್ರಯಾನ–3: ಯಶಸ್ವಿಯಾಗಿ ಚಂದ್ರನ ಕಕ್ಷೆ ಸೇರಿದ ಇಸ್ರೋ ನೌಕೆ; ಭಾನುವಾರ ಮತ್ತೊಂದು ಅಗ್ನಿಪರೀಕ್ಷೆ!



ನವದೆಹಲಿ: ದೇಶದ ಹೆಮ್ಮೆಯ ಬಾಹ್ಯಾಕಾಶ ಸಂಸ್ಥೆ ಇಸ್ರೋದ ಮಹತ್ವಾಕಾಂಕ್ಷಿ ಯೋಜನೆ ಚಂದ್ರಯಾನ–3 ನೌಕೆಯು ಶನಿವಾರ ಯಶಸ್ವಿಯಾಗಿ ಚಂದ್ರನ ಕಕ್ಷೆಯೊಳಗೆ ಪ್ರವೇಶ ಮಾಡಿದೆ.

'ಚಂದ್ರಯಾನ– 3' ಚಂದ್ರನ ಅಂಗಳದಲ್ಲಿ ಕಾಲಿರಿಸುವ ಪ್ರಯತ್ನದಲ್ಲಿ ಇನ್ನೊಂದು ಹಂತವನ್ನು ಯಶಸ್ವಿಯಾಗಿ ಪೂರೈಸಿದೆ. ಸ್ವತಃ ಇಸ್ರೋ ಈ ಮಾಹಿತಿ ನೀಡಿದೆ. ಶನಿವಾರ ಟ್ವೀಟ್ ಮೂಲಕ ಮಾಹಿತಿ ನೀಡಿರುವ ಇಸ್ರೋ, 'ಭೂಮಿಯಿಂದ ಉಡಾವಣೆಯಾದ ಚಂದ್ರಯಾನ ನೌಕೆಯು, ಈಗ ತನ್ನ ಉದ್ದೇಶಿತ ಗುರಿಯಾದ ಚಂದ್ರನ ಕಕ್ಷೆಯನ್ನು ಯಾವುದೇ ಅಡ್ಡಿ ಆತಂಕಗಳಿಲ್ಲದೆ ಪ್ರವೇಶಿಸುವ ಮೂಲಕ ಮತ್ತೊಂದು ಹಂತವನ್ನು ಸಫಲವಾಗಿ ಪೂರ್ಣಗೊಳಿಸಿದಂತಾಗಿದೆ. ಇದು ಇಸ್ರೋದ ಯೋಜನೆಯ ಮತ್ತೊಂದು ಯಶಸ್ಸಾಗಿದೆ ಎಂದು ಹೇಳಿದೆ.

ಲೂನಾರ್ ಆರ್ಬಿಟ್ ಇನ್ಸರ್ಷನ್ (ಎಲ್‌ಒಐ) ಅಥವಾ ಚಂದ್ರನ ಕಕ್ಷೆ ಸೇರ್ಪಡೆ ಯೋಜನೆಯು ಯಶಸ್ವಿಯಾಗಿ ಪೂರ್ಣಗೊಂಡಿದೆ. ಚಂದ್ರಯಾನದ ಎಲ್ಲಾ ವ್ಯವಸ್ಥೆಗಳೂ ಆರೋಗ್ಯಪೂರ್ಣವಾಗಿವೆ. ಬೆಂಗಳೂರಿನ ಐಎಸ್‌ಟಿಆರ್‌ಎಸಿಯ ಮಿಷನ್ ಆಪರೇಷನ್ ಕಾಂಪ್ಲೆಕ್ಸ್‌ನಿಂದ (ಎಂಒಎಕ್ಸ್) ಚಂದ್ರನಿಗೆ ಅತೀ ಸಮೀಪದ ಕಕ್ಷೆಯ ಭಾಗವಾದ ಪೆರಿಲೂನ್‌ನಿಂದ ರೆಟ್ರೋ ಬರ್ನಿಂಗ್ (ರಾಕೆಟ್‌ಗಳನ್ನು ಉಡಾವಣೆ ಮಾಡಿದ ದಿಕ್ಕಿನ ವಿರುದ್ಧ ಭಾಗದಿಂದ ರಾಕೆಟ್ ಉರಿಸುವುದು) ಪ್ರಕ್ರಿಯೆಗೆ ಚಾಲನೆ ನೀಡಲಾಗಿದೆ ಎಂದು ಇಸ್ರೋ ಹೇಳಿದೆ.

ಭಾನುವಾರ ಮತ್ತೊಂದು ಅಗ್ನಿಪರೀಕ್ಷೆ!: ಇದೇ ವೇಳೆ ಮುಂದಿನ ಕಾರ್ಯಾಚರಣೆಯಾದ ಕಕ್ಷೆಯ ಸಂಕೋಚನ ಪ್ರಕ್ರಿಯೆಯನ್ನು ಆಗಸ್ಟ್ 6ರ ಭಾನುವಾರ ರಾತ್ರಿ 11 ಗಂಟೆಗೆ ನಿಗದಿಪಡಿಸಲಾಗಿದೆ. ಆಗಸ್ಟ್ ಮೊದಲ ವಾರದಲ್ಲಿ ನೌಕೆಯು ಚಂದ್ರನ ಸುತ್ತ 5–6 ಕಕ್ಷೆಯ ಪಥವನ್ನು ಪೂರ್ಣಗೊಳಿಸಲು ತಯಾರಿ ನಡೆಸಿದೆ. ಕ್ರಮೇಣ ಅದು 100 ಕಿಮೀ ಆರ್ಬಿಟ್‌ನ ವರ್ತುಲಕ್ಕೆ ಪರಿವರ್ತನೆಯಾಗಲಿದೆ. ಮುಂದಿನ ಹತ್ತು ದಿನಗಳಲ್ಲಿ ಚಂದ್ರನ ದಕ್ಷಿಣ ಧ್ರುವದ ಪ್ರದೇಶದ ಒಳಗೆ ಇಳಿಯಲು ಸೂಕ್ತವಾದ ಜಾಗವನ್ನು ನಿರ್ಧರಿಸಲಾಗುತ್ತದೆ. ಆಗಸ್ಟ್ 23ರ ಸಂಜೆ 5.47ರ ಸುಮಾರಿಗೆ ಚಂದ್ರಯಾನ ನೌಕೆಯ ಲ್ಯಾಂಡರ್ ಕಕ್ಷೆಯಿಂದ ಹೊರಬರುತ್ತದೆ ಮತ್ತು ಸುಗಮ ಲ್ಯಾಂಡಿಂಗ್‌ಗೆ ಪ್ರಯತ್ನ ಆರಂಭಿಸುತ್ತದೆ ಎಂದು ಇಸ್ರೋ ಮೂಲಗಳು ತಿಳಿಸಿವೆ.

ಚಂದ್ರಯಾನ–3 ಇಸ್ರೋದ ಚಂದ್ರಯಾನ ಕಾರ್ಯಕ್ರಮದಲ್ಲಿ ಮೂರನೇ ಮಿಷನ್ ಆಗಿದ್ದು, ಚಂದ್ರನ ಪರಿಶೋಧನೆಯ ಕಡೆಗೆ ಇಸ್ರೋದ ಮಿಷನ್ ಇದಾಗಿದೆ. ಇದು ಚಂದ್ರನ ಮೇಲ್ಮೈಯಲ್ಲಿ ಮೃದುವಾದ ಲ್ಯಾಂಡಿಂಗ್ ಅನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಮತ್ತು ರೋವರ್ ಅನ್ನು ನಿಯೋಜಿಸುವಲ್ಲಿ ಚಂದ್ರಯಾನ–2ರ ಅನುಸರಣಾ ಕಾರ್ಯಾಚರಣೆಯಾಗಿದೆ. ಬಾಹ್ಯಾಕಾಶ ನೌಕೆಯು ಪ್ರೊಪಲ್ಷನ್ ಮಾಡ್ಯೂಲ್, ಲ್ಯಾಂಡರ್ ಮತ್ತು ರೋವರ್ ಅನ್ನು ಒಳಗೊಂಡಿದೆ. ಜೊತೆಗೆ ಚಂದ್ರನ ಮೇಲ್ಮೈಯನ್ನು ಮಾದರಿ ಮಾಡುವುದು ಸೇರಿದಂತೆ ಚಂದ್ರನ ಹಲವಾರು ಅಂಶಗಳನ್ನು ಅಧ್ಯಯನಕ್ಕೆ ಸಹಾಯ ಮಾಡಲು ಹಲವಾರು ಪೇಲೋಡ್‌ಗಳನ್ನು ಹೊಂದಿದೆ.

ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ 12 ದಿನಗಳ 'ಪರಿಚಯಾತ್ಮಕ' ಕಾರ್ಯಕ್ರಮಕ್ಕೆ ತೆರೆ



ಮೈಸೂರು, ಆ.5(ಸಿಎನ್)–ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಡಿಪ್ಲೊಮಾ ಕಾಲೇಜಿನಲ್ಲಿ ನಡೆದ 12 ದಿನಗಳ 'ಪ್ರಥಮ ವರ್ಗದ ವಿದ್ಯಾರ್ಥಿಗಳ ಪರಿಚಯಾತ್ಮಕ' ಕಾರ್ಯಕ್ರಮಕ್ಕೆ ಶನಿವಾರ ಯಶಸ್ವಿ ತೆರೆಬಿದ್ದಿದೆ. ಸುದೀರ್ಘವಾಗಿ ನಡೆದ ಕಾರ್ಯಕ್ರಮದಲ್ಲಿ ವಿಶೇಷಚೇತನ ವಿದ್ಯಾರ್ಥಿಗಳು ವಿವಿಧ ಚಟುವಟಿಕೆಗಳಲ್ಲಿ ಭಾಗಿಯಾಗುವ ಮೂಲಕ ತಮ್ಮಲ್ಲಿನ ಪ್ರತಿಭೆ ಪ್ರದರ್ಶಿಸಿದ್ದರು.


ಪ್ರಥಮ ವರ್ಷದ ವಿದ್ಯಾರ್ಥಿಗಳು ಲಡಾಕ್, ಉತ್ತರಾಖಂಡ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಕರ್ನಾಟಕ ಭಾಗಗಳಿಂದ ಬಂದಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದಲ್ಲಿ ಹಿರಿಯ ವಿದ್ಯಾರ್ಥಿಗಳು, ನೂತನ ವಿದ್ಯಾರ್ಥಿಗಳು, ಬೋಧಕ ಸಿಬ್ಬಂದಿ ಹಾಗೂ ಪೋಷಕರು ತಮ್ಮ ಅನುಭವ ಹಂಚಿಕೊಂಡರು.

ವಿವಿಧ ವಿಷಯಗಳ ಬಗ್ಗೆ ಉಪನ್ಯಾಸ: ಈ ವೇಳೆ ವಿಭಾಗ ಮಟ್ಟದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಅತಿಥಿ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಆರ್ಕಿಟೆಕ್ಚರ್ ವಿಭಾಗದಲ್ಲಿ ಜೆಎಸ್‌ಎಸ್ ಪಾಲಿಟೆಕ್ನಿಕ್‌ನ ನಾಗರಾಜ್ ಅವರಿಂದ 'ಮಾನವೀಯ ಮೌಲ್ಯಗಳು ಮತ್ತು ಜೀವನ ಕೌಶಲ್ಯ'ಗಳ ಕುರಿತು, ಅರ್ಥಶಾಸ್ತ್ರ ಉಪನ್ಯಾಸಕಿ ಮಾದಲಾಂಬಿಕರಿಂದ ಕಮರ್ಷಿಯಲ್ ಪ್ರಾಕ್ಟೀಸ್ ವಿಭಾಗದಲ್ಲಿ 'ಮೌಲ್ಯಾಧಾರಿತ ಶಿಕ್ಷಣ', ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ.ಅನಿಲ್ ಕುಮಾರ್‌ರಿಂದ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ 'ಸೈಬರ್ ಸೆಕ್ಯೂರಿಟಿ', ತೇಜಸ್ ಎ.ವಿರಿಂದ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್ ಇಂಜಿನಿಯರಿಂಗ್ ವಿಭಾಗದಲ್ಲಿ 'ಫಂಡಮೆಂಟಲ್ಸ್ ಆಫ್ ಅನಲಾಗ್ ಎಲೆಕ್ಟ್ರಾನಿಕ್ಸ್', ಹಾಗೂ ಲರ್ನಿಂಗ್ ಅಕಾಡೆಮಿ ಸಂಸ್ಥಾಪಕರಾದ ನಳಿನಿ ಬಿ.ಸರ್‌ಮೌಂಟ್‌ರಿಂದ ಅಪೆರಲ್ ಡಿಸೈನ್ & ಫ್ಯಾಬ್ರಿಕೇಶನ್ ಟೆಕ್ನಾಲಜಿ ವಿಭಾಗದಲ್ಲಿ 'ಗುರಿ ಸಾಧನೆ ಮತ್ತು ಮೌಲ್ಯಗಳು' ವಿಷಯಗಳ ಬಗ್ಗೆ ಉಪನ್ಯಾಸ ನೀಡಿದರು.

ಸಮಾರಂಭದಲ್ಲಿ ಪ್ರಾಂಶುಪಾಲರಾದ ಬಿ.ಇಳಂಗೋವನ್, ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಶನ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥೆ ಕೋಮಲ ಎಂ, ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ.ಶ್ರೀಕಂಠಸ್ವಾಮಿ, ಉಪನ್ಯಾಸಕರಾದ ಕು. ರೂಪಾಂಜಲಿ, ಕು.ಸಹನಾ, ಪ್ರತಿಮಾ ಎಂ, ಕು. ಸುಜಾತ, ರಾಜೇಶ್, ಸುನಂದ, ಸ್ಫೂರ್ತಿ ಯು.ಎನ್, ಮಾದಪ್ಪ ಎಸ್.ಮಂಜುಳಾ, ಬಸವರಾಜು, ವಿದ್ಯಾರ್ಥಿಗಳು, ಪೋಷಕರು ಭಾಗಿಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಇಂದು ಭಾನುವಾರ ಕೆ.ಬಿ.ಗಣಪತಿಯವರ ಲೈಫ್ ಅಂಡ್ ಟೈಮ್ಸ್ ಪುಸ್ತಕ ಬಿಡುಗಡೆ




ಮೈಸೂರು,ಆ.5–ಮೈಸೂರಿನ ಸಂವಹನ ಪ್ರಕಾಶನದ ವತಿಯಿಂದ ಹಿರಿಯ ಪತ್ರಕರ್ತರು ಹಾಗೂ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿಯವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕ ಬಿಡುಗಡೆ ಸಮಾರಂಭವನ್ನು ಆ.6ರ ಭಾನುವಾರ ಬೆಳಗ್ಗೆ 11 ಗಂಟೆಗೆ ಹುಣಸೂರು ರಸ್ತೆಯಲ್ಲಿರುವ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಅರುಣಾಚಲ ಪ್ರದೇಶದ ಇಟಾನಗರದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಪುಸ್ತಕ ಲೋಕಾರ್ಪಣೆ ಮಾಡುವರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ ಕೆ.ಎಸ್.ರಂಗಪ್ಪ ಅಧ್ಯಕ್ಷತೆ ವಹಿಸುವರು. ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಸಿ.ನಾಗಣ್ಣ ಕೃತಿ ಕುರಿತು ಮಾತನಾಡುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಭಾಗವಹಿಸುವರು. ಲೇಖಕ ಕೆ.ಬಿ.ಗಣಪತಿ ಮತ್ತು ಸಂವಹನ ಪ್ರಕಾಶನದ ಪ್ರಕಾಶಕರಾದ ಡಿ.ಎನ್.ಲೋಕಪ್ಪ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಇದೇ ವೇಳೆ ಕಾರ್ಯಕ್ರಮದ ಸ್ಥಳದಲ್ಲಿ 350 ರೂ.ಗಳ ಮುಖಬೆಲೆಯ ಪುಸ್ತಕವನ್ನು 200 ರೂ.ಗಳಿಗೆ ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು. ಪುಸ್ತಕ ಖರೀದಿಸಲು ಇಚ್ಛಿಸುವವರು ಪ್ರಕಾಶಕರು, ಮೊ.99026–39593 ಅಥವಾ 95354–61948 ಅನ್ನು ಸಂಪರ್ಕಿಸಬಹುದು.

ದಿನಬಳಕೆ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಮೈಸೂರಲ್ಲಿ ಜೆಡಿಎಸ್ ಪ್ರತಿಭಟನೆ

ಬಡವರು, ರೈತರಿಗೆ ಈಗ ದುಬಾರಿ ದುನಿಯಾ: ಶಾಸಕ ಜಿ.ಟಿ.ದೇವೇಗೌಡ



ಮೈಸೂರು, ಆ.5(ಜಿಎ)–ದಿನಬಳಕೆ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ, ಮೈಸೂರು ನಗರ ಜಿಲ್ಲಾ ಜಾತ್ಯಾತೀತ ಜನತಾದಳದ ವತಿಯಿಂದ ಶಾಸಕ ಜಿ.ಟಿ. ದೇವೇಗೌಡರ ನೇತೃತ್ವದಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ನಗರದ ಗಾಂಧಿಚೌಕದ ಬಳಿ ಜಮಾವಣೆಗೊಂಡ ವಿಧಾನಪರಿಷತ್ ಸದಸ್ಯರು, ಮಾಜಿ ಮಹಾಪೌರರು, ರಾಜ್ಯ ವಕ್ತಾರರು, ನಗರಪಾಲಿಕೆ ಸದಸ್ಯರು, ಪಕ್ಷದ ವಿವಿಧ ವಿಭಾಗದ ಅಧ್ಯಕ್ಷರು, ಕಾರ್ಯಕರ್ತರು ರಾಜ್ಯ ಮತ್ತು ಕೇಂದ್ರ ಸರ್ಕಾರದ ವಿರುದ್ಧ ವಿವಿಧ ಘೋಷಣೆಯನ್ನು ಕೂಗಿದರು.

ಈ ವೇಳೆ ಕಾರ್ಯಕರ್ತರು, ವಿವಿಧ ಹಲವು ಉಚಿತ ಗ್ಯಾರಂಟಿಗಳನ್ನು ಕರುಣಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದಂತೆ ನಡೆದಿದ್ದೇವೆ ಎಂದು ಬೀಗುತ್ತಿದ್ದಾರೆ. ಆದರೆ, ಇದರ ನಡುವೆ ರಾಜ್ಯದ ಜನರಿಗೆ ಬೆಲೆ ಏರಿಕೆ ಬಿಸಿ ತಟ್ಟುತ್ತಿದೆ. ವಿದ್ಯುತ್, ನೀರು ಹೀಗೆ ಹಲವು ರೀತಿಯಲ್ಲಿ ಬೆಲೆ ಏರಿಕೆ ಬಾಣ ಜನರಿಗೆ ಚುಚ್ಚುತ್ತಿದೆ. ಸರ್ಕಾರ ಒಂದು ಕೈಯ್ಯಲ್ಲಿ ಕೊಟ್ಟು, ಮತ್ತೊಂದು ಕೈಯ್ಯಲ್ಲಿ ಕಿತ್ತುಕೊಳ್ಳುತ್ತಿದೆ. ಉಚಿತ ಭಾಗ್ಯಗಳನ್ನು ಕೊಟ್ಟಿದ್ದೇನೋ ಸರಿ. ಆದರೆ, ಬೆಲೆ ಏರಿಕೆ ಬರೆ ಏಕೆ ಅನ್ನೋದು ಜನರ ಪ್ರಶ್ನೆಯಾಗಿದೆ ಎಂದು ದೂರಿದರು.

ಈ ವೇಳೆ ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಬಡವರಿಗೆ ಐದು ಗ್ಯಾರಂಟಿ ಮಾಡಿ, ಅದೇ ಬಡವರು ಉಪಯೋಗಿಸುತ್ತಿರುವ ಪದಾರ್ಥಗಳು ಮತ್ತು ರೈತರಿಗೆ ಮುಖ್ಯವಾಗಿ ಬೇಕಿರುವ ವಿದ್ಯುತ್ ದರವನ್ನು ದ್ವಿಗುಣಗೊಳಿಸಿದ್ದಾರೆ. ತರಕಾರಿ ಸೇರಿದಂತೆ ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದ್ದು, ಬಡವರು ಕಣ್ಣೀರು ಹಾಕುತ್ತಿದ್ದಾರೆ. ಕಾಂಗ್ರೆಸ್ ಸರ್ಕಾರಕ್ಕೆ ಎಚ್ಚರಿಕೆ ನೀಡಲು ರಾಜ್ಯಾದ್ಯಂತ ಇಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಪ್ರತಿಭಟನೆ ಮಾಡಲಾಗುತ್ತಿದೆ. ಜೆಡಿಎಸ್ ಜನರ ಪರವಾಗಿ ಧ್ವನಿ ಎತ್ತಿದೆ ಎಂದರು.

ಅಭಿವೃದ್ಧಿ ಮತ್ತು ಮೂಲಸೌಕರ್ಯಗಳ ಕೆಲಸ ಕಾರ್ಯಗಳು ಸ್ಥಗಿತಗೊಂಡಿವೆ. ಜನರು ಕಷ್ಟದಲ್ಲಿ ಸಿಲುಕಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ರಾಜ್ಯ ಸರ್ಕಾರದ ಗಮನಕ್ಕೆ ತರಲು ಈ ಪ್ರತಿಭಟನೆ ನಡೆಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಬೆಲೆ ಇಳಿಕೆ ಮಾಡಬೇಕು. ರೈತರು, ಬಡವರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಭ್ರಷ್ಟಾಚಾರ, ಬೆಲೆ ಏರಿಕೆ ಬಗ್ಗೆ ನಿರಂತರವಾಗಿ ಹೋರಾಟ ಮಾಡುತ್ತೇವೆ ಎಂದರು. ಪ್ರತಿ ಯುನಿಟ್‌ಗೆ 70 ಪೈಸೆ, 100 ಯುನಿಟ್ ಬಳಿಕ ಪ್ರತಿ ಯುನಿಟ್‌ಗೆ 7 ರೂ., 200 ಯುನಿಟ್ ದಾಟಿದರೆ, 8.20 ರೂ. ದರ ವಿಧಿಸಲಾಗುತ್ತಿತ್ತು. ಆದರೆ, ಈಗ ಯದ್ವಾತದ್ವಾ ಏರಿಕೆ ಮಾಡಲಾಗಿದೆ. ಹಾಲಿನ ದರ 40 ರೂ. ಯಿಂದ 43 ರೂ.ಗೆ ಏರಿಸಿದ್ದಾರೆ. ಇದರಿಂದ ಹೋಟೆಲ್ ತಿಂಡಿ ಬೆಲೆಯು ಏರಿಕೆಯಾಗಿದೆ. ರಾಜ್ಯ ಸರ್ಕಾರ ತಕ್ಷಣವೇ ದಿನಬಳಕೆ ವಸ್ತುಗಳ ಬೆಲೆ ಕಡಿಮೆ ಮಾಡದಿದ್ದರೆ, ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಮಾಡುವುದಾಗಿ ಜೆಡಿಎಸ್ ನಗರ ಅಧ್ಯಕ್ಷ ಕೆ.ಟಿ. ಚೆಲುವೇಗೌಡ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮಾಜಿ ಮೇಯರ್ ಲಿಂಗಪ್ಪ, ಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಎಸ್‌ಬಿಎಂ ಮಂಜು, ಅಶ್ವಿನಿ ಅನಂತ್, ಪ್ರೇಮಾ ಶಂಕರೇಗೌಡ ಮತ್ತು ಮುಖಂಡರಾದ ಹೆಚ್.ಕೆ.ರಮೇಶ್, ಫಾಲ್ಕನ್ ಬೋರೇಗೌಡ, ಪಿ.ಮಂಜುನಾಥ್, ಆರ್.ಮುತ್ತುರಾಜ್, ಮಾಜಿ ಕಾರ್ಪೊರೇಟರ್ ಕೆ.ವಿ.ಮಲ್ಲೇಶ್ ಸೇರಿದಂತೆ ಪಕ್ಷದ ಎಲ್ಲಾ ವಿಭಾಗದ ಅಧ್ಯಕ್ಷರು ಹಾಗೂ ಕಾರ್ಯಕರ್ತರು ಭಾಗಿಯಾಗಿದ್ದರು.

ನಿಗಮ–ಮಂಡಳಿಗೆ ಸಂಧಾನ ಸೂತ್ರ: ಶೇ.70 ಕಾರ್ಯಕರ್ತರಿಗೆ, ಉಳಿದದ್ದು ಶಾಸಕರಿಗೆ!

ಬೆಂಗಳೂರು: ಲೋಕಸಭೆ ಚುನಾವಣೆ ಮತ್ತು ಸರ್ಕಾರದ ಆಗುಹೋಗುಗಳ ಪರಾಮರ್ಶೆಗಾಗಿ ದೆಹಲಿಯಲ್ಲಿ ಹೈಕಮಾಂಡ್ ಕರೆದಿದ್ದ ಪ್ರಮುಖ ಸಭೆಯಲ್ಲಿ ರಾಜ್ಯ ನಾಯಕರಿಗೆ ಹಲವು ಸಂದೇಶ ಸಿಕ್ಕಿದೆ. ಜತೆಗೆ, ಕಾರ್ಯಕರ್ತರನ್ನು ವಿಶ್ವಾಸದಲ್ಲಿಟ್ಟು ಕೊಳ್ಳುವ ಮಹತ್ತರ ಗುರಿಯನ್ನು ನೀಡಲಾಗಿದೆ.

ಸರ್ಕಾರ ರಚನೆ ಬಳಿಕ ನಿಗಮ–ಮಂಡಳಿಗಳ ನೇಮಕ ಮಾಡುವ ಕಾರ್ಯ ನಡೆಯಲಿದೆ. ನಿಗಮ– ಮಂಡಳಿಗೆ ನೇಮಕಾತಿ ಮಾಡುವಂತೆ ಶಾಸಕರು ಒತ್ತಡ ಹೇರಿದ್ದ ಹಿನ್ನೆಲೆಯಲ್ಲಿ ಹೈಕಮಾಂಡ್ ಬಳಿ ಚರ್ಚಿಸಿ ಸಿಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಗ್ರೀನ್ ಸಿಗ್ನಲ್ ಪಡೆದುಕೊಂಡಿದ್ದಾರೆ.

30 ಪ್ರಬಲ ಮಂಡಳಿಗಳು ಮತ್ತು ನಿಗಮಗಳಿವೆ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳು, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಲಿಮಿಟೆಡ್, ಕರ್ನಾಟಕ ಸಾಬೂನು ಮತ್ತು ಮಾರ್ಜಕಗಳು, ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ, ಕರ್ನಾಟಕ ನಗರ ನೀರು ಸರಬರಾಜು ಒಳಚರಂಡಿ ಮಂಡಳಿ ಮತ್ತು ಇತರರು. ಕೈಗಾರಿಕೆಗಳು ಮತ್ತು ವಾಣಿಜ್ಯ ಮತ್ತು ಜಲಸಂಪನ್ಮೂಲ ಇಲಾಖೆಗಳಿಗೆ ಸಂಬಂಧಿಸಿದ ಮಂಡಳಿಗಳಿಗೆ ಹೆಚ್ಚಿನ ಬೇಡಿಕೆಯಿದೆ.

ಪಕ್ಷವು ಮಂಡಳಿ ಮತ್ತು ನಿಗಮಗಳಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಿದೆ. ಸಿದ್ದರಾಮಯ್ಯ, ಶಿವಕುಮಾರ್ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಅಂತಿಮ ಪಟ್ಟಿಯನ್ನು ನಿರ್ಧರಿಸಲಿದ್ದಾರೆ. ನಾವು 70:30 ಅನುಪಾತದ ಮಾದರಿಯನ್ನು ಅನುಸರಿಸುತ್ತೇವೆ, ಪಕ್ಷದ ಕಾರ್ಯಕರ್ತರಿಗೆ 70% ಸ್ಥಾನ ಹಾಗೂ ಶಾಸಕರಿಗೆ ಶೇ.30ರಷ್ಟು ಸ್ಥಾನ ಸಿಗಲಿದೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದ್ದಾರೆ.

ಹಲವು ಶಾಸಕರು ಈ ಹುದ್ದೆಗಳಿಗೆ ಪ್ರಬಲ ಆಕಾಂಕ್ಷಿಗಳಾಗಿದ್ದರೆ, ಪಕ್ಷದ ಕಾರ್ಯಕರ್ತರು ಮತ್ತು ಪದಾಧಿಕಾರಿಗಳು ನಿಗಮ ಮಂಡಳಿ ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿ ನಡೆಸುತ್ತಿದ್ದಾರೆ. ನೇಮಕಾತಿ ಪ್ರಕ್ರಿಯೆಯು ಸುಮಾರು 1 ತಿಂಗಳು ತೆಗೆದುಕೊಳ್ಳುವ ಸಾಧ್ಯತೆಯಿದೆ ಎಂದು ಹೇಳಲಾಗಿದೆ.

ಮಣಿಪುರದಲ್ಲಿ ಮತ್ತೆ ಹಿಂಸಾಚಾರ: ತಂದೆ–ಮಗ ಸೇರಿ ಮೂವರ ಹತ್ಯೆ, ಉಗ್ರರ ಅಟ್ಟಹಾಸ

ಇಂಫಾಲ್: ಮಣಿಪುರದಲ್ಲಿ ಮತ್ತೆ ಹಿಂಸಾಚಾರ ಆರಂಭವಾಗಿದೆ. ಮಣಿಪುರದ ಬಿಷ್ಣುಪುರ ಜಿಲ್ಲೆಯಲ್ಲಿ ಶುಕ್ರವಾರ ತಡರಾತ್ರಿ ತಂದೆ–ಮಗ ಸೇರಿದಂತೆ ಮೂವರನ್ನು ಉಗ್ರರು ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಿಲ್ಲೆಯ ಕ್ವಾಕ್ಟಾದಲ್ಲಿ ನಿನ್ನೆ ರಾತ್ರಿ ಮೂವರು ಮಲಗಿದ್ದಾಗ ಗುಂಡು ಹಾರಿಸಿ, ಕತ್ತಿಯಿಂದ ಕೊಚ್ಚಿ ಹತ್ಯೆಗೈದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕೊಲೆಯಾದ ಮೂವರು ಪರಿಹಾರ ಶಿಬಿರದಲ್ಲಿ ಇರುತ್ತಿದ್ದರು. ಜಿಲ್ಲೆ ಮತ್ತು ಇಡೀ ರಾಜ್ಯದಲ್ಲಿ ಪರಿಸ್ಥಿತಿ ಸ್ವಲ್ಪ ಶಾಂತವಾಗಿದೆ ಎಂದು ತಿಳಿದ ನಂತರ ಕ್ವಾಕ್ಟಾದಲ್ಲಿನ ತಮ್ಮ ನಿವಾಸಗಳಿಗೆ ತೆರಳುತ್ತಿದ್ದ ವೇಳೆ ಈ ದುರ್ಘಟನೆ ನಡೆದಿದೆ. ಘಟನೆ ನಂತರ ಕ್ವಾಕ್ಟಾದಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದು, ಉದ್ರಿಕ್ತ ಗುಂಪೊಂದು ಚುರಾಚಂದ್‌ಪುರದ ಕಡೆಗೆ ಹೋಗಲು ಬಯಸಿತು ಆದರೆ ಭದ್ರತಾ ಸಿಬ್ಬಂದಿ ಅವರನ್ನು ತಡೆದರು ಎಂದು ಪೊಲೀಸರು ತಿಳಿಸಿದ್ದಾರೆ. ಫೌಗಕ್ಚಾವೊ ಮತ್ತು ಕ್ವಾಕ್ಟಾದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ರಾಜ್ಯ ಪಡೆಗಳು ಮತ್ತು ಉಗ್ರಗಾಮಿಗಳ ನಡುವೆ ಭಾರೀ ಗುಂಡಿನ ಚಕಮಕಿ ನಡೆಯುತ್ತಿದೆ ಎಂದರು. ಆ.4 ರಂದು, ಮಣಿಪುರ ಪೊಲೀಸರು ಜಂಟಿ ಭದ್ರತಾ ಪಡೆ ಕೌಟ್ರುಕ್ ಬೆಟ್ಟದ ಪ್ರದೇಶದಲ್ಲಿ ಕಾರ್ಯಾಚರಣೆ ನಡೆಸಿ 7 ಅಕ್ರಮ ಬಂಕರ್‌ಗಳನ್ನು ನಾಶಪಡಿಸಿದ್ದಾರೆ ಎಂದರು.

ಗುಡ್ಡಗಾಡು ಸೈಕಲ್ ರೇಸ್‌ಗೆ ಸ್ಪರ್ಧಿಗಳ ಆಯ್ಕೆ



ಮೈಸೂರು, ಆ.5(ಎಂಟಿವೈ)– ಬೆಂಗಳೂರಲ್ಲಿ ನಡೆಯುವ ಗುಡ್ಡಗಾಡು ಸೈಕಲ್ ರೇಸ್ ಸ್ಪರ್ಧೆಯಲ್ಲಿ ಭಾಗವಹಿಸಲು 'ಮೈಸೂರು ಜಿಲ್ಲಾ ಸೈಕ್ಲಿಸ್ಟ್' ತಂಡವನ್ನು ಆಯ್ಕೆ ಮಾಡಲು ಶನಿವಾರ ನಡೆಸಿದ ಆಯ್ಕೆ ಪ್ರಕ್ರಿಯೆಯಲ್ಲಿ ಹಲವು ಮಂದಿ ಸೈಕ್ಲಿಸ್ಟ್‌ಗಳು ಪಾಲ್ಗೊಂಡಿದ್ದರು.

ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಸಂಸ್ಥೆಯು ಶನಿವಾರ ಮೈಸೂರಿನ ಹೆಬ್ಬಾಳು ಕೈಗಾರಿಕಾ ಬಡಾವಣೆ ಸಮೀಪದ ಮೈದಾನದಲ್ಲಿ ಆಯೋಜಿಸಿದ್ದ ಸೈಕ್ಲಿಸ್ಟ್‌ಗಳ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡಿದ್ದ ಹಲವು ಮಂದಿ ಸೈಕ್ಲಿಸ್ಟ್‌ಗಳು ನಿಗದಿತ ಮಾರ್ಗದಲ್ಲಿ ಸೈಕಲ್ ತುಳಿದು ಗಮನ ಸೆಳೆದರು. ಗುಡ್ಡಗಾಡು ಸೈಕಲ್ ಸ್ಪರ್ಧೆಗೆ ಅನುಗುಣವಾಗಿ ಗುರುತಿಸಲಾಗಿದ್ದ 4 ಕಿ.ಮಿ ದೂರದ ಲ್ಯಾಪ್(ಮಾರ್ಗ)ನಲ್ಲಿ ವೇಗವಾಗಿ ಸೈಕಲ್ ತುಳಿದ ಸ್ಪರ್ಧಿಗಳು ಚಾಕಚಕ್ಯತೆ ಪ್ರದರ್ಶಿಸಿದರು.

14 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗ, 16 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗ, 18 ವರ್ಷದೊಳಗಿನ ಯುವಕ, ಯುವತಿಯರ ವಿಭಾಗ, ಪುರುಷರ ವಿಭಾಗ, ಎಲೈಟ್ ಮೆನ್ ಹಾಗೂ ಮಹಿಳೆಯರ ವಿಭಾಗದಲ್ಲಿ ಪ್ರತ್ಯೇಕವಾಗಿ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರತಿಯೊಂದು ವಿಭಾಗದಲ್ಲೂ ತಲಾ ನಾಲ್ಕು ಮಂದಿ ಆಯ್ಕೆ ಮಾಡಲಾಯಿತು.

ಜಿಲ್ಲಾ ಮಟ್ಟದ 9 ತಂಡಕ್ಕೆ ಒಟ್ಟು 35 ಸೈಕ್ಲಿಸ್ಟ್‌ಗಳು ಆಯ್ಕೆಯಾದರು. ಸೈಕ್ಲಿಸ್ಟ್‌ಗಳ ಆಯ್ಕೆಗಾಗಿ ಸಿದ್ಧಪಡಿಸಲಾಗಿದ್ದ ಟ್ರ್ಯಾಕ್‌ನಲ್ಲಿ ಒಬ್ಬೊಬ್ಬರು ಸೈಕ್ಲಿಸ್ಟ್‌ಗಳನ್ನು ಸ್ಪರ್ಧೆಗೆ ಒಳಪಡಿಸಲಾಯಿತು. ಬೆಟ್ಟ–ಗುಡ್ಡ, ಏರು–ಇಳಿತ, ತಿರುವು ಸೇರಿದಂತೆ ಗುಡ್ಡಗಾಡು ರೇಸ್‌ನಲ್ಲಿರುವಂತೆ ಇದ್ದ ಟ್ರ್ಯಾಕ್‌ನಲ್ಲಿ ಕಡಿಮೆ ಸಮಯದಲ್ಲಿ ಗುರಿ ಮುಟ್ಟಿದ ನಾಲ್ವರನ್ನು ಪ್ರತಿ ತಂಡಕ್ಕೆ ಆಯ್ಕೆ ಮಾಡಲಾಯಿತು. ಇಂದು ಆಯ್ಕೆಯಾದ ಸೈಕ್ಲಿಸ್ಟ್‌ಗಳು ಮೈಸೂರು ಜಿಲ್ಲಾ ಮಟ್ಟದ ತಂಡವಾಗಿ ಬೆಂಗಳೂರಲ್ಲಿ ನಡೆಯುವ ಸೈಕಲ್ ರೇಸ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಸಂಸ್ಥೆಯ ಗೌರವಾಧ್ಯಕ್ಷ ರಮೇಶ್ ನರಸಯ್ಯ, ಅಧ್ಯಕ್ಷರ ಅರುಣ್ ಪಾಟೀಲ್, ಉಪಾಧ್ಯಕ್ಷ ಬಿ.ಮಂಜುನಾಥ್, ಕಾರ್ಯದರ್ಶಿ ಎನ್.ಲೋಕೇಶ್, ಸೈಕ್ಲಿಂಗ್ ತರಬೇತುದಾರ ಫಾರಿಯಲ್ ಜಮಾದಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ವರ್ಷವಿಡೀ ಪ್ರತೀ ತಿಂಗಳ ಮೊದಲ ಶನಿವಾರ ಪಾರಂಪರಿಕ ನಡಿಗೆ



ಮೈಸೂರು,ಆ.5(ಆರ್‌ಕೆ)– ವರ್ಷವಿಡೀ ಪ್ರತೀ ತಿಂಗಳ ಮೊದಲ ಶನಿವಾರ ಪಾರಂಪರಿಕ ನಡಿಗೆ ಕಾರ್ಯಕ್ರಮ ಮೈಸೂರಲ್ಲಿ ಇಂದು ಆರಂಭವಾಯಿತು.

ಪುರಭವನದ ಆವರಣದಿಂದ ಆರಂಭವಾದ ಪಾರಂಪರಿಕ ನಡಿಗೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ. ಎನ್.ಎಸ್.ರಂಗರಾಜು ಸ್ವಾಗತ ಕಮಾನುಗಳು, ಗೋಪುರ, ಸ್ಮಾರಕಗಳ ಹಿನ್ನೆಲೆ, ಇತಿಹಾಸ, ರಾಜಮಹಾರಾಜರ ಕಲ್ಪನೆಯಲ್ಲಿ ಮೈಸೂರು ಎಂಬಿತ್ಯಾದಿ ವಿಷಯಗಳ ಬಗ್ಗೆ ವಿವರಿಸಿದರು.

ಪುರಭವನದ ಎದುರಿನ ದೊಡ್ಡ ಗಡಿಯಾರ, ಚಾಮರಾಜ ಒಡೆಯರ್ ಸರ್ಕಲ್, ಅರಮನೆ ಉತ್ತರ ದ್ವಾರ, ಕೆ.ಆರ್. ಸರ್ಕಲ್‌ನ ಸುತ್ತಲಿನ ಪಾರಂಪರಿಕ ಕಟ್ಟಡಗಳು, ಸಯ್ಯಾಜಿರಾವ್ ರಸ್ತೆಯ ಚಿಕ್ಕಗಡಿಯಾರ, ದೇವರಾಜ ಮಾರುಕಟ್ಟೆ, ಕೆ.ಆರ್. ಆಸ್ಪತೆ, ಮೈಸೂರು ಮೆಡಿಕಲ್ ಕಾಲೇಜು, ಸರ್ಕಾರಿ ಆಯುರ್ವೇದ ಕಾಲೇಜು, ಕೇಂದ್ರ ಗ್ರಂಥಾಲಯ, ಹಳೇ ಕಾವಾ ಕಟ್ಟಡಗಳ ಪ್ರಾಚೀನ ಇತಿಹಾಸದ ಬಗ್ಗೆ ಧ್ವನಿವರ್ಧಕದ ಮೂಲಕ ಮಾಹಿತಿ ನೀಡಿದ ಪ್ರೊ. ರಂಗರಾಜು, ಹಳೇ ಬ್ಯಾಂಕ್ ರಸ್ತೆ ಮೂಲಕ ಗಾಂಧಿ ಸ್ಕ್ವೇರ್‌ಗೆ ಧಾವಿಸಿ ಮಹಾತ್ಮ ಗಾಂಧೀಜಿ ಅವರು ಮೈಸೂರು ಭೇಟಿ ನೀಡಿದ್ದ ಪ್ರಸಂಗವನ್ನು ವಿವರಿಸಿದರು.

ಬೆಳಗ್ಗೆ 7 ಗಂಟೆಗೆ ಆರಂಭವಾದ ನಡಿಗೆಯಲ್ಲಿ ಪಾರಂಪರಿಕ ಇಲಾಖೆ ಆಯುಕ್ತ ದೇವರಾಜ್, ಉಪನಿರ್ದೇಶಕಿ ಮಂಜುಳಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು. ಮುಂದೆ ಪ್ರತೀ ತಿಂಗಳ ಮೊದಲ ಶನಿವಾರ ಬೆಳಗ್ಗೆ ಪಾರಂಪರಿಕ ನಡಿಗೆ ಕಾರ್ಯಕ್ರಮ ಆಯೋಜಿಸಲಾಗಿದ್ದು ಪ್ರತೀ ತಿಂಗಳೂ ನಡಿಗೆ ಮಾರ್ಗ ಬದಲಾಗಲಿದೆ. ಮೊದಲ ದಿನವಾದ ಇಂದು ಸಾರ್ವಜನಿಕರಿಂದ ನಿರೀಕ್ಷಿತ ಪ್ರತಿಕ್ರಿಯೆ ಬರಲಿಲ್ಲವಾದರೂ, ಮುಂದಿನ ತಿಂಗಳಿಂದ ಸಾರ್ವಜನಿಕರು, ಶಾಲಾ–ಕಾಲೇಜು, ಪ್ರವಾಸಿಗರು, ಸಂಘ–ಸಂಸ್ಥೆಗಳನ್ನು ಒಳಗೂಡಿಸಿಕೊಂಡು ದೊಡ್ಡ ಪ್ರಮಾಣದಲ್ಲಿ ಹೆರಿಟೇಜ್ ವಾಕ್ ಮಾಡಲಾಗುವುದು ಎಂದು ಪಾರಂಪರಿಕ ಆಯುಕ್ತ ದೇವರಾಜು ತಿಳಿಸಿದ್ದಾರೆ.

ಮೈಸೂರು–ಬಾಚೇಗೌಡನಹಳ್ಳಿ ಬಸ್ ಪುನರಾರಂಭಕ್ಕೆ ಗ್ರಾಮಸ್ಥರ ಒತ್ತಾಯ

ಮೈಸೂರು,ಆ.5(ಎಸ್‌ಪಿಎನ್)– ಹೆಚ್.ಡಿ. ಕೋಟೆ ತಾಲೂಕು ಬಾಚೇಗೌಡನಹಳ್ಳಿಗೆ ಮೈಸೂರಿಂದ ಶಾಲಾ ಆರಂಭದ ವೇಳೆಗೆ ಸಾರಿಗೆ ಬಸ್ ಸೇವೆ ಪುನರಾರಂಭಿಸುವಂತೆ ಗ್ರಾಮಸ್ಥರು ಜಿಲ್ಲಾಡಳಿತ ಮತ್ತು ಸಾರಿಗೆ ಅಧಿಕಾರಿಗಳಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

ನಮ್ಮ ಗ್ರಾಮದಲ್ಲಿ (ಬಾಚೇಗೌಡನಹಳ್ಳಿ) ಸರ್ಕಾರಿ ಪ್ರೌಢಶಾಲೆ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಸುತ್ತಮುತ್ತಲಿನ ಗ್ರಾಮಗಳ ಸುಮಾರು 400ಕ್ಕೂ ಅಧಿಕ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ಕೋವಿಡ್–19 ಆರಂಭಕ್ಕೂ ಮುನ್ನ ಬೆಳಗ್ಗೆ 7.30ಕ್ಕೆ ಕೆಎಸ್‌ಆರ್‌ಟಿಸಿ ಬಸ್ ಬಾಚೇಗೌಡನಹಳ್ಳಿಯಿಂದ ಮೈಸೂರಿಗೆ ಹೊರಟು ಪುನಃ ಮೈಸೂರಿಂದ ಬಾಚೇಗೌಡನಹಳ್ಳಿ ಮಾರ್ಗವಾಗಿ ಹೆಚ್.ಡಿ.ಕೋಟೆಗೆ ಹೋಗುತ್ತಿತ್ತು. ಇದರಿಂದ ಸುತ್ತಮುತ್ತಲಿನ ಗ್ರಾಮಗಳಾದ ಕನ್ನೇನಹಳ್ಳಿ, ಕರಿಗಾಳ, ಬನವಾಡಿ, ಕರಿಗಾಳ, ಹೊಮ್ಮರಗಳ್ಳಿ, ಕ್ಯಾತನಹಳ್ಳಿ ಸೇರಿದಂತೆ ಇತರೆ ಗ್ರಾಮಗಳಿಂದ ಆಗಮಿಸುವ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ಬಸ್ ರೂಟ್ ಅನ್ನು ಲಾಕ್‌ಡೌನ್ ನಂತರ ನಿಲ್ಲಿಸಿರುವುದರಿಂದ ಈ ಮಾರ್ಗದ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ, ಗ್ರಾಮಸ್ಥರಿಗೆ ಆಗುತ್ತಿರುವ ಸಮಸ್ಯೆಯನ್ನು ಸರಿಪಡಿಸುವಂತೆ ಇಲ್ಲಿನ ಗ್ರಾಮಸ್ಥರು, ಹೆಚ್.ಡಿ.ಕೋಟೆ ಸಾರಿಗೆ ಘಟಕ ವ್ಯವಸ್ಥಾಪಕರಿಗೆ, ಜಿಲ್ಲಾಡಳಿತಕ್ಕೆ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹಾಗೂ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಪತ್ರ ಬರೆದು ಮನವಿ ಮಾಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

■ **ವೈದ್ಯಕೀಯ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ :** ನ್ಯಾಷನಲ್ ವ್ಯಾಸ್ಕೂಲರ್ ದಿನದ ಅಂಗವಾಗಿ ವಾಕಥಾನ್, ಮುಖ್ಯ ಅತಿಥಿಗಳು : ಡಿಸಿ ಡಾ.ಕೆ.ವಿ.ರಾಜೇಂದ್ರ, ಅತಿಥಿಗಳು: ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಡೀನ್ ಪ್ರೊ. ಬಸವನಗೌಡಪ್ಪ, ವೈದ್ಯಕೀಯ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ. ಕೆ.ಎಸ್. ಸದಾನಂದ, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 7.15ಕ್ಕೆ.

■ **ಸಂಸದ ವಿ. ಶ್ರೀನಿವಾಸ ಪ್ರಸಾದ್ ಅವರ ಅಭಿಮಾನಿ ಬಳಗ :** ಸಂಸದ ವಿ.ಶ್ರೀನಿವಾಸಪ್ರಸಾದ್ ಅವರ 77ನೇ ಹುಟ್ಟುಹಬ್ಬ ಆಚರಣೆ, ಉಪಸ್ಥಿತರು: ವಿಶ್ವಮೈತ್ರಿ ಬುದ್ಧವಿಹಾರದ ಡಾ. ಕಲ್ಯಾಣಸಿರಿ ಭಂತೇಜಿ, ಉದ್ಘಾಟನೆ: ಶ್ರೀಮತಿ ಡಿ.ಭಾಗ್ಯಲಕ್ಷ್ಮೀ ಶ್ರೀನಿವಾಸ ಪ್ರಸಾದ್, ಮುಖ್ಯ ಅತಿಥಿಗಳು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿವೃತ್ತ ನಿರ್ದೇಶಕ ಡಾ. ನೀಲಗಿರಿ ತಳವಾರ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ–ಪರಶು, ಸ್ಥಳ: ಒಡನಾಡಿ ಸೇವಾ ಸಂಸ್ಥೆ, ಹೂಟಗಳ್ಳಿ, ಬೆಳಗ್ಗೆ 9ಕ್ಕೆ.


■ **ಸದ್ವಿದ್ಯಾ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ :** ರಾಜ್ಯ ಮಟ್ಟದ ರ್‍ಯಾಪಿಡ್ ಚೆಸ್ ಪಂದ್ಯಾವಳಿ, ಉದ್ಘಾಟನೆ : ಗ್ರ್ಯಾಂಡ್‌ಮಾಸ್ಟರ್ ಎಂ.ಎಸ್. ತೇಜ್‌ಕುಮಾರ್, ಸ್ಥಳ: ಸದ್ವಿದ್ಯಾ ಸೆಮಿ ರೆಸಿಡೆನ್ಸಿಯಲ್ ಪಿಯು ಕಾಲೇಜು, ವಿಜಯನಗರ 2ನೇ ಹಂತ, ಬೆಳಗ್ಗೆ 9ಕ್ಕೆ

■ **ಮೈಸೂರು ಸೈನ್ಸ್ ಫೌಂಡೇಷನ್, ವಿಜಯ ವಿಠ್ಠಲ ಪಿಯು ಕಾಲೇಜು:** ವಿಜ್ಞಾನಿಗಳೊಂದಿಗೆ ಸಂವಾದ, ಪತಂಗ ಸಪ್ತಾಹ–2023ರ ಅಂಗವಾಗಿ ನಡೆದ ಪೋಸ್ಟ್ ಕಾರ್ಡ್ ಚಿತ್ರಕಲೆ ಸ್ಪರ್ಧೆಯ ಚಿತ್ರಗಳ ಪ್ರದರ್ಶನ ಮತ್ತು ಜಿ.ಎಸ್.ಬಸವರಾಜಪ್ಪ ಅವರಿಗೆ ಉತ್ತಮ ವಿಜ್ಞಾನ ಸಂವಹನಕಾರ ಪ್ರಶಸ್ತಿ ಪ್ರದಾನ, ಉದ್ಘಾಟನೆ: ಸೀನಿಯರ್ ಸೂಪರಿಂಟೆಂಡೆಂಟ್ ಆಫ್ ಪೋಸ್ಟ್ ಆಫೀಸ್, ಮೈಸೂರು ವಿಭಾಗ, ಡಾ.ಏಂಜೆಲ್ ರಾಜ್, ಅಧ್ಯಕ್ಷತೆ: ಸಿಎಸ್‌ಆರ್‌ಟಿಐ ಹಿರಿಯ ವಿಜ್ಞಾನಿ ಡಾ. ತಿಪ್ಪೇಸ್ವಾಮಿ, ಸಂಪನ್ಮೂಲ ವ್ಯಕ್ತಿಗಳು : ಇಸ್ರೋ ವಿಶ್ರಾಂತ ಹಿರಿಯ ವಿಜ್ಞಾನಿ, ಸಿ.ಡಿ. ಪ್ರಸಾದ್, ಫೋರೆನ್ಸಿಕ್ ಲ್ಯಾಬ್ ಉಪನಿರ್ದೇಶಕ ಡಾ.ವಿನೋದ್ ಜೆ.ಲಕ್ಕಪ್ಪನ್, ಮಂಗಳೂರು ವಿವಿ ಪ್ರಾಧ್ಯಾಪಕ ಪ್ರೊ.ಆರ್.ಶಂಕರ್, ಉಪಸ್ಥಿತರು : ಎಂಎಸ್‌ಎಫ್ ಅಧ್ಯಕ್ಷ ಸಿ.ಕೃಷ್ಣೇಗೌಡ, ಉಪಾಧ್ಯಕ್ಷ ಡಾ.ಟಿ. ಶಿವಲಿಂಗಸ್ವಾಮಿ, ಕೋಶಾಧ್ಯಕ್ಷ ಎಂ.ಜಿ.ಎನ್. ಪ್ರಸಾದ್, ಸ್ಥಳ: ವಿಜಯ ವಿಠ್ಠಲ ಪಿಯು ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ವಿಶ್ವಕರ್ಮ ವಿದ್ಯಾವರ್ಧಕ ಸಂಘ :** ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ಅವರಿಗೆ ಸನ್ಮಾನ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಶಾಸಕ ಕೆ.ಹರೀಶ್‌ಗೌಡ, ಅಧ್ಯಕ್ಷತೆ: ಸಂಘದ ಅಧ್ಯಕ್ಷ ಎ.ಎನ್. ಸ್ವಾಮಿ, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯರಾದ ಸಿ.ಎನ್.ಮಂಜೇಗೌಡ, ಡಾ.ಡಿ.ತಿಮ್ಮಯ್ಯ, ಸ್ಥಳ: ಸಂಘದ ಆವರಣ, ಸರಸ್ವತಿಪುರಂ, ಬೆಳಗ್ಗೆ 9.30ಕ್ಕೆ.

■ **ದಿ ಏನ್ಷಿಯೆಂಟ್ ಟೈಮ್ಸ್ :** ಕಾಯಿನ್ ಶೋ ಇಂಡಿಯಾ–2023, ಸ್ಥಳ: ಕನ್ಯಾಕಾ ಮಹಲ್, ಬೆಳಗ್ಗೆ 10ರಿಂದ.

■ **ಫೆಸ್ಟಿವಾ :** ಫ್ಯಾಷನ್ ಮತ್ತು ಲೈಫ್‌ಸ್ಟೈಲ್ ಕರಕುಶಲ ಉಡುಪುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ವಿಂಡ್ ಚಿಮ್ಸ್ ಹೋಟೆಲ್, ವಸಂತ ಮಹಲ್ ರಸ್ತೆ, ಬೆಳಗ್ಗೆ 10 ರಿಂದ.



ಇಂದಿನ ಪಂಚಾಂಗ

6.8.2023 ಭಾನುವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023ರಿಂದ 16.08.2023 ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಉಭಾ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಕರ್ನಾಟಕ ಸೈಕಲ್ ಪೋಲೋ:** ರಾಷ್ಟ್ರೀಯ ಕ್ರೀಡಾ ದಿನಾಚರಣೆ ಹಾಗೂ ಧ್ಯಾನಚಂದ್ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಮಟ್ಟದ ಸೈಕಲ್ ಪೋಲೋ ಹಾಗೂ ನಿಧಾನ ಸೈಕಲಿಂಗ್ ಸ್ಪರ್ಧೆ, ಅಧ್ಯಕ್ಷತೆ: ಶಾಸಕ ಹರೀಶ್ ಗೌಡ, ಅತಿಥಿಗಳು: ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ, ರಾಧಾ ಸೆಂದಿಲ್, ಸ್ಥಳ: ವಿಲೇಜ್ ಹಾಸ್ಟೆಲ್ ಗ್ರೌಂಡ್, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ :** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ–ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಡಿಸಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಬಸವ ಸಮಿತಿ:** ಶರಣ ಸಂಗಮ–284, ಕೌಟುಂಬಿಕ ಸಲಹೆಗಾರರಾದ ಎಂ.ಆರ್. ಶಾಂಭವಿ ಅವರಿಂದ ವಚನ ಸಾಹಿತ್ಯದಲ್ಲಿ ಪ್ರಸ್ತಾಪಗೊಂಡಿರುವಂತೆ ಮಾನಸಿಕ ಸಮಸ್ಯೆಗಳು ಮತ್ತು ಪರಿಹಾರ ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ.ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಡಾ.ಜಿ.ಪರಮೇಶ್ವರ್ ಅಭಿಮಾನಿಗಳ ಬಳಗ:** ಗೃಹಮಂತ್ರಿ ಜಿ. ಪರಮೇಶ್ವರ್ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಪೂಜೆ, ಸಿಹಿ ವಿತರಣೆ, ಉಪಸ್ಥಿತರು: ಬಳಗದ ಗೌರವಾಧ್ಯಕ್ಷ ಹೆಚ್.ಎ.ವೆಂಕಟೇಶ್, ಸ್ಥಳ: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ :** ಸಿಲ್ಕ್ ಇಂಡಿಯಾ–2023, ಪರಿಶುದ್ಧ ಸಿಲ್ಕ್ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ ರಾತ್ರಿ 8.30ರವರೆಗೆ.

■ **ಪ್ರೊ.ಕೆ.ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಬೆಂಗಳೂರು:** ವಾಣಿಜ್ಯ ತೆರಿಗೆ ಇಲಾಖೆ ವಿಶ್ರಾಂತ ಅಡಿಷನಲ್ ಕಮಿಷನರ್ ಆಲಕೆರೆ ಜೆ.ರಾಮಲಿಂಗೇಗೌಡ ಅವರು ಆಂಗ್ಲ ಭಾಷೆಯಿಂದ ಅನುವಾದಿಸಿರುವ ಫರ್ರುಕ್ ದೊಂಡಿಯವರ 'ಜಲಾಲುದ್ದೀನ್ ರುಮಿ' ಸೂಫಿ ಗೀತೆಗಳ ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ : ವಿಶ್ರಾಂತ ಪ್ರಾಂಶುಪಾಲ ಪ್ರೊ. ಎಂ. ಕೃಷ್ಣೇಗೌಡ, ಸ್ಥಳ: ರೋಟರಿ ವೆಸ್ಟ್, ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಚಾಮರಾಜನಗರ ಕೆ. ವೆಂಕಟರಾಜು, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಜಿ.ಎಂ.ಹೆಗಡೆ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.40 ನಮ್ಮ ಆರೋಗ್ಯ–ನವಜಾತ ಶಿಶುಗಳ ಆರೈಕೆ ಮತು ಸ್ತನ್ಯಪಾನದ ಅಗತ್ಯ ಕುರಿತು ಡಾ.ರವೀಶ್ ಎಸ್.ಆರ್.ಅವರೊಂದಿಗೆ ಮಾತುಕತೆ. ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ–ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳ ಮಂಟಪ–ನೆಲೆ ಹಿನ್ನೆಲೆ ಸಂಸ್ಥೆ ಏರ್ಪಡಿಸಿದ್ದ ಬೇಸಿಗೆ ಶಿಬಿರದ ಮಕ್ಕಳಿಂದ ನಾಟಕ "ಚೆನ್ನ ಭೈರಾದೇವಿ", 11.00ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಪಿ.ಎಸ್.ರಂಜನಿ, 12.45 ಜನಪದ ಸಂಗೀತ–ಹಳೇಪುರದ ಮಾದಶೆಟ್ಟಿ ಮತ್ತು ಸಂಗಡಿಗರು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ಆರ್.ರಮಾದೇವಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಸ್ವರಾಜ್–ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಶಾಂಭವಿ ವಿಲಾಸ, ಪ್ರಸ್ತುತಿ– ಬಂಟ್ವಾಳ ತಾ. ಕೊಡಪದವಿನ ಮುಳಿಯ ಗೋವಿಂದ ಭಟ್ ಮತ್ತು ಸಂಗಡಿಗರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಪಶುರಂಗ–ಪ್ರಾಣಿ ಜನ್ಯ ಆಹಾರ ಮತ್ತು ಸಾರ್ವಜನಿಕ ಆರೋಗ್ಯ ಕುರಿತು ಡಾ.ಎಸ್.ರಾಜೇಶ್ ಅವರೊಂದಿಗೆ ಸಂದರ್ಶನ, 8.00 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ–ಬಾನುಲಿ ಸರಣಿ 'ನೆಲೆ' ಸಂಸ್ಥೆಯ ಶ್ರೀಪತಿ ಎ.ಅವರೊಂದಿಗೆ ಸಂವಾದ, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ರೆಡ್ಡಿಯೂರು ಶಿವ ವಡಿವೇಲ್–ನಾಗಸ್ವರಮ್

■ **ಸಂವಹನ ಪ್ರಕಾಶನ :** ಹಿರಿಯ ಪತ್ರಕರ್ತರು ಹಾಗೂ 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿಯವರ 'ಲೈಫ್ ಅಂಡ್ ಟೈಮ್ಸ್' ಪುಸ್ತಕ ಬಿಡುಗಡೆ ಸಮಾರಂಭ, ಕೃತಿ ಲೋಕಾರ್ಪಣೆ : ಅರುಣಾಚಲ ಪ್ರದೇಶದ ಇಟಾ ನಗರದ ರಾಜೀವ್ ಗಾಂಧಿ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ. ಬೆಳ್ಳಿಯಪ್ಪ, ಅಧ್ಯಕ್ಷತೆ : ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ, ಕೃತಿ ಕುರಿತು ಮಾತನಾಡುವವರು: ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಸಿ.ನಾಗಣ್ಣ, ಮುಖ್ಯ ಅತಿಥಿಗಳು: ರಾಜ್ಯ ಕೈಗಾರಿಕಾ ಮತ್ತು ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ, ಉಪಸ್ಥಿತರು: ಲೇಖಕ ಕೆ.ಬಿ.ಗಣಪತಿ, ಸಂವಹನ ಪ್ರಕಾಶನದ ಪ್ರಕಾಶಕ ಡಿ.ಎನ್.ಲೋಕಪ್ಪ, ಸ್ಥಳ :ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಬೆಳಗ್ಗೆ 11ಕ್ಕೆ

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಯಜ್ಞ, ವಿದ್ವಾನ್ ಬಿದರಹಳ್ಳಿ ಕೃಷ್ಣಾಚಾರ್ಯ ಅವರಿಂದ ಅರಣ್ಯಕಾಂಡ ಕುರಿತು ಪ್ರವಚನ, ಸ್ಥಳ: ಮಠದ ಆವರಣ, ಕೃಷ್ಣಮೂರ್ತಿಪುರಂ. ಸಂಜೆ 6 ರಿಂದ 7ರವರೆಗೆ.

■ **ನಮೋ ಯೋಗ ಭವನ :** ಯೋಗ ನಮನ ಕಾರ್ಯಕ್ರಮ, ಪ್ರಾಸ್ತಾವಿಕ ನುಡಿ: ರಾಷ್ಟ್ರೀಯ ಯೋಗ ಚಾಂಪಿಯನ್ ಯೋಗ ಪ್ರಕಾಶ್, ಅಧ್ಯಕ್ಷತೆ: ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ನಮೋ ಯೋಗ ಭವನ, ಸಂಜೆ 6ಕ್ಕೆ.

■ **ನೂಪುರ ಕಲಾವಿದರು ಸಾಂಸ್ಕೃತಿಕ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ನೂಪುರೋತ್ಸವ, ಸಂಜೆ 6.30 ರಿಂದ ವಿದುಷಿ ಮಮತಾ ಜಿ. ನಾಡಿಗೇರ್ ಶಿಷ್ಯ ವೃಂದ ಶ್ರೀ ಮಾರ್ತಾಂಡ ನೃತ್ಯ ಮತ್ತು ಸಂಗೀತ ಕಲಾಸಂಸ್ಥೆ ರಾಣಿಬೆನ್ನೂರು ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ವಿದುಷಿ ಜ್ಯೋತಿ ಹೆಗ್ಡೆಯವರ ಶಿಷ್ಯ ವೃಂದ ಲಾಸ್ಯರಂಜನ ನೃತ್ಯಶಾಲೆ ಅವರಿಂದ ಭರತನಾಟ್ಯ, ಸ್ಥಳ: ಗಾನಭಾರತೀ, ರಮಾಗೋವಿಂದ ಕಲಾವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಸಕಾರಾತ್ಮಕ ಬದಲಾವಣೆಯ ವರ್ಷ: 2023–24, ಕಾರ್ಯಯೋಜನೆಯ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದಿಕ್ಸೂಚಿ ಭಾಷಣ : ರಾಜಯೋಗಿನಿ ಬ್ರಹ್ಮಾಕುಮಾರಿ ಆಶಾಜಿ, ಅಧ್ಯಕ್ಷತೆ: ರಾಜಯೋಗಿನಿ ಬ್ರಹ್ಮಾಕುಮಾರಿ ಲಕ್ಷ್ಮೀಜಿ, ಮುಖ್ಯ ಅತಿಥಿಗಳು: ಡಿಸಿ ಡಾ.ಕೆ.ವಿ.ರಾಜೇಂದ್ರ, ವಿಶೇಷ ಅತಿಥಿಗಳು: ಭೂ ದಾಖಲೆಗಳ ಜಂಟಿ ನಿರ್ದೇಶಕ ರಮೇಶ್, ಸ್ಥಳ: ಜ್ಞಾನಪ್ರಕಾಶ ಭವನ, ಸಂಜೆ 6.30ಕ್ಕೆ.

■ **ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟ :** ಶಿವದೂತಗುಳಿಗ ನಾಟಕ ಪ್ರದರ್ಶನ, ನಿರ್ದೇಶನ: ವಿಜಯಕುಮಾರ ಕೊಡಿಯಾಲಬೈಲ್, ಸ್ಥಳ: ಕಲಾಮಂದಿರ, ಮ. 2.30ಕ್ಕೆ ಹಾಗೂ ಸಂಜೆ 6.30ಕ್ಕೆ.

■ **ರಂಗಾಯಣ :** ಮೈಸೂರಿನ ವರ್ಣ ಕಲೆಕ್ಟಿವ್ ತಂಡದಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ: ಆರ್. ನಾಗೇಶ್, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ.

ಮಂಡ್ಯದಲ್ಲಿ ಗೃಹಜ್ಯೋತಿ ಯೋಜನೆಗೆ ಚಾಲನೆ

ಚುನಾವಣಾ ಪೂರ್ವ ಭರವಸೆಗಳನ್ನು ನಮ್ಮ ಸರ್ಕಾರ ಈಡೇರಿಸುತ್ತಿದೆ: ಚಲುವರಾಯಸ್ವಾಮಿ



ಮಂಡ್ಯ, ಆ.5– ಚುನಾವಣೆಗೂ ಮುನ್ನ ರಾಜ್ಯದ ಜನತೆಗೆ ಕಾಂಗ್ರೆಸ್ ನೀಡಿದ್ದ ಎಲ್ಲಾ ಭರವಸೆಗಳನ್ನು ಅಧಿಕಾರಕ್ಕೆ ಬಂದಿರುವ ನಮ್ಮ ಸರ್ಕಾರ ಈಡೇರಿಸುತ್ತಿದ್ದು, ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ನುಡಿದಂತೆ ನಡೆಯುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಶನಿವಾರ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಆಯೋಜಿಸಿದ್ದ 'ಗೃಹಜ್ಯೋತಿ' ಕಾರ್ಯಕ್ರಮಕ್ಕೆ ಚಾಲನೆ ನೀಡಿ, ನಾಗಮಂಗಲದ ಪ್ರಕಾಶ್, ಕುಮಾರ್, ತಜಾಲ್ ಪಾಷ, ರಹೀಂ ಉನ್ನೀಸ್ ಸೇರಿದಂತೆ ಆಯ್ದ ಫಲಾನುಭವಿ ವಿದ್ಯುತ್ ಗ್ರಾಹಕರಿಗೆ ಶೂನ್ಯ ಬಿಲ್ ವಿತರಿಸಿದರು.

ಆಯವ್ಯಯದಲ್ಲಿ 35 ಸಾವಿರ ಕೋಟಿಯನ್ನು 5 ವಿವಿಧ ಯೋಜನೆಗಳಿಗೆ ಮೀಸಲಿಡಲಾಗಿದೆ. ಶಕ್ತಿ ಯೋಜನೆಯಡಿ ಮಹಿಳೆಯರು ಉಚಿತವಾಗಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದಾರೆ. ಅನ್ನಭಾಗ್ಯ ಯೋಜನೆಯಡಿ ನೀಡಲಾದ 5 ಕೆಜಿ ಆಹಾರ ಧಾನ್ಯದ ಹಣವನ್ನು ಜನರು ತರಕಾರಿ ಹಾಗೂ ಇನ್ನಿತರ ಆಹಾರ ಪದಾರ್ಥಗಳನ್ನು ಖರೀದಿಸಿ ಸಂತೋಷ ವ್ಯಕ್ತಪಡಿಸಿದ್ದಾರೆ ಎಂದರು.

ಜಿಲ್ಲೆಯಲ್ಲಿ 500438 ವಿದ್ಯುತ್ ಗ್ರಾಹಕರಿದ್ದು, 496097 ವಿದ್ಯುತ್ ಗ್ರಾಹಕರು 200 ಯುನಿಟ್ ಒಳಗಡೆ ಉಪಯೋಗಿಸುತ್ತಿದ್ದು, ಗೃಹಜ್ಯೋತಿ ಯೋಜನೆಗೆ ಅರ್ಹರಾಗಿರುತ್ತಾರೆ. ಜುಲೈ ಅಂತ್ಯದವರೆಗೆ 433266 ಗ್ರಾಹಕರು ನೋಂದಣಿ ಮಾಡಿಕೊಂಡಿದ್ದು, 200 ಯುನಿಟ್‌ಕ್ಕಿಂತ ಹೆಚ್ಚು ಯುನಿಟ್‌ನ್ನು 4341 ವಿದ್ಯುತ್ ಗ್ರಾಹಕರು ಬಳಸುತ್ತಿದ್ದಾರೆ ಎಂದು ವಿವರಿಸಿದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಭವಿಷ್ಯದ ದೃಷ್ಟಿಯಿಂದ ಬಡವರು, ಶ್ರೀಮಂತರ ನಡುವಿನ ಅಂತರ ಕಡಿಮೆ ಮಾಡುವಲ್ಲಿ ಸಹಕಾರಿಯಾಗುವಂತಹ ಯೋಜನೆಗಳನ್ನು ರೂಪಿಸಿ ಸರ್ಕಾರ ಜಾರಿಗೆ ತರುತ್ತಿದೆ. ಅದರಲ್ಲಿ ಶಕ್ತಿ ಯೋಜನೆ ಅಡುಗೆ ಮನೆಯಲ್ಲಿದ್ದ ಮಹಿಳೆಯರನ್ನು ನಿರ್ಭಯವಾಗಿ ಹೊರಗಡೆ ಆರ್ಥಿಕ ಪರಿಸ್ಥಿತಿ ಚಿಂತಿಸದೇ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತವಾಗಿ ಓಡಾಡುವ ಶಕ್ತಿ ನೀಡಿದೆ ಎಂದರು.

ಶಾಸಕ ಗಣಿಗ ರವಿಕುಮಾರ್ ಮಾತನಾಡಿ, ಜಿಲ್ಲೆಯ 80ರಷ್ಟು ವಿದ್ಯುತ್ ಗ್ರಾಹಕರು ಗೃಹಜ್ಯೋತಿ ಯೋಜನೆಯಡಿ ನೋಂದಣಿ ಮಾಡಿಕೊಂಡಿದ್ದಾರೆ. ಜನರ ತೆರಿಗೆ ಹಣವನ್ನು ವಿವಿಧ ಯೋಜನೆಗಳಡಿ ಜನರಿಗೆ ನೀಡಲಾಗುತ್ತಿದೆ. ಗೃಹಜ್ಯೋತಿ, ಶಕ್ತಿ ಹಾಗೂ ಅನ್ನಭಾಗ್ಯ ಯೋಜನೆಯಿಂದ ಉಳಿತಾಯವಾಗುತ್ತಿರುವ ಹಣವನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಸಲಹೆ ನೀಡಿದರು.

ಮಂಡ್ಯ ತಾಲೂಕಿಗೆ ಇಂಧನ ಇಲಾಖೆಯಿಂದ ವಿದ್ಯುತ್ ಸರಬರಾಜಿಗೆ ತೊಂದರೆಯಾಗದಂತೆ ನೋಡಿಕೊಳ್ಳಲು 400 ಕೆವಿ ಸ್ಥಾವರವನ್ನು ಹಂಪಾಪುರದಲ್ಲಿ ಸ್ಥಾಪಿಸಲಾಗುತ್ತಿದೆ. ಇದರ ಯೋಜನಾ ವೆಚ್ಚ 600 ಕೋಟಿ ರೂ. ಆಗಿರುತ್ತದೆ. 30 ಕೋಟಿ ರೂ. ವೆಚ್ಚದಲ್ಲಿ ಬೇಬಿ ಮತ್ತು ಹುಲಿವಾಹನಕ್ಕೆ 12 ಕೆವಿ 2 ಸ್ಟೇಷನ್ ಪ್ರಾರಂಭಿಸಲಾಗುವುದು. ಮಂಡ್ಯ ನಗರದ ಅಭಿವೃದ್ಧಿಗಾಗಿ 25 ಕೋಟಿ ರೂ. ಹಾಗೂ ಮೈಷುಗರ್ ಸಕ್ಕರೆ ಕಾರ್ಖಾನೆ ಅಭಿವೃದ್ಧಿಗಾಗಿ 50 ಕೋಟಿ ರೂ. ಅನುದಾನ ಸರ್ಕಾರ ನೀಡಿದೆ ಎಂದರು.

ವೇದಿಕೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ್, ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್, ಎಸ್ಪಿ ಎನ್.ಯತೀಶ್, ಚೆಸ್ಕಾಂ ಅಧೀಕ್ಷಕ ಇಂಜಿನಿಯರ್ ಕೃಷ್ಣಮೂರ್ತಿ ಸೇರಿದಂತೆ ಇತರರಿದ್ದರು.

ಭೂ ಸ್ವಾಧೀನಕ್ಕೆ ವೈಜ್ಞಾನಿಕ ಪರಿಹಾರ ನೀಡದ ಹಿನ್ನೆಲೆ

ಹೆದ್ದಾರಿ ಕಾಮಗಾರಿಗೆ ಅಡ್ಡಿಪಡಿಸಿ ರೈತರಿಂದ ಪ್ರತಿಭಟನೆ



ಕೆ.ಆರ್.ಪೇಟೆ, ಆ.5– ಭೂ ಸ್ವಾಧೀನಕ್ಕೆ ವೈಜ್ಞಾನಿಕ ಪರಿಹಾರ ನೀಡದೆ ಪೊಲೀಸರ ಸರ್ಪಗಾವಲಿನಲ್ಲಿ ಬೆಂಗಳೂರು–ಜಲಸೂರು ರಾಜ್ಯ ಹೆದ್ದಾರಿಯ ಕೆ.ಆರ್.ಪೇಟೆ ಬೈಪಾಸ್ ಕಾಮಗಾರಿ ಆರಂಭಿಸಿದ ಕೆಎನ್‌ಆರ್‌ಸಿಎಲ್ ಕಂಪನಿ ಇಂಜಿನಿಯರ್‌ಗಳು ಹಾಗೂ ಕೆಶಿಪ್ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರೈತರು, ಕಾಮಗಾರಿಗೆ ಅಡ್ಡಿಪಡಿಸಿ ಪ್ರತಿಭಟನೆ ನಡೆಸಿದರು.

ತಾಲೂಕಿನ ಅಗ್ರಹಾರ ಬಾಚಹಳ್ಳಿ ಗೇಟ್ ಬಳಿ ಜಮಾಯಿಸಿದ ಅಗ್ರಹಾರಬಾಚಹಳ್ಳಿ, ಬಿ.ಕೋಡಿಹಳ್ಳಿ, ಚಿಕ್ಕೋನಹಳ್ಳಿ ಹಾಗೂ ಕೆ.ಆರ್.ಪೇಟೆ ರೈತರು ಎತ್ತಿನಗಾಡಿ ಸಮೇತ ರಸ್ತೆಗಿಳಿದು ಕಾಮಗಾರಿಗೆ ಅಡ್ಡಿಪಡಿಸಿದರು. ಹೆದ್ದಾರಿ ನಿರ್ಮಾಣಕ್ಕೆ ಭೂಮಿ ನೀಡಿದ ರೈತರಿಗೆ ನೀಡಿದ ಪರಿಹಾರದಲ್ಲಿ ತಾರತಮ್ಯ ಮಾಡಲಾಗಿದೆ. ರೈತರ ಭೂಮಿಗೆ ವೈಜ್ಞಾನಿಕ ದರ ನೀಡಿಲ್ಲ. ಕೆಶಿಪ್ ಅಧಿಕಾರಿಗಳು ಮುಗ್ಧ ರೈತನಿಗೆ ಒಂದು ಗುಂಟೆ ಜಮೀನಿಗೆ 25 ಸಾವಿರ ರೂ. ನೀಡಿದರೇ, ಕೋರ್ಟ್‌ಗೆ ದಾವೆ ಹಾಕಿದ ರೈತರಿಗೆ ಗುಂಟೆಗೆ 3 ಲಕ್ಷ ರೂ. ಪರಿಹಾರ ನೀಡಿದ್ದಾರೆ. ಆ ಮೂಲಕ ರೈತರಿಗೆ ಅಧಿಕಾರಿಗಳು ಮೋಸ ಮಾಡಿದ್ದಾರೆ. ಹೀಗಾಗಿ ತಾರತಮ್ಯ ಸರಿಪಡಿಸಿ ಕಾಮಗಾರಿ ಆರಂಭಿಸುವಂತೆ ರೈತರು ಪಟ್ಟು ಹಿಡಿದು ರಸ್ತೆ ಕಾಮಗಾರಿ ತಡೆದು ಪ್ರತಿಭಟನೆಗೆ ಇಳಿದರು.

ವಿಷಯ ತಿಳಿದು ಅಗ್ರಹಾರಬಾಚಹಳ್ಳಿ ಗೇಟ್‌ಗೆ ಆಗಮಿಸಿದ ಶಾಸಕ ಹೆಚ್.ಟಿ.ಮಂಜು, ಪಾಂಡವಪುರ ಎಸಿ ನಂದೀಶ್ ಹಾಗೂ ಕೆಶಿಪ್ ಕಾರ್ಯಪಾಲಕ ಅಭಿಯಂತರ ಶಿವನಂಜೇಗೌಡ ಅವರೊಂದಿಗೆ ಸಮಾಲೋಚನೆ ನಡೆಸಿ, ರಾಜ್ಯ ಹೆದ್ದಾರಿ ಕಾಮಗಾರಿಗಾಗಿ ರೈತರು ತಮ್ಮ ಬೆಲೆಬಾಳುವ ಭೂಮಿ ಕಳೆದುಕೊಂಡಿದ್ದಾರೆ. ಭೂಮಿಗೆ ವೈಜ್ಞಾನಿಕ ಪರಿಹಾರ ನೀಡಿ, ಅನ್ಯಾಯಕ್ಕೆ ಒಳಗಾಗಿರುವ ರೈತರಿಗೆ ನ್ಯಾಯ ದೊರಕಿಸಿಕೊಟ್ಟು ನಂತರ ರಸ್ತೆ ಕಾಮಗಾರಿ ಆರಂಭಿಸಿ ಎಂದರು.

ಇದಕ್ಕೆ ಉತ್ತರಿಸಿದ ಅಧಿಕಾರಿಗಳು ಯಾರಿಗೆ ಅನ್ಯಾಯವಾಗಿದೆ ಅಂತಹ ರೈತರು ಕೋರ್ಟ್‌ಗೆ ದಾವೆ ಹಾಕಿ ಕೋರ್ಟ್ ಆದೇಶದಂತೆ ನಾವು ನಡೆದುಕೊಳ್ಳುತ್ತೇವೆ ಎಂದರು. ಈ ವೇಳೆ ಕಾಮಗಾರಿ ನಡೆಯಲು ಬಿಡದ ರೈತರನ್ನು ನಾಗಮಂಗಲ ಡಿವೈಎಸ್‌ಪಿ ಲಕ್ಷ್ಮಿನಾರಾಯಣ ಪ್ರಸಾದ್ ನೇತೃತ್ವದಲ್ಲಿ ಪಟ್ಟಣದ ಪೊಲೀಸರು ಬಂಧಿಸಿ, ಬಳಿಕ ಬಿಡುಗಡೆ ಮಾಡಿದರು.

ಪ್ರತಿಭಟನೆಯಲ್ಲಿ ತಾಲೂಕು ಕರವೇ ಪದವೀಧರ ಘಟಕದ ಅಧ್ಯಕ್ಷ ಚೇತನ್ ಕುಮಾರ್, ತಾಲೂಕು ಕಾರ್ಯದರ್ಶಿ ಟೆಂಪೋ ಶ್ರೀನಿವಾಸ್, ಗ್ರಾಪಂ ಮಾಜಿ ಸದಸ್ಯ ಎ.ಸಿ.ಮುರುಳಿ, ಜಯಣ್ಣ ಮತ್ತಿತರರಿದ್ದರು.

ಪ್ರತಿಭಟನಾನಿರತ ರೈತರೊಂದಿಗೆ ಸಮಾಲೋಚನೆ ನಡೆಸಿದ ಸಂದರ್ಭ ಪಾಂಡವಪುರ ಎಸಿ ನಂದೀಶ್, ತಹಸೀಲ್ದಾರ್ ನಿಸರ್ಗಪ್ರಿಯ, ನಾಗಮಂಗಲ ಡಿವೈಎಸ್‌ಪಿ ಲಕ್ಷ್ಮಿನಾರಾಯಣ ಪ್ರಸಾದ್, ಕೆ.ಆರ್.ಪೇಟೆ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಎಂ.ಕೆ.ದೀಪಕ್, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಜಗದೀಶ್, ಮೇಲುಕೋಟೆ ಠಾಣೆ ಇನ್ಸ್‌ಪೆಕ್ಟರ್ ಸುಮರಾಣಿ, ಎಸ್‌ಐ ಸುನೀಲ್ ಸೇರಿದಂತೆ ನೂರಾರು ಪೊಲೀಸರಿದ್ದರು.

ಪುಟ್ಟಲಿಂಗೇಗೌಡ ನಿಧನ



ಭಾರತೀನಗರ, ಆ.5– ಇಲ್ಲಿಗೆ ಸಮೀಪದ ಮಣಿಗೆರೆ ಗ್ರಾಮದ ಯಜಮಾನ್ ಪುಟ್ಟಲಿಂಗೇಗೌಡ(73) ಶನಿವಾರ ನಿಧನರಾದರು.

ಮೃತರು ಇಬ್ಬರು ಪುತ್ರರು, ಮೂರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ಜಮೀನಿನಲ್ಲಿ ಭಾನುವಾರ ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಡುಗಡೆ: ಪ್ರತಿಭಟನೆ



ಮಂಡ್ಯ, ಆ.5– ಕೆಆರ್‌ಎಸ್‌ನಿಂದ ತಮಿಳುನಾಡಿಗೆ ನೀರು ಬಿಡುಗಡೆ ಮಾಡಿರುವುದನ್ನು ಖಂಡಿಸಿ ನಗರದಲ್ಲಿ ರೈತರು ದಿಢೀರ್ ಪ್ರತಿಭಟನೆ ನಡೆಸಿದರು.

ನಗರದ ಜಯ ಚಾಮರಾಜೇಂದ್ರ ವೃತ್ತದಲ್ಲಿ ರೈತ ಸಂಘದ ಆಶ್ರಯದಲ್ಲಿ ರೈತರು ಪ್ರತಿಭಟಿಸಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ, ಆಕ್ರೋಶ ವ್ಯಕ್ತಪಡಿಸಿದರು.

ತಮಿಳುನಾಡಿಗೆ ಕೆಆರ್‌ಎಸ್‌ನಿಂದ 5308 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ. ನಾಲೆಗಳಿಗೆ ಬಿಡುಗಡೆ ಮಾಡಿದ್ದ ನೀರನ್ನು ಸ್ಥಗಿತಗೊಳಿಸಲಾಗಿದೆ. ತಮಿಳುನಾಡಿಗೆ ಬಿಡುಗಡೆ ಮಾಡಿರುವ ನೀರು ನಿಲ್ಲಿಸಿ, ನಾಲೆಗೆ ನೀರು ಹರಿಸಿ ಎಂದು ಒತ್ತಾಯಿಸಿದರು.

ರೈತರ ಬೆಳೆಗಳಿಗೆ ನೀರು ಬಿಡುಗಡೆ ಬಗ್ಗೆ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸಚಿವ, ಶಾಸಕರು ತಿಳಿಸಿದ್ದು, ಇದೇ ವೇಳೆ ಕಾವೇರಿ ನೀರಾವರಿ ನಿಗಮ ಅಧಿಕಾರಿಗಳು ತಮಿಳುನಾಡಿಗೆ ನೀರು ಬಿಟ್ಟಿರುವುದು ಏಕೆ ಎಂದು ರೈತರು ಕಿಡಿಕಾರಿದರು.

ಕೊಡಗಿನಲ್ಲಿ ಭಾರೀ ಮಳೆಯಾದ ಕಾರಣ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಮಟ್ಟ ಹೆಚ್ಚಿದೆ. ಈಗಾಗಲೇ ಕೆಆರ್‌ಎಸ್‌ನಲ್ಲಿ 113 ಅಡಿ ನೀರು ತುಂಬಿದೆ ಜಲಾಶಯ ಸಂಪೂರ್ಣ ಭರ್ತಿಯಾಗಲು ಇನ್ನೂ 11 ಅಡಿ ಬಾಕಿ ಇರುವಾಗಲೇ ತಮಿಳುನಾಡು ರಾಜ್ಯದ ಹಿತಕಾಯಲು ಮುಂದಾಗಿದ್ದು, ಸ್ಥಳೀಯ ರೈತರ ಬೆಳೆಯನ್ನು ಒಣಗಿಸುವಂತೆ ಮಾಡಲಾಗಿದೆ ಎಂದು ದೂರಿದರು.

ರೈತ ಸಂಘದ ತಾಲೂಕು ಅಧ್ಯಕ್ಷ ಚಂದ್ರಶೇಖರ್ ಮಾತನಾಡಿ, ತಮಿಳುನಾಡಿಗೆ ನೀರು ಬಿಟ್ಟಿರುವುದು ರೈತರಿಗೆ ಅನ್ಯಾಯ ಮಾಡಿದಂತೆ. ರೈತರ ಬೆಳೆಗೆ ನೀರಿಲ್ಲದಿರುವಾಗ ನೀರು ಬಿಟ್ಟು, ಸರ್ಕಾರ ಅವನತಿಯೆಡೆಗೆ ಸಾಗಿದೆ. ಈ ಹಿಂದೆಯೂ ಬಿಜೆಪಿ ಇದನ್ನೇ ಮಾಡಿದ್ದು, ಈಗ ಏನಾಗಿದೆ ಎಂಬುದನ್ನು ಅರ್ಥ ಮಾಡಿಕೊಂಡು ಕಾಂಗ್ರೆಸ್ ನಡೆಯಬೇಕು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಮುಖಂಡರಾದ ಬೊಮ್ಮೇಗೌಡ, ಲತಾ ಶಂಕರ್, ಜವರೇಗೌಡ, ನಾಗರಾಜು, ಗೋಪಾಲಪುರ ಸುರೇಶ್, ಪುಟ್ಟಸ್ವಾಮಿ, ತಮ್ಮೇಗೌಡ ಮತ್ತಿತರರಿದ್ದರು.

ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ

ಇಡೀ ಗೌಡರ ಕುಟುಂಬವೇ ರಾಜಕಾರಣ ಮಾಡುತ್ತಿತ್ತು

ಮಂಡ್ಯ, ಆ.5– ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಸಂದರ್ಭ ಇಡೀ ಹೆಚ್.ಡಿ.ದೇವೇಗೌಡರ ಕುಟುಂಬವೇ ರಾಜಕಾರಣ ಮಾಡುತ್ತಿತ್ತು. ಆಗ ಸುಮ್ಮನಿದ್ದ ಕುಮಾರಸ್ವಾಮಿ ಇದೀಗ ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ವಿರುದ್ಧ ವರ್ಗಾವಣೆ, ಅಧಿಕಾರಿಗಳ ಸಭೆ ನಡೆಸುತ್ತಿದ್ದಾರೆ ಹಾಗೂ ಭ್ರಷ್ಟಾಚಾರದ ಆರೋಪ ಮಾಡುತ್ತಿದ್ದಾರೆ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಕಿಡಿಕಾರಿದರು.

ಶನಿವಾರ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ, ಬೊಮ್ಮಾಯಿ, ಕುಮಾರಸ್ವಾಮಿ ಎಲ್ಲರ ಕಾಲದಲ್ಲೂ ವರ್ಗಾವಣೆಗಳಾಗಿದ್ದು, ಮಾಜಿ ಮುಖ್ಯಮಂತ್ರಿಯಾದವರು ಸರ್ಕಾರದ ಬಗ್ಗೆ ಹಗುರವಾಗಿ ಮಾತನಾಡುವುದು ಅವರ ಗೌರವಕ್ಕೆ ತಕ್ಕದ್ದಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಮುತ್ಸದ್ದಿ ರಾಜಕಾರಣಿ ಹೆಚ್.ಡಿ. ದೇವೇಗೌಡರ ಪುತ್ರರಾಗಿ ಸುಳ್ಳು ಆರೋಪಗಳನ್ನು ಮಾಡುವುದು ಸರಿಯಲ್ಲ. ಪ್ರತಿ ಸರ್ಕಾರದಲ್ಲೂ ಸಾಮಾನ್ಯವಾಗಿರುವ ವರ್ಗಾವಣೆ ವಿಚಾರವನ್ನು ಸ್ವತಃ ದೇವೇಗೌಡರು ತಪ್ಪು ಎಂದು ಒಪ್ಪಿಕೊಳ್ಳಲಿ. ಕಾಂಗ್ರೆಸ್‌ನ ಅಭಿವೃದ್ಧಿಪರ ಆಡಳಿತ ಸಹಿಸಲು ಕುಮಾರಸ್ವಾಮಿಗೆ ಆಗುತ್ತಿಲ್ಲ ಎಂದು ಆರೋಪಿಸಿದರು.

ಅಧಿಕೃತ ಪ್ರತಿಪಕ್ಷವಾಗಿರುವ ಬಿಜೆಪಿಯವರು ಏನೂ ಮಾತನಾಡುತ್ತಿಲ್ಲ ಇಲ್ಲಸಲ್ಲದ್ದನ್ನು ಕುಮಾರಸ್ವಾಮಿ ಮಾತನಾಡುತ್ತಿದ್ದು, ಅವರನ್ನು ಬಿಜೆಪಿಯವರು ವಕ್ತಾರರನ್ನಾಗಿ ನೇಮಕ ಮಾಡಿರಬೇಕು. ನಮ್ಮ ಉಚಿತ ಯೋಜನೆಗಳ ಬಗ್ಗೆ ಜನರಿಗೆ ಖುಷಿ ಇದೆ. ಈ ಖುಷಿ ತಣ್ಣಗೆ ಮಾಡಲು ಕುಮಾರಸ್ವಾಮಿ ಹೀಗೆ ಮಾತಾಡುತ್ತಿದ್ದಾರೆ. ಕುಮಾರಸ್ವಾಮಿ ಸಿಎಂ ಆದಾಗ ಕೊಟ್ಟ ಭರವಸೆ ಈಡೇರಿಸಲಿಲ್ಲ. ಯಾಕೆ ಅಂತಾ ಕೇಳಿದರೆ ಸಮ್ಮಿಶ್ರ ಸರ್ಕಾರ ಅಂತಾ ಹೇಳುತ್ತಿದ್ದರು. ಆಗ ಸಿಎಂ ಕುರ್ಚಿ ಇದ್ದಿದ್ದು ಒಂದೇ, ಎರಡಲ್ಲ. ಸಹಿ ಹಾಕುತ್ತಿದ್ದು ಸಹ ಅವರ ಪೆನ್‌ನಲ್ಲೇ ಜೊತೆಗೆ ಹಣಕಾಸು ಸಚಿವರು ಸಹ ಅವರೇ ಆಗಿದ್ದರು. ಆದರೆ ಜನರಿಗೆ ಕೊಟ್ಟ ಭರವಸೆ ಈಡೇರಿಸಲಿಲ್ಲ ಎಂದು ಕಿಡಿಕಾರಿದರು. ತಮಿಳುನಾಡಿಗೆ ನೀರು ಬಿಟ್ಟಿರುವ ಬಗ್ಗೆ ಮಾತನಾಡಿ, ಕೆಆರ್‌ಎಸ್‌ನಲ್ಲಿ 113 ಅಡಿ ನೀರು ಇದೆ. ಕುಡಿಯುವ ನೀರು ಹಾಗೂ ಮಳೆ ಆತಂಕ ಇದೆ. ಒಂದು ವೇಳೆ ಈಗ ನೀರು ಬಿಟ್ಟರೆ, ಮುಂದೆ ಮಳೆ ಬೀಳದಿದ್ದರೆ ಆಗ ಬೆಳೆದ ಬೆಳೆಗಳಿಗೆ ನೀರಿನ ಸಮಸ್ಯೆ ಎದುರಾಗುತ್ತದೆ. ಹೀಗಾಗಿ ಈ ಬಗ್ಗೆ ನಾವು ಚರ್ಚೆ ಮಾಡುತ್ತಿದ್ದು, ಈ ವಾರದಲ್ಲಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಜೊತೆ ಸಭೆ ನಡೆಸುತ್ತೇವೆ. ಆಗ ನೀರು ಹೇಗೆ ಕೊಡಬೇಕು ಎನ್ನುವುದು ಜನಪ್ರತಿನಿಧಿಗಳು, ಅಧಿಕಾರಿಗಳ ಜೊತೆ ಚರ್ಚಿಸಿ ತೀರ್ಮಾನಿಸುತ್ತೇವೆ ಎಂದರು.

ಈ ತಿಂಗಳು 11ರ ಮೇಲೆ ಮಳೆ ಬೀಳುತ್ತೆ ಎಂಬ ಸುದ್ದಿ ಇದೆ ಇದೆಲ್ಲಾ ನೋಡಿಕೊಂಡು ತೀರ್ಮಾನ ಮಾಡಿಕೊಳ್ಳುತ್ತೇವೆ. ತಮಿಳುನಾಡು ಸಿಎಂ ಕೇಂದ್ರಕ್ಕೆ ಹೋಗಿ ಒತ್ತಾಯ ಮಾಡುತ್ತಿದ್ದಾರೆ. ನ್ಯಾಯಾಲಯದ ಹಂಚಿಕೆ ಪ್ರಕಾರ ನೀರು ಕೊಡಿ ಎಂದು ಕೇಳುತ್ತಿದ್ದಾರೆ. ನಮ್ಮಲ್ಲೂ ಕುಡಿಯಲು, ವ್ಯವಸಾಯ ಎರಡಕ್ಕೂ ನೀರು ಬೇಕಾಗಿದೆ. ಕಳೆದ 15 ದಿನಗಳಿಂದ ತಮಿಳುನಾಡು ಒತ್ತಡ ಮಾಡುತ್ತಿದೆ. ಹೀಗಾಗಲೇ ನೀರಾವರಿ ಸಚಿವರು ಹಾಗೂ ಅಧಿಕಾರಿಗಳು ಕೇಂದ್ರಕ್ಕೆ ಮನವರಿಕೆ ಮಾಡಿದ್ದಾರೆ ಎಂದರು.

ನೈಸ್ ಯೋಜನೆ ಅವ್ಯವಹಾರ ಸಿಬಿಐ ತನಿಖೆಗೆ ಮಾಜಿ ಸಿಎಂ ಕುಮಾರಸ್ವಾಮಿ ಪ್ರಧಾನಿ ಮೋದಿ ಮೊರೆ

- ಸದ್ಯದಲ್ಲೇ ಪ್ರಧಾನಿ, ಗೃಹ ಸಚಿವ ಅಮಿತ್ ಷಾ, ಭೇಟಿಯಾಗಲು ನಿರ್ಧಾರ
- ಸರ್ಕಾರದ ಪ್ರಭಾವಿಯೊಬ್ಬರಿಂದ ಪೆರಿಫೆರಲ್ ರಿಂಗ್ ರಸ್ತೆ ವಿಚಾರದಲ್ಲಿ ನೈಸ್‌ಗೆ ಸಾಥ್!

ಬೆಂಗಳೂರು, ಆ.5(ಕೆಎಂಶಿ)–ಬೆಂಗಳೂರು–ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್(ನೈಸ್) ಯೋಜನೆಯಲ್ಲಿ ನಡೆದಿರುವ ಕೋಟ್ಯಾಂತರ ರೂ. ಅವ್ಯವಹಾರವನ್ನು ಸಿಬಿಐ ತನಿಖೆಗೆ ವಹಿಸುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೈಸ್ ಅವ್ಯವಹಾರದ ದಾಖಲೆಗಳ ಕಡತವನ್ನು ಪ್ರಧಾನಿ, ಗೃಹ ಸಚಿವ ಅಮಿತ್ ಷಾ ಅವರಿಗೆ ಖುದ್ದು ಭೇಟಿ ಮಾಡಿ ನೀಡುತ್ತೇನೆ ಎಂದು ಹೇಳಿದರು.

ಅವ್ಯವಹಾರವನ್ನು ಪ್ರಧಾನಿ ಗಮನಕ್ಕೆ ತರಲು ಇನ್ನೆರಡು ದಿನದಲ್ಲಿ ಪ್ರಧಾನಿ ಅವರ ಸಮಯ ಕೋರಲಾಗುವುದು. ಪ್ರಧಾನಿ ಭೇಟಿಯಾಗಿ ದಾಖಲೆ ಸಲ್ಲಿಸಿದ ಬಳಿಕ ದೆಹಲಿಯಲ್ಲೇ ನೈಸ್ ಕರ್ಮಕಾಂಡವನ್ನು ಮಾಧ್ಯಮಗಳ ಮುಂದೆ ಬಹಿರಂಗಪಡಿಸುತ್ತೇನೆ. ವಿಧಾನ ಸಭೆಯಲ್ಲೇ ಈ ಕರ್ಮಕಾಂಡವನ್ನು ಬಯಲಿಗೆಳೆಯಲು ಮತ್ತೊಮ್ಮೆ ಪ್ರಯತ್ನಪಟ್ಟೇ ಆದರೆ, ಅಧಿಕಾರದಲ್ಲಿದ್ದವರು ಅವಕಾಶ ನೀಡಲಿಲ್ಲ. ರೈತರ ಮತ್ತು ರಾಜ್ಯದ ಹಿತದೃಷ್ಟಿಯಿಂದ ಪ್ರಧಾನಿ ಅವರ ಮೊರೆ ಹೋಗುತ್ತಿದ್ದೇನೆ. ಅವರಿಂದ ನ್ಯಾಯ ದೊರಕುವ ವಿಶ್ವಾಸವಿದೆ. ಮೂಲಸೌಕರ್ಯ ಹಾಗೂ ರೈತರ ಹೆಸರಿನಲ್ಲಿ ಕೋಟಿ ಕೋಟಿ ಲೂಟಿ ಹೊಡೆದಿದ್ದಾರೆ. ಹಣ ಮತ್ತು ಭೂಮಿಯನ್ನು ಕೊಳ್ಳೆ ಹೊಡೆದಿದ್ದಾರೆ. ಆ ಬಗ್ಗೆ ಎಲ್ಲಾ ದಾಖಲೆ ಸಂಗ್ರಹ ಮಾಡಿದ್ದೀನಿ. ನೇರವಾಗಿ ಪ್ರಧಾನಿ ಅವರಲ್ಲಿಯೇ ನ್ಯಾಯ ಕೇಳುತ್ತೇನೆ, ಅವರನ್ನೇ ಪ್ರಶ್ನೆ ಮಾಡುತ್ತೇನೆ. ನಮ್ಮ ರೈತರಿಗೆ ನ್ಯಾಯ ಕೊಡಿಸಿ ಎಂದು ಒತ್ತಾಯ ಮಾಡುತ್ತೇನೆ ಎಂದು ಹೇಳಿದರು.



ಈ ಸರಕಾರದಲ್ಲಿರುವ ಪ್ರಭಾವಿಯೊಬ್ಬರು ಪೆರಿಫೆರಲ್ ರಿಂಗ್ ರೋಡ್ ಮಾಡಲು ನೈಸ್ ಜತೆ ಸೇರಿಕೊಂಡು ಏನೆಲ್ಲಾ ಕರ್ಮಕಾಂಡ ಮಾಡಿದ್ದಾರೆ ಎನ್ನುವುದು ಗೊತ್ತಿದೆ. ಸಣ್ಣಪುಟ್ಟ ಮನೆಗಳನ್ನು ಕಟ್ಟಿಕೊಂಡಿದ್ದ ಬಡವರನ್ನು ಒಕ್ಕಲೆಬ್ಬಿಸಲು ಹೊರಟಿದ್ದಾರೆ. ಆ ಮಹಾನುಭಾವರು ನನಗೂ ಒಮ್ಮೆ ಪೆನ್ ಹಿಡಿಯುವ ಅವಕಾಶ ಕೇಳಿದ್ದು ಇದಕ್ಕೇನಾ? ಎಂದು ಯಾರೊಬ್ಬರ ಹೆಸರು ಹೇಳದೆಯೇ ಅವರು ಟೀಕಾಪ್ರಹಾರ ನಡೆಸಿದರು. ನೈಸ್ ಯೋಜನೆಯಲ್ಲಿ ಅಕ್ರಮಗಳ ಸರಣಿಯೇ ನಡೆದಿದೆ. ಯೋಜನೆಗೆ ಸ್ವಾಧೀನಕ್ಕೆ ಗುರುತಿಸಲಾಗಿದ್ದ, ಪ್ರಾಥಮಿಕ ಅಧಿಸೂಚನೆ ಮಾಡಲಾಗಿದ್ದ ಭೂಮಿಯನ್ನೇ ಖರೀದಿ ಮಾಡಿದ್ದ ಆ ಮಹಾನುಭಾವರಿಗೆ ಇದೆಲ್ಲವನ್ನೂ ಜೀರ್ಣ ಮಾಡುವ ತಾಕತ್ತು ಇದೆ. ನಾನು ಇಲ್ಲ ಎನ್ನಲು ಆಗುತ್ತದೆಯೇ ಎಂದು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. ಅಧಿಸೂಚನೆ ಆಗಿದ್ದ ಬಡ ರೈತರ ಭೂಮಿಯನ್ನೇ ಸ್ವಾಹ ಮಾಡಿದವರು ಇಂದು ಬ್ರ್ಯಾಂಡ್ ಬೆಂಗಳೂರು ಭಜನೆ ಮಾಡುತ್ತಿದ್ದಾರೆ. ಎಲ್ಲಿ ಯಾರ ಭೂಮಿ ಹಿಡಿದುಕೊಳ್ಳೋಣ ಎಂದು ಹೊಂಚು ಹಾಕುವವರಿಂದ ಬೆಂಗಳೂರು ಉದ್ಧಾರ ಸಾಧ್ಯವೇ ಎಂದು ಖಾರವಾಗಿ ಪ್ರಶ್ನಿಸಿದರು. ಪ್ರತಿ ಸಣ್ಣ ವಿಷಯಕ್ಕೆ ನಾಡು, ನುಡಿ, ಕನ್ನಡ ಅಸ್ಮಿತೆಯ ಮಾತನಾಡುವ ಮಂದಿ ಈಗೆಲ್ಲಿ ಹೋಗಿದ್ದಾರೆ ಎಂದು ಪ್ರಶ್ನಿಸಿದರು.

ವರ್ಗಾವಣೆ ದಂಧೆ, ಕಾಸಿಗಾಗಿ ಪೋಸ್ಟಿಂಗ್‌ನಲ್ಲಿ 1000 ಕೋಟಿ ರೂ. ವ್ಯವಹಾರ!

ರಾಜ್ಯದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ವರ್ಗಾವಣೆ ದಂಧೆ ಹಾಗೂ ಕಾಸಿಗಾಗಿ ಪೋಸ್ಟಿಂಗ್ ವ್ಯವಹಾರದಲ್ಲಿ 1000 ಕೋಟಿ ರೂ.ಗೂ ಮೀರಿ ವ್ಯವಹಾರ ನಡೆದಿದೆ ಎಂದು ಹೆಚ್.ಡಿ.ಕುಮಾರಸ್ವಾಮಿ ನೇರ ಆರೋಪ ಮಾಡಿದರು. ಈ ಸರಕಾರ ಅಧಿಕಾರಕ್ಕೆ ಬಂದಾಗಿನಿಂದ ಈ ದಂಧೆಯಲ್ಲಿ 1000 ಕೋಟಿಗೂ ಮೀರಿ ಕೈ ಬದಲಾಗಿದೆ ಎಂದು ಅಧಿಕಾರಿಗಳೇ ಮಾತನಾಡಿಕೊಳ್ಳುತ್ತಿದ್ದಾರೆ ಎಂದು ದೂರಿದರು. ಈ ಸರಕಾರ ಪ್ರತಿಯೊಂದು ಹುದ್ದೆಯನ್ನು ಮಾರಿಕೊಳ್ಳುತ್ತಿದೆ. ಪ್ರತಿ ಹುದ್ದೆಗೂ ಹಣ ಪಡೆದು ವರ್ಗಾವಣೆ ಮಾಡುತ್ತಿದೆ. ನಾನು ಹೇಳಿರುವಂತೆ ವೈಟಿ ಟ್ಯಾಕ್ಸ್‌ನ ವೈಎಸ್ ಅಂದರೆ ಏನು ಎಂದು ಪತ್ತೆ ಮಾಡಿದರೆ, ಆ ಬಗ್ಗೆ ತನಿಖೆ ಮಾಡಿದರೆ ಈ ಸರಕಾರದ ಬುಡ ಅಲ್ಲಾಡುತ್ತದೆ ಎಂದರು.


ಒಂದೊಂದು ಪೋಸ್ಟ್‌ಗೆ ಮೂರು ಮೂರು ಅಧಿಕಾರಿಗಳ ನಿಯೋಜನೆ ಆಗಿದ್ದಾರೆ. ಮುಖ್ಯಮಂತ್ರಿ ಹಾಗೂ ಮುಖ್ಯಮಂತ್ರಿ ಕಚೇರಿಯ ಅಡಿ ಟಿಪ್ಪಣಿಗಳು ಹಾದಿಬೀದಿಯಲ್ಲಿ ಬಿಕರಿ ಆಗುತ್ತಿವೆ ಎಂದು ಮಾಜಿ ಮುಖ್ಯಮಂತ್ರಿ ಅವರು ಆಕ್ರೋಶ ವ್ಯಕ್ತಪಡಿಸಿದರು. ಒಬ್ಬ ಮಂತ್ರಿಗೆ ಜೀವನ ಕಳೆಯುವಷ್ಟು ಹಣ ಇದೆ. ಐದಾರು ಜನ್ಮಕ್ಕೆ ಆಗುವಷ್ಟು ಸಂಪತ್ತು ಇದೆ. ಆದರೆ ಆ ಸಚಿವ ಸಣ್ಣಸಣ್ಣ ಪೋಸ್ಟಿಗೂ 10 ರಿಂದ 15 ಲಕ್ಷ ಹಣ ಕೇಳ್ತಾ ಇದ್ದಾನೆ. ಇದಕ್ಕಿಂತ ಹೇಸಿಗೆಯ ವಿಷಯ ಬೇರೆ ಇದೆಯಾ ಎಂದು ಅವರು ಖಾರವಾಗಿ ಪ್ರಶ್ನಿಸಿದರು. ವರ್ಗಾವಣೆ ಬಗ್ಗೆ ಮಾತಾಡೋಕೆ ಅಸಹ್ಯ ಆಗುತ್ತದೆ. ಇಡೀ ದೇಶದಲ್ಲಿ ಕರ್ನಾಟಕದ ಮಾನ ಮರ್ಯಾದೆ ಬೀದಿ ಬೀದಿಯಲ್ಲಿ ಹರಾಜಾಗುತ್ತಿದೆ ಎಂದ ಅವರು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ವಿರುದ್ಧ ಟೀಕಾಪ್ರಹಾರ ನಡೆಸಿದರು. ಗೃಹ ಸಚಿವರು ನನ್ನ ಬಗ್ಗೆ ಮಾತನಾಡುವುದನ್ನು ಮೊದಲು ನಿಲ್ಲಿಸಲಿ. ಕೇರಳದಲ್ಲಿ ನಿಮ್ಮ ಇಲಾಖೆಯ ಮಾನ ಮೂರಾಬಟ್ಟೆ ಆಗಿದೆ. ಕೇರಳಕ್ಕೆ ಹೋಗಿ ಮುಖಕ್ಕೆ ಮಂಗಳಾರತಿ ಮಾಡಿಸ್ಕೊಂಡು ಬಂದ್ರಲ್ಲಾ, ಯಾವ ರೀತಿ ಆಡಳಿತ ಇದೆ ಎನ್ನುವುದಕ್ಕೆ ಈ ಉದಾಹರಣೆ ಸಾಕಲ್ಲವೇ ಎಂದು ಪರಮೇಶ್ವರ್ ಅವರಿಗೆ ಕುಮಾರಸ್ವಾಮಿ ಟಾಂಗ್ ನೀಡಿದರು.

ಪಿಎಚ್.ಡಿ ಪದವಿ



ಮೈಸೂರು, ಆ.5– ಡಾ. ಕೆ.ಬಿ. ನಳಿನಾ ಅವರ ಮಾರ್ಗದರ್ಶನದಲ್ಲಿ ವಿ. ಪದ್ಮಶ್ರೀ ಅವರು ನಿರ್ವಹಣೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಪಿಜಿಯಲ್ಲಿ ಕೊಠಡಿ ಬಾಗಿಲು ಹಾಕದೇ ಮಲಗಿದ ಇನ್‌ಫೋಸಿಸ್ ಉದ್ಯೋಗಿ ಲ್ಯಾಪ್‌ಟಾಪ್ ಕಳವು



ಮೈಸೂರು, ಆ. 5– ಪಿಜಿಗೆ ನುಗ್ಗಿ ಇನ್‌ಫೋಸಿಸ್ ಕಂಪನಿಯ ಇಂಜಿನಿಯರ್ ಲ್ಯಾಪ್ ಟಾಪ್‌ಗಳನ್ನು ಕಳವು ಮಾಡಿರುವ ಘಟನೆ ಹೆಬ್ಬಾಳ್ 2ನೇ ಹಂತದಲ್ಲಿ ನಡೆದಿದೆ.

ಮೂಲತಃ ರಾಜಾಸ್ಥಾನದವರಾಗಿದ್ದು, ಮೈಸೂರಿನ ಇನ್‌ಫೋಸಿಸ್‌ನಲ್ಲಿ ಇಂಜಿನಿಯರ್ ಆಗಿರುವ ಪ್ರಖರ ಭಟ್ರ (24) ಲ್ಯಾಪ್‌ಟಾಪ್ ಕಳೆದುಕೊಂಡವರಾಗಿದ್ದು, ಇವರು ಹೆಬ್ಬಾಳ್ 2ನೇ ಹಂತದಲ್ಲಿರುವ ಗಾಯತ್ರಿ ಪಿಜಿಯಲ್ಲಿ ಕೆಲ ವರ್ಷಗಳಿಂದ ವಾಸ್ತವ್ಯ ಹೂಡಿದ್ದಾರೆ. ಜು.29ರಂದು ರಾತ್ರಿ 2 ಗಂಟೆವರೆಗೂ ಲ್ಯಾಪ್‌ಟಾಪ್‌ನಲ್ಲಿ ಕೆಲಸ ಮಾಡಿದ ನಂತರ ತನ್ನ ಕೊಠಡಿ ಬಾಗಿಲು ಹಾಕದೇ ಹಾಗೇ ಮಲಗಿಬಿಟ್ಟಿದ್ದಾರೆ. ಈ ವೇಳೆ ಕೊಠಡಿಗೆ ನುಗ್ಗಿದ ಖದೀಮ ಇವರಿಗೆ ಇನ್‌ಫೋಸಿಸ್‌ನಿಂದ ನೀಡಿದ್ದ ಲೆನೆವೋ ಲ್ಯಾಪ್‌ಟಾಪ್ ಮತ್ತು ಅವರ ಸ್ವಂತದ್ದೇ ಆದ ಹೆಚ್‌ಪಿ ಲ್ಯಾಪ್‌ಟಾಪ್, ಪರ್ಸ್‌ನಲ್ಲಿಟ್ಟಿದ್ದ ಆಧಾರ್, ಪಾನ್, ಇನ್‌ಫೋಸಿಸ್ ಐಡಿ ಕಾರ್ಡ್, ಡೆಬಿಟ್ ಮತ್ತು ಕ್ರೆಡಿಟ್ ಕಾರ್ಡ್‌ಗಳನ್ನು ಕಳವು ಮಾಡಿದ್ದಾನೆ. ಕಳವಿನ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದ್ದು ಈ ಸಂಬಂಧ ಆ.3ರಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹೆಬ್ಬಾಳ್ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಬೊಲೆರೋ ಜೀಪ್ ಮಾರಾಟ ಮಾಡುವುದಾಗಿ ಆನ್‌ಲೈನ್‌ನಲ್ಲಿ 1.29 ಲಕ್ಷ ಹಣ ಪಡೆದು ವಂಚನೆ

ಸಿದ್ದಾಪುರ,ಆ.5–ಬೊಲೆರೋ ಜೀಪ್ ಮಾರಾಟ ಮಾಡುವುದಾಗಿ ತಿಳಿಸಿ ಆನ್‌ಲೈನ್ ಮೂಲಕ 1.29 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ವರದಿಯಾಗಿದೆ.

ವಿರಾಜಪೇಟೆ ತಾಲೂಕು ಬಾಡಗ ಗ್ರಾಮದ ಗಣೇಶ್(30) ವಂಚನೆಗೊಳಗಾದವರಾಗಿದ್ದು, ಕಾಫಿ ತೋಟದ ಕೆಲಸಕ್ಕೆ ಕೂಲಿಕಾರರನ್ನು ಸಾಗಿಸಲು ಬೊಲೆರೊ ಜೀಪ್ ಬೇಕೆಂದು ಹುಡುಕುತ್ತಿದ್ದ ಇವರು ಫೇಸ್‌ಬುಕ್‌ನಲ್ಲಿ ಬೊಲೆರೊ ಜೀಪ್ ಮಾರಾಟದ ಬಗ್ಗೆ ಜಾಹೀರಾತನ್ನು ನೋಡಿ ಅಲ್ಲಿದ್ದ ಮೊಬೈಲ್ ನಂಬರನ್ನು ಸಂಪರ್ಕಿಸಿದ್ದಾರೆ. ಇವರೊಂದಿಗೆ ಮಾತನಾಡಿದವರು, ತಾನು ಎ. ರಮೇಶ್ ಎಂದು ಪರಿಚಯಿಸಿಕೊಂಡು, ಭಾರತೀಯ ಸೇನೆಯಲ್ಲಿ ಕೆಲಸ ಮಾಡುತ್ತಿರುವುದಾಗಿ ತಿಳಿಸಿದ್ದಾನೆ. ಕೆಎ 09–ಎಂಎಸ್ 0741 ಸಂಖ್ಯೆಯ ಮಹೇಂದ್ರ ಕಂಪನಿಯ ಜೀಪ್ ಅನ್ನು 1.50 ಲಕ್ಷಕ್ಕೆ ಕೊಡುವುದಾಗಿ ಈತ ಹೇಳಿದ್ದು, ಗಣೇಶ್ ಅವರು ಆತ ಹೇಳಿದ ಮೊಬೈಲ್ ನಂಬರ್‌ಗೆ ಫೋನ್‌ಪೇ ಮೂಲಕ 1,29,500 ರೂ. ವರ್ಗಾವಣೆ ಮಾಡಿದ್ದಾರೆ. ಬಹಳ ದಿನಗಳಾದರೂ ಜೀಪ್ ಬಾರದ ಕಾರಣ ಗಣೇಶ್ ವಂಚಕನ ಮೊಬೈಲ್‌ಗೆ ಕರೆ ಮಾಡಿ ಜೀಪ್ ಯಾವಾಗ ಕಳುಹಿಸುತ್ತೀರಿ ಎಂದು ಕೇಳಲಾಗಿ, ಆ ವ್ಯಕ್ತಿಯು ಜೀಪ್ ಅನ್ನು ಕೊಡುವುದಿಲ್ಲ, ಹಣವನ್ನೂ ಕೊಡುವುದಿಲ್ಲ ಎಂದು ತಿಳಿಸಿ ಕರೆ ಕಡಿತಗೊಳಿಸಿದ್ದಾನೆ. ನಂತರ ಆತನ ಮೊಬೈಲ್ ಸ್ವಿಚ್‌ಆಫ್ ಆಗಿದೆ. ಈ ಸಂಬಂಧ ಸಿದ್ದಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಮಾರುವುದಾಗಿ ಹಣ ವರ್ಗಾಯಿಸಿಕೊಂಡು ವಂಚನೆ

ಬೇಗೂರು,ಆ.5–ಸೈನಿಕನ ಸೋಗಿನಲ್ಲಿ ಬೈಕ್ ಮಾರುವುದಾಗಿ ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ನೀಡಿ ವ್ಯಕ್ತಿಯೋರ್ವನಿಂದ 30,200 ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದೆ. ಗುಂಡ್ಲುಪೇಟೆ ತಾಲೂಕು ಚನ್ನವಡೆಯನಪುರ ಗ್ರಾಮದ ಚಾಲಕ ಶಶಿಕುಮಾರ್(27) ವಂಚನೆಗೊಳಗಾದವರಾಗಿದ್ದು, ಕೆಎ 10–ಕೆಯು 6019 ಸಂಖ್ಯೆಯ ಸ್ಪ್ಲೆಂಡರ್ ಪ್ಲಸ್ ಬೈಕ್ ಮಾರಾಟ ಮಾಡುವ ಬಗ್ಗೆ ಓಎಲ್‌ಎಕ್ಸ್‌ನಲ್ಲಿ ಬಂದ ಜಾಹೀರಾತನ್ನು ನೋಡಿ ಅಲ್ಲಿ ನಮೂದಾಗಿದ್ದ 9337223064 ಸಂಖ್ಯೆಗೆ ಕರೆ ಮಾಡಿದ್ದಾನೆ. ತನ್ನನ್ನು ಮಹದೇವ ಎಂದು ಪರಿಚಯಿಸಿಕೊಂಡ ವಂಚಕ, ತಾನು ಆರ್ಮಿಯಲ್ಲಿ ಕೆಲಸ ಮಾಡುತ್ತಿದ್ದು, ಬೆಳಗಾವಿ ಏರ್‌ಪೋರ್ಟ್‌ನಿಂದ ಬೈಕ್ ಅನ್ನು ಪಾರ್ಸೆಲ್ ಕಳುಹಿಸುವುದಾಗಿ ನಂಬಿಸಿ 30,200 ರೂ. ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೆಆರ್‌ಎಸ್ ನೀರಿನ ಮಟ್ಟ



ಗರಿಷ್ಠ ಮಟ್ಟ	124.80 ಅಡಿ
ಶನಿವಾರ	113.41 ಅಡಿ
ಒಳಹರಿವು	4890 ಕ್ಯುಸೆಕ್
ಹೊರಹರಿವು	5356 ಕ್ಯುಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284.00 ಅಡಿ
ಶನಿವಾರ	2282.73 ಅಡಿ
ಒಳ ಹರಿವು	4649 ಕ್ಯುಸೆಕ್
ಹೊರ ಹರಿವು	6000 ಕ್ಯುಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಶನಿವಾರ	2858.65 ಅಡಿ
ಒಳ ಹರಿವು	3184 ಕ್ಯುಸೆಕ್
ಹೊರ ಹರಿವು	1000 ಕ್ಯುಸೆಕ್

ಭರತನಾಟ್ಯ ದೈಹಿಕ, ಬೌದ್ಧಿಕ ವಿಕಾಸಕ್ಕೆ ಸಹಕಾರಿ





ಮೈಸೂರು, ಆ.5(ಎಸ್‌ಪಿಎನ್)– ಭರತನಾಟ್ಯ ಕಲಿಕೆ ಯುವಕ–ಯುವತಿಯರ ದೈಹಿಕ ಮತ್ತು ಬೌದ್ಧಿಕ ವಿಕಾಸಕ್ಕೆ ಸಹಕಾರಿಯಾಗುತ್ತದೆ ಎಂದು ಹಿರಿಯ ವೈದ್ಯ ಹಾಗೂ ಚಿತ್ರಾಸ್ ಹಾಸ್ಪಿಟಲ್ ಸಂಸ್ಥಾಪಕ ಡಾ.ಮಹೇಶ್ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರದ ಚಂಪಕ ಅಕಾಡೆಮಿ ಆವರಣದಲ್ಲಿ ನಡೆದ ಚಂಪಕ ರಾಷ್ಟ್ರೀಯ ಕಲಾ ಉತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು, ಮಾತನಾಡಿದರು. ಭಾರತೀಯ ಪರಂಪರೆಯಲ್ಲಿ ಶಾಸ್ತ್ರೀಯ ಸಂಗೀತ, ನೃತ್ಯ ಹಾಗೂ ಇತರೆ ಕಲೆಗಳಿಗೆ ವಿಶಿಷ್ಟ ಸ್ಥಾನ ಪಡೆದಿವೆ. ಇವುಗಳನ್ನು ಮುಂದಿನ ಪೀಳಿಗೆಗೂ ಕಲಿಸಿ ಉಳಿಸುವುದು ನಮ್ಮ–ನಿಮ್ಮೆಲ್ಲರ ಜವಾಬ್ದಾರಿ. ಈ ಕಾರ್ಯದಲ್ಲಿ ಚಂಪಕ ಅಕಾಡೆಮಿ ಪದಾಧಿಕಾರಿಗಳು ತೊಡಗಿರುವುದು ಸಂತೋಷದ ಸಂಗತಿ ಎಂದರು.

ಭರತನಾಟ್ಯ, ಸಂಗೀತ ಹಾಗೂ ಇತರೆ ಕಲೆಗಳನ್ನು ದೈನಂದಿನ ವಿದ್ಯಾಭ್ಯಾಸದಲ್ಲಿ ಜೊತೆಗೆ ತೊಡಗಿಸಿಕೊಳ್ಳುವುದರಿಂದ ಯಾವುದೇ ನಷ್ಟವಿಲ್ಲ. ಬದಲಾಗಿ, ನೃತ್ಯ ಮತ್ತು ಸಂಗೀತದಲ್ಲಿ ತೊಡಗಿಸಿಕೊಂಡಿರುವ ವಿದ್ಯಾರ್ಥಿಯ ಮಾನಸಿಕ, ಬೌದ್ಧಿಕ ಹಾಗೂ ಶೈಕ್ಷಣಿಕ ಪ್ರಗತಿಗೆ ನಾಂದಿಯಾಗುತ್ತದೆ. ಈ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಸಾಧಕರ ಪಟ್ಟಿಯನ್ನೇ ನೀಡಬಹುದು ಎಂದು ಅಭಿಪ್ರಾಯಪಟ್ಟರು.

ಭರತನಾಟ್ಯ ಕೇವಲ ತೋರಿಕೆಗೆ ಕಲಿಯಲು ಸಾಧ್ಯವಿಲ್ಲ. ಇದಕ್ಕೂ ಮುನ್ನ ಪೂರ್ವ ಭಾವಿಯಾಗಿ ಯೋಗಾಭ್ಯಾಸ, ನಟನೆಯ ವಿವಿಧ ಭಂಗಿಗಳ ಶಿಸ್ತುಬದ್ಧವಾಗಿ ಅಭ್ಯಾಸ ಮಾಡಿದರೆ ಮಾತ್ರ ಭರತನಾಟ್ಯ ಕಲಿಕೆ ಸಾಧ್ಯ ಎಂದು ತಿಳಿಸಿದರು.

ಈ ವೇಳೆ ಹಿರಿಯ ವೈದ್ಯ ಡಾ.ಚಿತ್ರಲೇಖಾ, ಚಂಪಕ ಅಕಾಡೆಮಿ ಸಂಸ್ಥಾಪಕಿ ಹಾಗೂ ವಿದುಷಿ ನಾಗಲಕ್ಷ್ಮಿ ನಾಗರಾಜನ್, ನೃತ್ಯಾಲಯ ಟ್ರಸ್ಟ್ ನಿರ್ದೇಶಕಿ ಡಾ. ತುಳಸಿ ರಾಮಚಂದ್ರ ಸೇರಿದಂತೆ ಇತರರಿದ್ದರು. ವೇದಿಕೆ ಕಾರ್ಯಕ್ರಮದ ನಂತರ ಡಾ.ಮಾಲಿನಿ ರವಿಶಂಕರ್ ಅವರ ಶಿಷ್ಯೆ ಲಾಸ್ಯಪ್ರಿಯ ಅವರು 'ಸಂಗೀತ ಗಾನ ನೃತ್ಯಂಯಾನ' ಪ್ರದರ್ಶಿಸಿದರು. ನಂತರ ವಿದುಷಿ ಡಾ.ತುಳಸಿ ರಾಮಚಂದ್ರ ಅವರ ಶಿಷ್ಯೆವೃಂದ 'ಮಾಧುರ್ಯ ಮಾರ್ಗ' ಕರ್ನಾಟಕ ನೃತ್ಯ ಸಂಪ್ರದಾಯ ಆಧಾರಿತ ಭರತನಾಟ್ಯ ಪ್ರಸ್ತುತಿಪಡಿಸಿದರು.

ಭಾರತದಲ್ಲಿ ಒಂದೆಡೆ ಅಲ್ಪಸಂಖ್ಯಾತರ ಜನಸಂಖ್ಯೆ ತ್ವರಿತ; ಹಿಂದೂಗಳ ಸಂಖ್ಯೆ ಗಣನೀಯ ಕುಸಿತ



● ನಿವೃತ್ತ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮದನ್ ಗೋಪಾಲ್ ಅಂಕಿ ಅಂಶಗಳ ಮೂಲಕ ವಿವರಣೆ ● ಈ ರೀತಿಯ ಜನಸಂಖ್ಯೆ ಕುಸಿತದ ಪರಿಣಾಮ ನಾಗರಿಕತೆಗಳ ಅವಸಾನ ಆತಂಕ

ರಾಜಕೀಯ ಪ್ರೇರಿತವಲ್ಲ...

2011ರ ಜನಗಣತಿ ಪ್ರಕಾರ ಮಣಿಪುರದಲ್ಲಿ 1949ರಲ್ಲಿ ಶೇ.61 ರಷ್ಟಿದ್ದ ಮೈತೇಯಿ ಹಿಂದೂ ಸಮುದಾಯದ ಜನಸಂಖ್ಯೆ ಶೇ.46 ರಷ್ಟಾಗಿದೆ. ಶೇ.17 ರಷ್ಟಿದ್ದ ಕುಕಿ ಸಮುದಾಯ ಶೇ.32 ರಷ್ಟಾಗಿದೆ. ಹಾಗೆಯೇ ನಾಗಾ ಸಮುದಾಯ ಶೇ.18 ರಷ್ಟಿದೆ. ಮೈತೇಯಿ ಸಮುದಾಯ ಹಿಂದೂ ಧರ್ಮ ಆಚರಣೆ ಮಾಡಿದರೆ, ಕುಕಿ ಸಮುದಾಯ ಕ್ರೈಸ್ತ ಧರ್ಮ ಆಚರಣೆ ಮಾಡುತ್ತಿದೆ. ಜನಸಂಖ್ಯೆಯ ಅಸಮತೋಲನದಿಂದಾಗಿ ಮಣಿಪುರದಲ್ಲಿ ಜನಾಂಗೀಯ ಗಲಭೆ ಹಲವು ವರ್ಷಗಳಿಂದ ನಡೆಯುತ್ತಿದೆ. ಕಳೆದ ಮೂರು ತಿಂಗಳಿಂದ ದೊಡ್ಡಮಟ್ಟದಲ್ಲಿ ಗಲಭೆ ನಡೆಯುತ್ತಿರುವುದರಿಂದ ವ್ಯಾಪಕ ಸುದ್ದಿಯಾಗಿದೆ. ಜನಸಂಖ್ಯೆಯ ಅಸಮತೋಲನದಿಂದ ಗಲಭೆ ನಡೆಯುತ್ತಿದೆಯೇ ಹೊರತು ರಾಜಕೀಯ ಪ್ರೇರಿತವಲ್ಲ. ಗಲಭೆಗೆ ಪ್ರಧಾನಿ ಮೋದಿ ಹಾಗೂ ಅಲ್ಲಿನ ರಾಜ್ಯ ಸರ್ಕಾರ ಕಾರಣ ಎಂಬುದು ಹಾಸ್ಯಾಸ್ಪದ.

– ಎಂ.ಮದನ್ ಗೋಪಾಲ್,
ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ

ಮೈಸೂರು, ಆ.5(ಎಂಕೆ)– ಯಾವುದೇ ಒಂದು ಧರ್ಮ ಅಥವಾ ಸಮುದಾಯದ ಜನಸಂಖ್ಯೆ ಏಕಾಏಕಿ ಕಡಿಮೆಯಾಗುವುದು ಹಾಗೂ ಮತ್ತೊಂದು ಸಮುದಾಯದ ಜನಸಂಖ್ಯೆ ಹೆಚ್ಚಾಗುವುದರಿಂದ ಸ್ಥಳೀಯ ಪ್ರಾಚೀನ ನಾಗರಿಕತೆಯೇ ಕಣ್ಮರೆಯಾಗುವುದರ ಜೊತೆಗೆ ಜನಸಂಖ್ಯೆ ಅಸಮತೋಲನ ಹಾಗೂ ರಾಷ್ಟ್ರೀಯ ಸುರಕ್ಷತೆ ಮೇಲೆ ಗಂಭೀರವಾದ ಪರಿಣಾಮ ಉಂಟಾಗಲಿದೆ ಎಂದು ಕರ್ನಾಟಕ ಸರ್ಕಾರದ ಮಾಜಿ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಂ.ಮದನ್ ಗೋಪಾಲ್ ಅಭಿಪ್ರಾಯಪಟ್ಟರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶ್ರೀ ಜನಜಾಗರಣ ಟ್ರಸ್ಟ್ ಸಹಯೋಗದೊಂದಿಗೆ ಮಂಥನ ಮೈಸೂರು ವತಿಯಿಂದ ಆಯೋಜಿಸಿದ್ದ 'ಜನಸಂಖ್ಯೆ ಅಸಮತೋಲನ ಹಾಗೂ ರಾಷ್ಟ್ರೀಯ ಸುರಕ್ಷತೆ ಮೇಲೆ ಅದರ ಪರಿಣಾಮ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲೆಲ್ಲಿ ಈ ಮೊದಲು ಇದ್ದಂತಹ(ಮೂಲ ನಿವಾಸಿಗಳು) ಜನ ಸಮೂಹ ಕಡಿಮೆಯಾಗಿದೆಯೋ ಅಲ್ಲೆಲ್ಲವೂ ಇದ್ದಂತಹ ಪ್ರಾಚೀನ ನಾಗರಿಕತೆಯೇ ಅದೃಶ್ಯವಾಗಿದೆ. ಇದಕ್ಕೆ ಸಿರಿಯಾ, ಲೆಬನಾನ್, ಇರಾಕ್, ಇರಾನ್ ಸೇರಿದಂತೆ ಹಲವು ದೇಶಗಳು ಉದಾಹರಣೆಯಾಗಿವೆ ಎಂದು ತಿಳಿಸಿದರು.

1951ರ ಜನಗಣತಿ ಪ್ರಕಾರ ದೇಶದಲ್ಲಿ ಮುಸ್ಲಿಂ ಜನಸಂಖ್ಯೆ ಶೇ.9.8 ರಷ್ಟಿತ್ತು. 2011ರ ವೇಳೆಗೆ ಶೇ.16 ರಷ್ಟಾಗಿದೆ. ಹಾಗೆಯೇ ಶೇ.84 ರಷ್ಟಿದ್ದ ಹಿಂದೂ ಸಮುದಾಯ ಶೇ.78 ರಷ್ಟಕ್ಕೆ ಕಡಿಮೆಯಾಗಿದೆ. ಅಲ್ಪಸಂಖ್ಯಾತರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದ್ದು, ಜೊತೆ ಜೊತೆಗೆ ದೇಶದ ಜನಸಂಖ್ಯೆಯೂ ಹೆಚ್ಚಾಗುತ್ತಿದೆ. ಇದರಿಂದ ಸ್ಥಳೀಯವಾಗಿರುವ ಪ್ರಾಚೀನ ನಾಗರಿಕತೆ ಮರೆಯಾಗುವ ಸಾಧ್ಯತೆ ಹೆಚ್ಚು. ಹಾಗೆಯೇ ರಾಷ್ಟ್ರೀಯ ಭದ್ರತೆಗೆ ತೊಡಕಾಗುವ ಜೊತೆಗೆ ಜನಾಂಗೀಯ ಗಲಭೆಗಳಿಗೂ ಕಾರಣವಾಗುತ್ತದೆ. ಅಲ್ಲದೆ ಶಿಕ್ಷಣ, ಉದ್ಯೋಗ ಸೇರಿದಂತೆ ಪ್ರಮುಖ ಕ್ಷೇತ್ರಗಳ ಮೇಲೂ ಪರಿಣಾಮ ಬೀರಲಿದೆ ಎಂದು ತಿಳಿಸಿದರು. ದಶಕದಲ್ಲಾಗಿರುವ ಜನಸಂಖ್ಯೆ ಅಸಮತೋಲನ ನೋಡುವುದಾದರೆ ದೇಶದಲ್ಲಿನ 11 ರಾಜ್ಯಗಳಲ್ಲಿ ಕ್ರೈಸ್ತರ ಸಂಖ್ಯೆ ಸುಮಾರು ಶೇ.32 ರಷ್ಟು ಹೆಚ್ಚಾಗಿದೆ. 9 ರಾಜ್ಯದಲ್ಲಿ ಮುಸ್ಲಿಂ ಜನಸಂಖ್ಯೆ ಶೇ.31ರಷ್ಟು ಹೆಚ್ಚಾಗಿದೆ. ಬಾಂಗ್ಲಾದೇಶದಿಂದ ಭಾರತದೊಳಗೆ ಒಳನುಸುಳುತ್ತಲೇ ಇದ್ದಾರೆ. ಅವರಿಗೆ ಎಲ್ಲಾ ರೀತಿಯ ಐಡಿ ಕಾರ್ಡ್‌ಗಳನ್ನು ಕೊಟ್ಟು ಉಳಿಸಿಕೊಳ್ಳಲಾಗಿದೆ. ಇದೆಲ್ಲದರ ಪರಿಣಾಮ ನಮ್ಮ ಕಲೆ–ಸಾಹಿತ್ಯ, ಸಂಸ್ಕೃತಿ ಮೇಲೆ ಬೀಳಲಿದ್ದು, ಮುಂದೊಂದು ದಿನ ಪ್ರತ್ಯೇಕ ರಾಷ್ಟ್ರ ಮಾಡಿ ಎಂದರೂ ಅಚ್ಚರಿಯಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಎನ್‌ಆರ್‌ಸಿ ಜಾರಿಯಾಗಬೇಕು: ಭಾರತದೊಳಗೆ ಒಳನುಸುಳಿ ಬರುವ ಬೇರೆ ದೇಶದ ವಲಸಿಗರಿಗೆ ಕಡಿವಾಣ ಹಾಕಬೇಕಾದರೆ ಎನ್‌ಆರ್‌ಸಿ(ರಾಷ್ಟ್ರೀಯ ಪೌರತ್ವ ನೋಂದಣಿ) ಪರಿಣಾಮಕಾರಿಯಾಗಿ ಜಾರಿಯಾಗಬೇಕು. ಹಾಗೆಯೇ ಎನ್‌ಆರ್‌ಸಿ ಜಾರಿಗೆ ಹಲವರು ಬೆಂಬಲ ವ್ಯಕ್ತಪಡಿಸಿದ್ದು, ಇದರಿಂದ ಮೂಲ ನಿವಾಸಿಗಳು ಎಲ್ಲಾ ಕ್ಷೇತ್ರದಲ್ಲಿಯೂ ಅವಕಾಶ ಪಡೆದುಕೊಳ್ಳಲು ಅನುಕೂಲವಾಗುತ್ತದೆ. ಹಾಗೆಯೇ 'ರಾಷ್ಟ್ರೀಯ ಜನಸಂಖ್ಯಾ ನೀತಿ'ಯಲ್ಲಿ ಜನನ ಮತ್ತು ಮರಣ ನೋಂದಣಿ ಡಿಜಿಟಲೀಕರಣವಾಗಬೇಕು ಎಂದು ಪ್ರತಿಪಾದಿಸಿದರು.

ಭಯೋತ್ಪಾದನೆ ಹೆಚ್ಚಳ: ಕೇರಳದ ನಿವೃತ್ತ ಡಿಜಿಪಿ ಎಂ.ಎನ್.ಕೃಷ್ಣಮೂರ್ತಿ ಮಾತನಾಡಿ, ಭಾರತ ಮುಖ್ಯವಾಗಿ ಯುವ ಸಮೂಹ ಹೆಚ್ಚಾಗಿರುವ ರಾಷ್ಟ್ರ ಹಾಗೆಯೇ ದೇಶದೊಳಗೆ ಒಳನುಸುಳುತ್ತಿರುವವರಲ್ಲಿ ಯುವಕರೇ ಹೆಚ್ಚಾಗಿದ್ದಾರೆ. ಉದ್ಯೋಗ ಹುಡುಕಿಕೊಂಡು ಬರುವ ಕೆಲವರು ತಮಗೆ ಉದ್ಯೋಗ ಸಿಗದ ವೇಳೆ ಹೆಚ್ಚು ಹಣಕ್ಕೆ ಆಸೆ ಪಟ್ಟು, ಭಯೋತ್ಪಾದಕ ಸಂಘಟನೆಗಳನ್ನು ಸೇರುತ್ತಿದ್ದಾರೆ. ಇದರಿಂದ ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗುತ್ತಿವೆ. ಅಲ್ಲದೆ ರಾಷ್ಟ್ರೀಯ ಸುರಕ್ಷತೆಗೂ ತೊಂದರೆಯಾಗುತ್ತಿದೆ ಎಂದು ಹೇಳಿದರು. ಮಂಥನ ಮೈಸೂರು ಸಂಚಾಲಕಿ ಪದ್ಮಾವತಿ ಎಸ್.ಭಟ್ ಉಪಸ್ಥಿತರಿದ್ದರು.

ಭಾರತ ಬಲಿಷ್ಠವಾಗಿದೆ...



ಆರ್ಥಿಕತೆಯಲ್ಲಿ ವೇಗವಾಗಿ ಬೆಳೆಯುತ್ತಿರುವ ಭಾರತ ವಿಶ್ವದಲ್ಲಿಯೇ ಬಲಿಷ್ಠ ರಾಷ್ಟ್ರವಾಗಿ ಗುರ್ತಿಸಿಕೊಂಡಿದೆ. ಭಯೋತ್ಪಾದಕ ಚಟುವಟಿಕೆಗಳನ್ನು ಹತ್ತಿಕ್ಕುವ ಶಕ್ತಿ ದೇಶದ ರಕ್ಷಣಾ ಕ್ಷೇತ್ರಕ್ಕಿದೆ. ದೇಶದಲ್ಲಿ ಅತ್ಯುನ್ನತ ಮಾನವ ಸಂಪನ್ಮೂಲವಿದ್ದು, ಭಾರತ ಮೂಲದ ವಿಜ್ಞಾನಿಗಳು ವಿದೇಶಗಳಲ್ಲಿ ದೇಶದ ಕೀರ್ತಿ ಹೆಚ್ಚಿಸಿದ್ದಾರೆ. ಮುಂದಿನ ದಿನಗಳಲ್ಲಿಯೂ ಭಾರತ ವಿಶ್ವದಲ್ಲಿಯೇ ಉನ್ನತ ಸ್ಥಾನ ಪಡೆಯುವುದಕ್ಕಾಗಿ ಉತ್ತಮ ನಾಯಕತ್ವ ಬೇಕಾಗಿದೆ.

– ಎಂ.ಎನ್.ಕೃಷ್ಣಮೂರ್ತಿ, ನಿವೃತ್ತ ಡಿಜಿಪಿ ಕೇರಳ

ಕೌಟಿಲ್ಯ ವಿಶ್ವದ ಮೊದಲ ರಾಜಕೀಯ ವಾಸ್ತವವಾದಿ

ಐಎಎಫ್ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠ್ಠಲ್ ಅಭಿಮತ



ಮೈಸೂರು, ಆ.5(ಎಸ್‌ಬಿಡಿ)– ಕೌಟಿಲ್ಯ ಅವರು ವಿಶ್ವದ ಮೊದಲ ಮಹಾನ್ ರಾಜಕೀಯ ವಾಸ್ತವವಾದಿ ಎಂಬ ಬಣ್ಣನೆಗೆ ಪಾತ್ರರಾಗಿದ್ದಾರೆ ಎಂದು ಭಾರತೀಯ ವಾಯುಪಡೆ (ಐಎಎಫ್)ಯ ನಿವೃತ್ತ ಗ್ರೂಪ್ ಕ್ಯಾಪ್ಟನ್ ಡಾ.ವಿನಯ್ ವಿಠ್ಠಲ್ ಹೇಳಿದರು. ಮೈಸೂರಿನ ವಿಜಯ ವಿಠಲ ವಿದ್ಯಾಶಾಲೆ ವಿದ್ಯಾರ್ಥಿಗಳಿಗೆ ಕೌಟಿಲ್ಯನ ಅರ್ಥಶಾಸ್ತ್ರ ಕುರಿತು ಪವರ್‌ಪಾಯಿಂಟ್ ಮೂಲಕ ಉಪನ್ಯಾಸ ನೀಡಿದ ಅವರು, ಅಮೆರಿಕನ್ ರಾಜಕೀಯ ಸಿದ್ಧಾಂತಿ ರೋಜರ್ ಬೋಸ್ಚೆ ಅವರು ಕೌಟಿಲ್ಯ ಮತ್ತು ಅವರ ಅರ್ಥಶಾಸ್ತ್ರದ ಬಗ್ಗೆ ರಚಿಸಿರುವ ಕೃತಿಯಲ್ಲಿ ಕೌಟಿಲ್ಯ ಅವರನ್ನು ವಿಶ್ವದ ಮೊದಲ ಮಹಾನ್ ರಾಜಕೀಯ ನೈಜವಾದಿ ಎಂದಿದ್ದಾರೆ. ಈ ಶೀರ್ಷಿಕೆಯಲ್ಲೇ ಪುಸ್ತಕ ಪ್ರಕಟಿಸಿದ್ದಾರೆ ಎಂದು ತಿಳಿಸಿದರು.

ಕೌಟಿಲ್ಯನ ಅರ್ಥಶಾಸ್ತ್ರದ ಪ್ರಮುಖ ಉದ್ದೇಶ ರಾಜಮಂಡಲ ಸಿದ್ಧಾಂತ. ಭೌಗೋಳಿಕ ರಾಜಕೀಯ ಮತ್ತು ಭೂ ಸಂಖ್ಯಾಶಾಸ್ತ್ರದ ಪ್ರಕಾರ ನಿಮ್ಮ ನೆರೆಹೊರೆಯವರು ನಿಮ್ಮ ನೈಸರ್ಗಿಕ ಶತ್ರುವಾದರೆ ಅವರ ನೆರೆಯವರು ನಿಮ್ಮ ಸ್ನೇಹಿತರಾಗಿರುತ್ತಾರೆ. ಹಾಗಾಗಿ ನಿಮ್ಮ ಬಗ್ಗೆ ವಿಶ್ವಾಸವಿಡಬೇಕು. ನಿಮ್ಮ ತಂತ್ರಗಾರಿಕೆ ಬಗ್ಗೆ ಸ್ಪಷ್ಟವಾಗಿ ತಿಳಿದು ಮುಂದಿನ ಯೋಜನೆ ಮಾಡಬೇಕು ಎಂದರು.

ಭವಿಷ್ಯದಲ್ಲಿ ದೇಶವನ್ನು ಪ್ರತಿನಿಧಿಸುವ ಮಕ್ಕಳು ಎಲ್ಲಾ ರಾಜಮಂಡಲದ ತಂತ್ರಗಳ ಬಗ್ಗೆ ತಿಳಿದುಕೊಂಡಿರಬೇಕು. ಅರ್ಥಶಾಸ್ತ್ರವನ್ನು ಕಾಲಾತೀತ ಶಾಸ್ತ್ರ ಎಂದು ಜಗತ್ತು ಒಪ್ಪಿದೆ. ಇದರಿಂದ ರಾಜಕೀಯ ಸಿದ್ಧಾಂತ, ನೀತಿಶಾಸ್ತ್ರ, ಆಡಳಿತ, ಅರ್ಥಶಾಸ್ತ್ರ, ಕಾನೂನು, ಗುಪ್ತಚರ, ಮಿಲಿಟರಿ ವ್ಯವಹಾರ, ರಾಜತಾಂತ್ರಿಕತೆ, ವಿದೇಶಿ ನೀತಿಗಳ ಬಗ್ಗೆ ತಿಳಿವಳಿಕೆ ಸಿಗಲಿದೆ. ನಾಯಕತ್ವ ಗುಣ ಹಾಗೂ ಅದರ ನಿರ್ವಹಣೆ ಸಂಬಂಧ ಅರ್ಥಶಾಸ್ತ್ರ ಪಠ್ಯದಲ್ಲಿ ಚಿತ್ರಿಸಲಾಗಿದೆ ಎಂದು ಮಕ್ಕಳಿಗೆ ವಿವರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಪ್ರಾಂಶುಪಾಲೆ ಎಸ್.ವಿ.ವೀಣಾ ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ಭಾರತೀಯ ವಾಯುಪಡೆ ಅಧಿಕಾರಿಯಾಗಿ ಸುಮಾರು 30 ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಡಾ.ವಿನಯ್ ವಿಠ್ಠಲ್ ಅವರು, ದಶಕದಿಂದ ಕೌಟಿಲ್ಯ ಅರ್ಥಶಾಸ್ತ್ರದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇವರು ಭಾರತದ ಜಾಗ್ವಾರ್ ಫೈಟರ್ ಜೆಟ್‌ನ ಮೊದಲ ಪೈಲಟ್ ಎನ್ನುವುದು ಗಮನಾರ್ಹ.

ಆ.9ರಿಂದ 13ರವರೆಗೆ ರಂಗಸಂಭ್ರಮ ನಾಟಕೋತ್ಸವ



ಮೈಸೂರು,ಆ.5(ಪಿಎಂ)– ರಂಗವಲ್ಲಿ ತಂಡದ ವತಿಯಿಂದ ಆ.9ರಿಂದ 13ರವರೆಗೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದಲ್ಲಿ 'ರಂಗ ಸಂಭ್ರಮ–2023' ಶೀರ್ಷಿಕೆಯಡಿ ಐದು ದಿನಗಳ ರಾಜ್ಯ ಮಟ್ಟದ ನಾಟಕೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ರಂಗವಲ್ಲಿ ತಂಡದ ಖಜಾಂಚಿ ಮಂಜುನಾಥಶಾಸ್ತ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ನಾಟಕೋತ್ಸವ ನಡೆಯಲಿದೆ. ನಾಟಕ ಪ್ರದರ್ಶನಕ್ಕೂ ಮುನ್ನ ಕಿರುರಂಗ ಮಂದಿರದ ಹೊರಾವರಣದ 'ನೇತ್ರರಾಜು ವೇದಿಕೆ'ಯಲ್ಲಿ ಪ್ರತಿದಿನ ಸಂಜೆ 4.30ರಿಂದ ಸುಗಮ ಸಂಗೀತ, ವಚನ ಗಾಯನ, ಹಳೆಯ ಚಿತ್ರಗೀತೆಗಳ ಕರೋಕೆ ಗಾಯನ ಹಾಗೂ ಬ್ರಾಸ್ ಬ್ಯಾಂಡ್ ಆರ್ಕೆಸ್ಟ್ರಾ ನಡೆಯಲಿದೆ. ಬಳಿಕ ಪ್ರತಿದಿನ ಸಂಜೆ 7ಕ್ಕೆ ನಾಟಕಗಳ ಪ್ರದರ್ಶನ ನಡೆಯಲಿದೆ ಎಂದರು.

ಪ್ರತಿ ನಾಟಕಕ್ಕೆ 100 ರೂ. ಪ್ರವೇಶ ಶುಲ್ಕ ಇದ್ದು, ಕಿರುರಂಗ ಮಂದಿರದ ಆವರಣದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರವೇಶ ಉಚಿತವಿದೆ. ಆ.9ರಂದು ಕಿರುರಂಗ ಮಂದಿರದಲ್ಲಿ ಚಲನಚಿತ್ರ ನಾಯಕ ನಟ ಡಾಲಿ ಧನಂಜಯ ನಾಟಕೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ರಂಗಾಯಣ ಉಪನಿರ್ದೇಶಕಿ ನಿರ್ಮಲ ಮಠಪತಿ ಭಾಗವಹಿಸಲಿದ್ದಾರೆ. ರಂಗವಲ್ಲಿ ಸಂಸ್ಥಾಪಕ ಸದಸ್ಯ ಹೆಚ್.ಆರ್.ರವಿಪ್ರಸಾದ್ ಉಪಸ್ಥಿತರಿರಲಿದ್ದಾರೆ ಎಂದು ಹೇಳಿದರು. ಆ.10ರಂದು ಧಾರವಾಡದ ಆಟಮಾಟ ತಂಡದಿಂದ 'ನಾ ರಾಜಗುರು' ನಾಟಕ ಪ್ರದರ್ಶನಗೊಳ್ಳಲಿದೆ. ಸಂಗೀತ ಕ್ಷೇತ್ರದ ತಪಸ್ವಿ ಪಂ.ಬಸವರಾಜ ರಾಜಗುರು ಅವರ ಬದುಕಿನ ವೃತ್ತಾಂತದ ಸಂಗೀತ ನಾಟಕ ಇದಾಗಿದೆ. ಮಹದೇವ ಹಡಪದ ಈ ನಾಟಕಕ್ಕೆ ರಂಗರೂಪ ನೀಡಿದ್ದಾರೆ. ಆ.11ರಂದು ಅತೋಲ್ ಫುಗಾರ್ಡ್ ರಚನೆಯ 'ದ್ವೀಪ' ನಾಟಕವನ್ನು ಆಕ್ಟ್ ರಿಯಾಕ್ಟ್ ತಂಡ ಪ್ರದರ್ಶಿಸಲಿದೆ. ಇದಕ್ಕೆ ಕೆ.ಪಿ.ಲಕ್ಷ್ಮಣ ಅವರ ನಿರ್ದೇಶನವಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆಯುವ ಚಳುವಳಿಯ ಕಥಾ ಸಾರಾಂಶವನ್ನು ಈ ನಾಟಕ ಒಳಗೊಂಡಿದೆ ಎಂದು ವಿವರಿಸಿದರು. ಆ.12ರಂದು ಡಾ.ಹೇಮಾ ಪಟ್ಟಣಶೆಟ್ಟಿ ರಚನೆಯ 'ಚೆಕಾವ್ ಟು ಶಾಂಪೇನ್' ನಾಟಕವು ಬೆಂಗಳೂರಿನ ಥಿಯೇಟರ್ ಆನ್ಸೆಂಬಲ್ ವತಿಯಿಂದ ಪ್ರದರ್ಶನಗೊಳ್ಳಲಿದೆ. ತಿಳಿಹಾಸ್ಯದೊಂದಿಗೆ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ನಾಟಕ ಇದಾಗಿದೆ. ಆ.13ರಂದು ಹೆಗ್ಗೋಡಿನ ಸತ್ಯಶೋಧನಾ ರಂಗ ಸಮುದಾಯದ ವತಿಯಿಂದ 'ರೊಟ್ಟಿಯ ಸಲುವಾಗಿ ಇಷ್ಟೆಲ್ಲ' ನಾಟಕ ಪ್ರದರ್ಶನಗೊಳ್ಳಲಿದೆ ಎಂದರು. ಇದಕ್ಕೂ ಮುನ್ನ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ನಾಟಕೋತ್ಸವದ ಪೋಸ್ಟರ್ ಬಿಡುಗಡೆ ಮಾಡಿದರು. ರಂಗವಲ್ಲಿ ಸಂಸ್ಥಾಪಕ ಸದಸ್ಯ ಹೆಚ್.ಆರ್.ರವಿಪ್ರಸಾದ್, ಸದಸ್ಯರಾದ ಶಿವಮೂರ್ತಿ, ಧನ್ಯಶ್ರೀ ಮತ್ತಿತರರು ಗೋಷ್ಠಿಯಲ್ಲಿದ್ದರು.

ಜ್ಞಾನವಾಪಿ ಆವರಣದಲ್ಲಿ ಸಮೀಕ್ಷೆ ನಡೆಸಲು ಎಎಸ್‌ಐಗೆ ನಾಲ್ಕು ವಾರಗಳ ಕಾಲಾವಕಾಶ ನೀಡಿದ ವಾರಣಾಸಿ ಕೋರ್ಟ್!



ಲಖನೌ: ವಾರಣಾಸಿ ಜಿಲ್ಲಾ ನ್ಯಾಯಾಲಯವು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ತನ್ನ ಸಮೀಕ್ಷೆ ಮತ್ತು ವೈಜ್ಞಾನಿಕ ತನಿಖೆಯನ್ನು ಪೂರ್ಣಗೊಳಿಸಲು, ಜ್ಞಾನವಾಪಿ ಆವರಣದ ಸಮೀಕ್ಷೆ ವರದಿಯನ್ನು ಸಲ್ಲಿಸಲು ನಾಲ್ಕು ವಾರಗಳ ಕಾಲಾವಕಾಶವನ್ನು ನೀಡಿದೆ. ಜಿಲ್ಲಾ ನ್ಯಾಯಾಧೀಶ ಡಾ.ಎ.ಕೆ.ವಿಶ್ವೇಶ ಅವರು ಮುಂದಿನ ವಿಚಾರಣೆಯನ್ನು ಸೆ.2ಕ್ಕೆ ಮುಂದೂಡಿದರು. ಮೂಲಗಳ ಪ್ರಕಾರ, ಸ್ಥಾಯಿ ಸರ್ಕಾರಿ ವಕೀಲ ಅಮಿತ್ ಶ್ರೀವಾಸ್ತವ ಅವರು ನಿನ್ನೆ ಮಸೀದಿ ಆವರಣದಲ್ಲಿ ಸಮೀಕ್ಷೆ ಪ್ರಾರಂಭವಾದ ದಿನವಾದ ವಾರ 4 ವಾರಗಳ ಕಾಲಾವಕಾಶವನ್ನು ಕೋರಿ ASI ಪರವಾಗಿ ಅರ್ಜಿ ಸಲ್ಲಿಸಿದ್ದರು.

ಜಿಲ್ಲಾ ಕೋರ್ಟ್ ಆದೇಶವನ್ನು ಕಾಯ್ದಿರಿಸಿತ್ತು. ಇಂದು ನಾಲ್ಕು ವಾರಗಳಲ್ಲಿ ತನ್ನ ಸಮೀಕ್ಷೆಯನ್ನು ಪೂರ್ಣಗೊಳಿಸಲು ಮತ್ತು ಸೆ.2ರೊಳಗೆ ಅದರ ವರದಿಯನ್ನು ಸಲ್ಲಿಸಲು ಸಂಸ್ಥೆಗೆ ಅವಕಾಶ ಮಾಡಿಕೊಟ್ಟಿದೆ.

ಜಿಲ್ಲಾ ನ್ಯಾಯಾಧೀಶ ವಿಶ್ವೇಶ ಅವರು ಜು.21ರಂದು ಎಎಸ್‌ಐನಿಂದ ವೈಜ್ಞಾನಿಕ ಸಮೀಕ್ಷೆ ನಡೆಸುವಂತೆ ಆದೇಶಿಸಿ ಆ.4ರೊಳಗೆ ವರದಿ ಸಲ್ಲಿಸುವಂತೆ ಏಜೆನ್ಸಿಗೆ ಸೂಚಿಸಿದ್ದರು. ಜು.24ರಂದು ಸಮೀಕ್ಷೆ ಪ್ರಾರಂಭವಾಗುತ್ತಿದ್ದಂತೆ, ಸರ್ವೋಚ್ಚ ನ್ಯಾಯಾಲಯವು ಜು.26ರವರೆಗೆ ತಡೆ ನೀಡಿತು. ಆದೇಶದ ವಿರುದ್ಧ ಅಲಹಾಬಾದ್ ಹೈಕೋರ್ಟ್ ಅನ್ನು ಸಂಪರ್ಕಿಸಲು ಅಂಜುಮನ್ ಇಂತೆಝಾಮಿಯಾ ಮಸಾಜಿದ್‌ಗೆ ನಿರ್ದೇಶಿಸಿತು. ಹೀಗಾಗಿ ಸಮೀಕ್ಷೆ ಕಾರ್ಯಗಳನ್ನು ಸ್ಥಗಿತಗೊಳಿಸಲಾಯಿತು.

ಬಳ್ಳೆ, ರಾಂಪುರ ಕ್ಯಾಂಪ್‌ನಲ್ಲಿ ದಸರಾ ಗಜಪಡೆಗೆ ಆನೆಗಳ ಪರಿಶೀಲನೆ

ಬಳ್ಳೆಯಲ್ಲಿ ನಿಶಾನೆ ಆನೆ ಅರ್ಜುನ, ರಾಂಪುರದಲ್ಲಿ ಚೈತ್ರ, ರೋಹಿತ, ಪಾರ್ಥಸಾರಥಿ ವೀಕ್ಷಣೆ



ಹೆಚ್.ಡಿ.ಕೋಟೆ ತಾಲೂಕಿನ ಡಿ.ಬಿ.ಕುಪ್ಪೆ ವ್ಯಾಪ್ತಿಯ ಬಳ್ಳೆ ಆನೆ ಕ್ಯಾಂಪ್‌ನಲ್ಲಿ ನಿಶಾನೆ ಆನೆ ಅರ್ಜುನನನ್ನು ಪರಿಶೀಲಿಸುತ್ತಿರುವ ಅರಣ್ಯಾಧಿಕಾರಿಗಳ ತಂಡ.

ಮೈಸೂರು, ಆ.5(ಎಂಟಿವೈ)– ದಸರಾ ಗಜಪಡೆ ಆಯ್ಕೆ ಪ್ರಕ್ರಿಯೆ ಅಂತಿಮ ಹಂತಕ್ಕೆ ತಲುಪಿದ್ದು, ಶನಿವಾರ ನಾಗರಹೊಳೆಯ ಬಳ್ಳೆ ಹಾಗೂ ಬಂಡೀಪುರದ ರಾಂಪುರ ಕ್ಯಾಂಪ್‌ಗೆ ಮೈಸೂರು ಡಿಸಿಎಫ್ ಸೌರಭ್ ಕುಮಾರ್ ನೇತೃತ್ವದ ತಂಡ ಭೇಟಿ ನೀಡಿ, ನಾಲ್ಕು ಆನೆಗಳನ್ನು ಪರಿಶೀಲಿಸಿತು.

ಈ ಸಾಲಿನ ಜಂಬೂಸವಾರಿಯನ್ನು ಅದ್ಧೂರಿಯಾಗಿ ಆಚರಿಸಲು ನಿರ್ಧರಿಸಲಾಗಿದ್ದು, ಈ ಹಿನ್ನೆಲೆಯಲ್ಲಿ ದಸರಾ ಜಂಬೋ ಪಡೆಯನ್ನು ಸೂಕ್ಷ್ಮವಾಗಿ ಆಯ್ಕೆ ಮಾಡಲು ಅರಣ್ಯ ಇಲಾಖೆ ಮುಂದಾಗಿದೆ. ಅ.15ರಂದು ಈ ಸಾಲಿನ ದಸರಾ ಮಹೋತ್ಸವ ಆರಂಭವಾಗಲಿದ್ದು, ಅ.24ರಂದು ಜಂಬೂಸವಾರಿ ಜರುಗಲಿದೆ. ಪ್ರತಿವರ್ಷದಂತೆ ದಸರಾ ಮಹೋತ್ಸವ ಪ್ರಮುಖ ಆಕರ್ಷಣೀಯ ಕೇಂದ್ರಬಿಂದುವಾದ ಗಜಪಡೆ ಆಯ್ಕೆ ಪ್ರಕ್ರಿಯೆ ಕಸರತ್ತು ನಡೆಸಲಾಗುತ್ತಿದ್ದು, ಈಗಾಗಲೇ ಮತ್ತಿಗೂಡು, ಭೀಮನಕಟ್ಟೆ, ದುಬಾರೆ ಆನೆ ಶಿಬಿರಗಳಿಗೆ ತೆರಳಿ ಆನೆಗಳನ್ನು ಪರಿಶೀಲಿಸಲಾಗಿತ್ತು.

ಇಂದು ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿರುವ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಕ್ಯಾಂಪ್‌ನಲ್ಲಿರುವ ಗಜಪಡೆಯ ಮಾಜಿ ನಾಯಕ ಅರ್ಜುನ ಆನೆ ಹಾಗೂ ಬಂಡೀಪುರ ಅರಣ್ಯ ವ್ಯಾಪ್ತಿಯ ಮಾರಿಗುಡಿ ವಲಯಕ್ಕೆ ಸೇರಿದ ರಾಂಪುರ ಕ್ಯಾಂಪ್‌ನಲ್ಲಿರುವ ಕುಮ್ಕಿ ಆನೆ ಚೈತ್ರ, ರೋಹಿತ ಹಾಗೂ ಪಾರ್ಥಸಾರಥಿ ಆನೆಯನ್ನು ಅರಣ್ಯಾಧಿಕಾರಿಗಳ ತಂಡ ಪರಿಶೀಲಿಸಿತು. ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್‌ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ನೇತೃತ್ವದ ತಂಡ ಆನೆಗಳನ್ನು ಪರಿಶೀಲಿಸಿತು.

ಎಂದಿನಂತೆ ಆನೆಗಳ ಆರೋಗ್ಯ, ಅವುಗಳ ಸ್ವಭಾವ, ಮಾವುತರ ಆಜ್ಞೆ ಪಾಲಿಸುವಿಕೆ ಸೇರಿದಂತೆ ವಿವಿಧ ಮಾನದಂಡಗಳನ್ನು ಪರಿಗಣಿಸಿ ಪರಿಶೀಲನೆ ನಡೆಸಲಾಯಿತು. ಈ ಬಾರಿ ನಾಲ್ಕು ಹೆಣ್ಣಾನೆಗಳು ದಸರಾ ಗಜಪಡೆಯಲ್ಲಿ ಸ್ಥಾನ ಪಡೆಯಲಿದ್ದು, ಅವುಗಳ ಪ್ರೆಗ್ನೆನ್ಸಿ ಪರೀಕ್ಷಾ ವರದಿ ಇನ್ನು ಬಂದಿಲ್ಲದ ಕಾರಣ ಗಜಪಡೆ ಆಯ್ಕೆ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿಲ್ಲ. ಆದರೆ ಸಂಭವನೀಯ ಆನೆಗಳ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಂಡಿದ್ದು, ಆ.15ರೊಳಗೆ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಆ.20ರೊಳಗೆ ಆನೆಗಳ ಪಟ್ಟಿ ಬಿಡುಗಡೆ ಮಾಡಿ, ಸೆ.1ರಂದು ಗಜಪಯಣದ ಮೂಲಕ ಮೊದಲ ತಂಡದಲ್ಲಿ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ 6 ಆನೆಗಳು ಮೈಸೂರಿಗೆ ಆಗಮಿಸಿ, ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ಬೀಡು ಬಿಡಲಿದೆ. ಸೆ.2 ಅಥವಾ 3ರಂದು ಅಧಿಕೃತವಾಗಿ ಮೈಸೂರು ಅರಮನೆ ಪ್ರವೇಶಿಸಲಿವೆ.

ಅರ್ಜುನನಿಗೆ ನಿಶಾನೆ ಆನೆಯ ಗೌರವ

ವಯಸ್ಸಿನ ಕಾರಣದಿಂದ ಈ ಬಾರಿ ಅರ್ಜುನ ಆನೆಯನ್ನು ಗಜಪಡೆಯಿಂದ ಕೈಬಿಡಲಾಗುತ್ತದೆ ಎಂಬ ಊಹಾಪೋಹಕ್ಕೆ ತೆರೆಬಿದ್ದಿದ್ದು, ಈ ಸಾಲಿನ ದಸರಾ ಮಹೋತ್ಸವದಲ್ಲಿ ಅರ್ಜುನ ಆನೆ ಭಾಗವಹಿಸುವುದು ಖಚಿತವಾಗಿದೆ. ಕಳೆದ ಬಾರಿಯಂತೆ ಈ ಬಾರಿಯೂ ಅರ್ಜುನ ಆನೆ ನಿಶಾನೆ ಆನೆಯಾಗಿ ಜಂಬೂಸವಾರಿ ಮೆರವಣಿಗೆಯ ಮುಂಚೂಣಿಯಲ್ಲಿ ಸಾಗಲಿದೆ. ಆ ಮೂಲಕ ಅರ್ಜುನನಿಗೆ ಅದ್ಧೂರಿ ದಸರಾ ಮಹೋತ್ಸವದಲ್ಲಿ ಗೌರವ ಸಮರ್ಪಿಸಲಾಗುತ್ತದೆ.

ಗ್ಯಾರಂಟಿಗೆ ಕಲ್ಯಾಣ ಅನುದಾನ ಬಳಕೆಗೆ ಬಿಎಸ್‌ಪಿ ಖಂಡನೆ



ಮೈಸೂರು,ಆ.5(ಪಿಎಂ)– ಪರಿಶಿಷ್ಟ ಜಾತಿ ಮತ್ತು ಪಂಗಡ ಉಪಯೋಜನೆ (ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ) ಅನುದಾನದಲ್ಲಿ 11 ಸಾವಿರ ಕೋಟಿ ರೂ. ಅನ್ನು ಗ್ಯಾರಂಟಿ ಜಾರಿಗೆ ಬಳಸಿಕೊಳ್ಳಲು ನಿರ್ಧರಿಸಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಕ್ರಮವನ್ನು ಬಿಎಸ್‌ಪಿ ಖಂಡಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಜಿಲ್ಲಾಧ್ಯಕ್ಷ ಬಿ.ಆರ್.ಪುಟ್ಟಸ್ವಾಮಿ, ಪರಿಶಿಷ್ಟ ಜಾತಿ ಮತ್ತು ಪಂಗಡದ ಸಮುದಾಯಗಳಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದ ಈ ನಿರ್ಧಾರದಿಂದ ಅನ್ಯಾಯವಾಗಲಿದೆ ಎಂದು ದೂರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಗೆ 34,423 ಕೋಟಿ ರೂ. ಘೋಷಿಸಿ, ಎಸ್‌ಸಿ–ಎಸ್‌ಟಿ ಸಮಾಜಕ್ಕೆ ಭರವಸೆ ಮೂಡಿಸಿದ್ದರು. ಅಲ್ಲದೆ, ಎಸ್‌ಸಿಎಸ್‌ಪಿ–ಟಿಎಸ್‌ಪಿ ಅನುದಾನವನ್ನು ಬೇರೆ ಬಾಬ್ತುಗಳಿಗೆ ಬಳಸಲು ಅವಕಾಶವಿರುವ 7ಡಿ ಕಲಂ ಅನ್ನು ರದ್ದುಪಡಿಸುವುದಾಗಿಯೂ ಸಿದ್ದರಾಮಯ್ಯನವರು ತಮ್ಮ ಬಜೆಟ್ ಭಾಷಣದಲ್ಲಿ ಘೋಷಿಸಿದ್ದರು. ಆದರೆ ಈಗ ಕಾಂಗ್ರೆಸ್ ತನ್ನ ವಾಗ್ದಾನದಿಂದ ಹಿಂದೆ ಸರಿದಿದೆ ಎಂದು ಕಿಡಿಕಾರಿದರು.

ಇದೇ 11 ಸಾವಿರ ಕೋಟಿ ಅನುದಾನವನ್ನು ಎಸ್‌ಸಿ–ಎಸ್‌ಟಿ ಕುಟುಂಬಗಳಿಗೆ ಬಳಸಿ, ತಲಾ 5 ಲಕ್ಷ ರೂಪಾಯಿಯಂತೆ ಮನೆ ಕಟ್ಟಿಕೊಳ್ಳಲು ಅನುದಾನ ನೀಡಿದ್ದರೆ 2,20,000 ಮನೆಗಳ ನಿರ್ಮಾಣಕ್ಕೆ ಅವಕಾಶ ಆಗುತ್ತಿತ್ತು. ಒಟ್ಟಾರೆ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಎಸ್‌ಸಿ–ಎಸ್‌ಟಿ ಸಮಾಜವನ್ನು ವಂಚಿಸುವ ಒಂದೇ ನಿಲುವು ಹೊಂದಿವೆ ಎಂದು ದೂರಿದರು.

ಕೂಡಲೇ 7ಡಿ ಕಲಂ ರದ್ದುಪಡಿಸಬೇಕು. 11 ಸಾವಿರ ಕೋಟಿ ಹಣವನ್ನು ಯಾವುದೇ ಬಾಬ್ತುಗಳಿಗೆ ವರ್ಗಾವಣೆ ಮಾಡದೇ ವಾರ್ಷಿಕ ಬಜೆಟ್‌ನಲ್ಲಿ ಮೀಸಲಿಟ್ಟ 34 ಸಾವಿರ ಕೋಟಿ ಅನುದಾನದಲ್ಲಿ ಎಸ್‌ಸಿ–ಎಸ್‌ಟಿ ಕುಟುಂಬಗಳು ವೈಯಕ್ತಿಕವಾಗಿ ಅಭಿವೃದ್ಧಿಯಾಗಲು ಪೂರಕ ಯೋಜನೆಗಳನ್ನು ರೂಪಿಸಬೇಕೆಂದು ಒತ್ತಾಯಿಸಿದರು.

ಸಮಂಜಸವಲ್ಲ: ಸದರಿ 11 ಸಾವಿರ ಕೋಟಿಯನ್ನು ಎಸ್‌ಸಿ–ಎಸ್‌ಟಿ ಜನತೆಗೆ ಗ್ಯಾರಂಟಿ ಯೋಜನೆಗಳನ್ನು ಒದಗಿಸಲು ಬಳಸಲಾಗುವುದು ಎಂಬ ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರ ಹೇಳಿಕೆ ಸಂಬಂಧ ಪ್ರತಿಕ್ರಿಯಿಸಿ, ಗ್ಯಾರಂಟಿ ಯೋಜನೆಗಳನ್ನು ಎಲ್ಲಾ ಶ್ರೀಸಾಮಾನ್ಯರ ದೃಷ್ಟಿಯಲ್ಲಿ ಮಾಡಲಾಗಿದೆ. ಹಾಗಾಗಿ ಈ ರೀತಿ ಮಾಡುವುದು ಸಮಂಜಸವಲ್ಲ ಎಂದು ಹೇಳಿದರು. ಬಿಎಸ್‌ಪಿ ಮುಖಂಡರಾದ ಪುಟ್ಟಬಸವಯ್ಯ, ಚಂದ್ರಶೇಖರ್, ಶ್ರೀಕಂಠು, ಬಿ.ಮಹದೇವಸ್ವಾಮಿ, ರಂಗದಾಸು ಗೋಷ್ಠಿಯಲ್ಲಿದ್ದರು.

ಕರ್ನಾಟಕ, ಕನ್ನಡದ ಪ್ರತಿನಿಧೀಕರಣ ಹೊರನಾಡಿನಲ್ಲಿ ತುಂಬವೇ ದುರ್ಬಲ

ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ.ಪುರುಷೋತ್ತಮ ಬಿಳಿಮಲೆ ಅಭಿಮತ



ಮೈಸೂರು, ಆ.5(ಪಿಎಂ)– ಪ್ರಸ್ತುತದ ಜಾಗತೀಕರಣ ಮತ್ತು ರಾಷ್ಟ್ರೀಯತೆ ಸಂದರ್ಭದಲ್ಲಿ ದೇಶದ ಬೇರೆ ಭಾಷೆಗಳಿಗೆ ಹೋಲಿಸಿದರೆ, ಕರ್ನಾಟಕ ಮತ್ತು ಕನ್ನಡದ ಪ್ರತಿನಿಧೀಕರಣ ಹೊರನಾಡಿನಲ್ಲಿ ತುಂಬವೇ ದುರ್ಬಲ ಎಂದು ನವದೆಹಲಿಯ ಜೆಎನ್‌ಯು ನಿವೃತ್ತ ಪ್ರಾಧ್ಯಾಪಕ ಡಾ. ಪುರುಷೋತ್ತಮ ಬಿಳಿಮಲೆ ಹೇಳಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಕನ್ನಡ ಚಳವಳಿ ಕೇಂದ್ರ ಸಮಿತಿ, ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಉಪನ್ಯಾಸ ಮತ್ತು ಸಂವಾದ ಕಾರ್ಯಕ್ರಮದಲ್ಲಿ 'ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ–ಕರ್ನಾಟಕ' ಕುರಿತು ಅವರು ಮಾತನಾಡಿದರು. ಈ ಜಾಗತೀಕರಣ ಮತ್ತು ರಾಷ್ಟ್ರೀಯತೆ ಸಂದರ್ಭದಲ್ಲಿ ಕನ್ನಡ ರಾಷ್ಟ್ರ ಮಟ್ಟಕ್ಕೆ ಬೆಳೆಯಬೇಕಿತ್ತು. ಆದರೆ 1960–70ರ ದಶಕದಲ್ಲಿ ರಾಷ್ಟ್ರ ಮಟ್ಟದಲ್ಲಿ ಇದ್ದ ಕನ್ನಡ ಪೀಠಗಳು ಇಂದು ಮುಚ್ಚಿ ಹೋಗಿವೆ. ಹೊಸ ಪೀಠಗಳು ಸ್ಥಾಪನೆಯಾಗಿಲ್ಲ. ಹೊರನಾಡಿನಲ್ಲಿ ಕನ್ನಡದ ಪ್ರತಿನಿಧೀಕರಣ ತುಂಬ ದುರ್ಬಲ. ಆದರೆ ಹೊರಗಡೆಯಿಂದ ಬಂದ ಅನ್ಯಭಾಷಿಗರನ್ನು ಸ್ವೀಕರಿಸಿದ ಬಗೆ ಕನ್ನಡಿಗರಲ್ಲಿ ಬೇರೆ ಭಾಷಿಗರಿಗಿಂತಲೂ ಹೆಚ್ಚು ಎಂದು ಹೇಳಿದರು. 2021ರ ಜನಗಣತಿ ಕೋವಿಡ್ ಕಾರಣಕ್ಕೆ ಆಗಿಲ್ಲ. ಇಷ್ಟೊತ್ತಿಗೆ ಈ ಸಂಬಂಧ ಕೆಲಸ ಪ್ರಾರಂಭವಾಗಬೇಕಿತ್ತು ಅಂದರೆ ಜನಗಣತಿ ವಿಚಾರದಲ್ಲಿ ನಾವು ಸುಮಾರು 15 ವರ್ಷಗಳು ಹಿಂದೆ ಉಳಿದಿದ್ದೇವೆ. ಹಾಗಾಗಿ 2023ರ ಸಂದರ್ಭದಲ್ಲೂ 2011ರ ಜನಗಣತಿ ಆಧಾರದಲ್ಲಿ ಮಾತನಾಡುವ ಪರಿಸ್ಥಿತಿ ಇದೆ. 2011ರ ಜನಗಣತಿ ಪ್ರಕಾರ ದಕ್ಷಿಣ ಭಾರತದವರ ದೆಹಲಿಯ ಪ್ರತಿನಿಧೀಕರಣ ನೋಡುವುದಾದರೆ, ಮಳೆಯಾಳಂ ಭಾಷಿಗರು 1 ಲಕ್ಷದ 35 ಸಾವಿರ ಇದ್ದಾರೆ. ಅದೇ ರೀತಿ ತಮಿಳು ಭಾಷಿಗರು ಸುಮಾರು 90 ಸಾವಿರ ಇದ್ದಾರೆ. 1 ಲಕ್ಷದ 20 ಸಾವಿರ ತೆಲುಗು ಭಾಷಿಗರಿದ್ದಾರೆ. ದೆಹಲಿಯಲ್ಲಿ ಹೆಚ್ಚು ಮಳೆಯಾಳಂ ಭಾಷಿಗರೇ ಇದ್ದಾರೆ. ಆದರೆ 10,800 ಕನ್ನಡಿಗರು ಮಾತ್ರವೇ ದೆಹಲಿಯಲ್ಲಿದ್ದಾರೆ. ಇದು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರ ಪ್ರತಿನಿಧೀಕರಣದ ಅಂಕಿ–ಅಂಶ ಎಂದು ವಿವರಿಸಿದರು. ಕಳೆದ 25 ವರ್ಷಗಳಿಂದ ದೆಹಲಿಯಲ್ಲಿ ಇದ್ದೇನೆ. ದೆಹಲಿಯಲ್ಲಿ ಹೆಚ್ಚಿನವರು ಕರಾವಳಿಯವರಿದ್ದರೆ, ಬಹುಶಃ ಮೈಸೂರಿನವರು ಅತ್ಯಂತ ಕಡಿಮೆ. ಕನ್ನಡದ ಜನ ಹೊರಗಡೆ ಹೋಗುವುದು ಕಡಿಮೆಯೇ ಇದೆ. ಐತಿಹಾಸಿಕವಾಗಿ ನೋಡುವುದಾದರೆ 11ನೇ ಶತಮಾನದ 6ನೇ ವಿಕ್ರಮಾದಿತ್ಯನ ಒಂದು ಶಾಸನದಲ್ಲಿ ಸುಮಾರು 400 ಜನ ಕನ್ನಡಿಗರು ಉತ್ತರ ಭಾರತದ ಗಂಗಾ ನದಿ ಬಯಲಿಗೆ ಹೋಗಿ ನೆಲೆಸಿದರು ಎಂಬ ಅಂಶವಿದೆ. ಇದೊಂದರ ಹೊರತಾಗಿ ಕರ್ನಾಟಕದಿಂದ ಉತ್ತರ ಭಾರತಕ್ಕೆ ಹೋಗಿ ನೆಲೆನಿಂತ ಇನ್ನಾವುದೂ ಐತಿಹಾಸಿಕವಾಗಿ ಕಂಡುಬಂದಿಲ್ಲ. ಆದರೆ ಬೇರೆ ಭಾಷಿಗರಲ್ಲಿ ವಲಸೆ ಹೋದವರ ಸಂಖ್ಯೆ ಕನ್ನಡಿಗರಿಗಿಂತಲೂ ಹೆಚ್ಚಿದೆ. ಕನ್ನಡಿಗರ ಹೊರ ಹೋಗಿದ್ದು ತೀರಾ ಕಡಿಮೆ. ಆದರೆ ಬಂದವರನ್ನು ಸ್ವೀಕರಿಸಿದ್ದೇ ಹೆಚ್ಚು ಎಂದು ತಿಳಿಸಿದರು.

ಸ್ವಾತಂತ್ರ್ಯದ ಪಡೆದ ಸಂದರ್ಭದಲ್ಲಿ ಕರ್ನಾಟಕದಿಂದ ದೆಹಲಿಗೆ ಬಂದು ಹೋಗುವುದು ಪ್ರಾರಂಭವಾಯಿತು. ದೆಹಲಿಯ ಕರ್ನಾಟಕ ಮೂಲದ ಬ್ಯಾಂಕ್‌ಗಳಲ್ಲಿ ಅವುಗಳು ವಿಲೀನಗೊಳ್ಳುವ ಮುನ್ನ ಶೇ.95ರಷ್ಟು ಕನ್ನಡಿಗರು ಇದ್ದರು. ವಿಲೀನವಾದ ಬಳಿಕ ಕೇವಲ ಶೇ.10 ರಷ್ಟಕ್ಕೆ ಇಳಿಕೆಯಾಗಿದೆ. ತಮಿಳುನಾಡು ಮತ್ತು ಕೇರಳದ ಮೂಲದ ಐಎಎಸ್ ಅಧಿಕಾರಿಗಳು (ಕೇಂದ್ರ ಸರ್ಕಾರದ ಕರ್ತವ್ಯದಲ್ಲಿ ಇರುವವರು) ತಮ್ಮ ರಾಜ್ಯಗಳ ಪರ ಕೇಂದ್ರ ಸರ್ಕಾರದ ಸವಲತ್ತು ಪಡೆಯಲು ದೊಡ್ಡ ಲಾಬಿ ಮಾಡುತ್ತಾರೆ. ಕೇಂದ್ರದ ಬಜೆಟ್ ಸಂದರ್ಭದಲ್ಲಿ ಈ ರಾಜ್ಯಗಳ ಐಎಎಸ್ ಅಧಿಕಾರಿಗಳು ತಮ್ಮ ರಾಜ್ಯದ ಅಭಿವೃದ್ಧಿಗೆ ಅಗತ್ಯವಿರುವ ಅನುದಾನದ ಬಗ್ಗೆ ಅವರ ಸಂಸದರೊಂದಿಗೆ ದೆಹಲಿಯಲ್ಲಿ ದೊಡ್ಡ ಮಟ್ಟದಲ್ಲಿ ಸಭೆ ನಡೆಸುತ್ತಾರೆ ಎಂದರು.

'ಬಿದಿರು ನಾನ್ಯಾರಿಗಲ್ಲದವಳು' ಗೀತೆ ಸಾದರಪಡಿಸುವ ಮೂಲಕ ಹಿರಿಯ ರಂಗಕರ್ಮಿ ಜನಾರ್ದನ್ (ಜನ್ನಿ) ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಕನ್ನಡ ಚಳವಳಿ ಕೇಂದ್ರ ಸಮಿತಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ಮತ್ತಿತರರು ಹಾಜರಿದ್ದರು..

ಫುಟ್ಬಾಲ್ ಆಟಗಾರನ ಬಲಿ ಪಡೆದ ಮೊಸಳೆ



ಸ್ಯಾನ್ ಜೋಸ್: ಕೋಸ್ಟರಿಕಾದಲ್ಲಿ 29 ವರ್ಷದ ಫುಟ್ಬಾಲ್ ಆಟಗಾರ ಜೀಸಸ್ ಆಲ್ಬರ್ಟೊ ಮೇಲೆ ಲೋಪೆಜ್ ಒರ್ಟಿಜ್ ನದಿಯಲ್ಲಿ ಮೊಸಳೆಯೊಂದು ದಾಳಿ ಮಾಡಿದೆ ಎಂದು ಸ್ಥಳೀಯ ಮಾಧ್ಯಮಗಳಲ್ಲಿ ವರದಿಯಾಗಿದೆ.

ಕನಾಸ್ ನದಿಯು ಮೊಸಳೆಗಳಿಗೆ ಹೆಸರುವಾಸಿಯಾಗಿದೆ. ಇನ್ನು ಜೀಸಸ್ ಆಲ್ಬರ್ಟೊ ಮೀನುಗಾರಿಕೆ ಸೇತುವೆಯ ಬಳಿ ವ್ಯಾಯಾಮ ಮಾಡುತ್ತಿದ್ದಾಗ ಆತನ ಮೇಲೆ ಮೊಸಳೆ ದಾಳಿ ಮಾಡಿದ ಭಯಾನಕ ಕೃತ್ಯವನ್ನು ನೋಡಿದ ಪ್ರತ್ಯಕ್ಷದರ್ಶಿಗಳು ಸ್ಥಳದಿಂದ ಓಡಿಹೋಗಿದ್ದರು. ಕೋಸ್ಟರಿಕಾ ರಾಜಧಾನಿ ಸ್ಯಾನ್ ಜೋಸ್‌ನಿಂದ 140 ಮೈಲಿ ದೂರದಲ್ಲಿ ಈ ಘಟನೆ ನಡೆದಿದೆ. ಒರ್ಟಿಜ್ ಡಿಪೋರ್ಟಿವೊರಿಯೊ ಕ್ಯಾನಸ್ ಅಮೆಚೂರ್ ಸಾಕರ್ ಕ್ಲಬ್‌ನ ಸದಸ್ಯರಾಗಿದ್ದಾರೆ. ಕೋಸ್ಟರಿಕಾದ ಅಸೆನ್ಸೊ ಲೀಗ್ ತಂಡದ ಸದಸ್ಯ. ಟೀಮ್ ಮ್ಯಾನೇಜ್‌ಮೆಂಟ್ ಕೂಡ ಒರ್ಟಿಜ್ ಸಾವನ್ನು ದೃಢಪಡಿಸಿದೆ. ದಾಳಿ ನಂತರ ಮೊಸಳೆ ಜೀಸಸ್ ಆಲ್ಬರ್ಟೋ ದೇಹವನ್ನು ಬಾಯಿಯಿಂದ ಕಚ್ಚಿಕೊಂಡು ಒಂದು ಮೂಲೆಯಿಂದ ಮತ್ತೊಂದು ಮೂಲೆಗೆ ಎಳೆದೊಯ್ಯುತ್ತಿರುವ ದೃಶ್ಯಗಳು ಭೀಕರವಾಗಿದೆ. ಸ್ಥಳೀಯರು ಮೊಸಳೆಗೆ ಗುಂಡಿಕ್ಕಿ ಕೊಂದು ನಂತರ ಜೀಸಸ್ ಆಲ್ಬರ್ಟೋ ದೇಹವನ್ನು ಹೊರಕ್ಕೆ ತಂದಿದ್ದಾರೆ.

ಮಣಿಪುರ ಘಟನೆ ಖಂಡಿಸಿ ಮಹಿಳೆಯರ ಪ್ರತಿಭಟನೆ

ಆರೋಪಿಗಳ ಮರಣ ದಂಡನೆಗೆ ಆಗ್ರಹ



ಮಡಿಕೇರಿ,ಆ.5– ಈಶಾನ್ಯ ರಾಜ್ಯ ಮಣಿಪುರದಲ್ಲಿ ನಾಗರಿಕ ಸಮಾಜ ತಲೆ ತಗ್ಗಿಸುವಂತೆ ನಡೆದ ಮಹಿಳೆಯರ ಬೆತ್ತಲೆ ಮೆರವಣಿಗೆ ಮತ್ತು ಅತ್ಯಾಚಾರ ಪ್ರಕರಣವನ್ನು ಖಂಡಿಸಿ ಕೊಡಗು ಜಿಲ್ಲಾ ಮಹಿಳೋದಯ ಮಹಿಳಾ ಒಕ್ಕೂಟ ಅತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸುವಂತೆ ಆಗ್ರಹಿಸಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ಕೊಡಗು ಜಿಲ್ಲಾ ಮಹಿಳೋದಯ ಮಹಿಳಾ ಒಕ್ಕೂಟದ ವಲಯ ಸಂಯೋಜಕಿ ಜಾಯ್ಸ್ ಮೆನೇಜಸ್, ಓಡಿಪಿ ಸಂಸ್ಥೆ ಮೈಸೂರಿನ ಸಂಯೋಜಕರಾದ ಮೋಲಿ ಅವರ ನೇತೃತ್ವದಲ್ಲಿ ಸಂಘಟನೆಯ ಸದಸ್ಯರು ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತವನ್ನು ಹಾದು ಜಿಲ್ಲಾಡಳಿತ ಭವನದವರೆಗೆ ಪ್ರತಿಭಟನಾ ಘೋಷಣೆಗಳೊಂದಿಗೆ ಮೆರವಣಿಗೆ ನಡೆಸಿದರು.

ಮರಣ ದಂಡನೆಗೆ ಆಗ್ರಹ: ಕೆಲಕಾಲ ಜಿಲ್ಲಾಡಳಿತ ಭವನದ ಮುಂಭಾಗ ನಡೆದ ಪ್ರತಿಭಟನೆ ಸಂದರ್ಭ ಕೊಡಗು ಜಿಲ್ಲಾ ಮಹಿಳೋದಯ ಮಹಿಳಾ ಒಕ್ಕೂಟದ ವಲಯ ಸಂಯೋಜಕಿ ಜಾಯ್ಸ್ ಮೆನೇಜಸ್ ಮಾತನಾಡಿ, ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲುಗೊಳಿಸಿ ಮೆರವಣಿಗೆ ನಡೆಸಿರುವ ಮತ್ತು ಅತ್ಯಾಚಾರಗೈದಿರುವ ಅಮಾನುಷ ಘಟನೆ ನಡೆದಿದೆ. ಇದಕ್ಕೆ ಕಾರಣರಾದವರನ್ನು ಕಠಿಣ ಕಾನೂನು ಕ್ರಮಕ್ಕೆ ಒಳಪಡಿಸುವುದರೊಂದಿಗೆ ಮರಣ ದಂಡನೆ ವಿಧಿಸಬೇಕೆಂದು ಆಗ್ರಹಿಸಿದರು. ಪ್ರಸ್ತುತ ದೇಶ ವ್ಯಾಪಿ ಮಹಿಳೆಯರ ಮೇಲೆ ದೌರ್ಜನ್ಯ, ಹಿಂಸೆಗಳು ನಿರಂತರವಾಗಿ ನಡೆಯುತ್ತಿವೆ. ಇವುಗಳನ್ನು ನಿಯಂತ್ರಿಸಲು ಸರ್ಕಾರಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಮತ್ತು ದುಷ್ಕೃತ್ಯ ಎಸಗುವವರಿಗೆ ಕಠಿಣ ಶಿಕ್ಷೆ ನೀಡಬೇಕೆಂದು ಒತ್ತಾಯಿಸಿದರು.

ಮೈಸೂರು ಓಡಿಪಿ ಸಂಸ್ಥೆಯ ಸಂಯೋಜಕರಾದ ಮೋಲಿ ಅವರು ಮಾತನಾಡಿ, ಮಣಿಪುರದಲ್ಲಿ ಮಹಿಳೆಯರ ಮೇಲೆ ನಡೆದಿರುವ ಅಮಾನವೀಯ ಘಟನೆಯನ್ನು ಸಂಸ್ಥೆ ತೀವ್ರವಾಗಿ ಖಂಡಿಸುತ್ತದೆ. ಸಂವಿಧಾನದಲ್ಲಿ ಮತ್ತು ಕಾನೂನಿನಲ್ಲಿ ಮಹಿಳೆಯರಿಗೆ ಪ್ರಾಶಸ್ತ್ಯವನ್ನು ನೀಡಲಾಗಿದೆಯಾದರು, ಇದರ ಅನುಷ್ಠಾನ ಸಮರ್ಪಕವಾಗಿ ಆಗುತ್ತಿಲ್ಲವೆಂದು ಬೇಸರ ವ್ಯಕ್ತಪಡಿಸಿದರು. ಮಹಿಳೆಯರಿಗೆ ಸೂಕ್ತ ರಕ್ಷಣೆ ಒದಗಿಸಲು ಆಡಳಿತ ವ್ಯವಸ್ಥೆ ಮುಂದಾಗಬೇಕೆಂದು ತಿಳಿಸಿದರು.

ಪ್ರತಿಭಟನೆಯ ಬಳಿಕ ಜಿಲ್ಲಾಡಳಿತಕ್ಕೆ ಮಹಿಳೋದಯ ಮಹಿಳಾ ಒಕ್ಕೂಟದ ಪ್ರಮುಖರು ಮನವಿ ಸಲ್ಲಿಸಿ, ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಿ ಮಣಿಪುರದಲ್ಲಿ ನಡೆಯುತ್ತಿರುವ ಹಿಂಸೆ ಮತ್ತು ಅತ್ಯಾಚಾರ ಪ್ರಕರಣಗಳನ್ನು ತಡೆಯಲು ಕ್ರಮ ಕೈಗೊಳ್ಳಬೇಕು, ಮಹಿಳೆಯರು ನಿರ್ಭೀತಿಯಿಂದ ಬದುಕಲು ಸೂಕ್ತ ರಕ್ಷಣೆ ಒದಗಿಸಬೇಕು, ಮಹಿಳೆಯರ ಮೇಲೆ ದೌರ್ಜನ್ಯವೆಸಗುವವರಿಗೆ ಮತ್ತು ಅತ್ಯಾಚಾರಿಗಳಿಗೆ ಮರಣ ದಂಡನೆ ವಿಧಿಸಬೇಕು, ಬಂಧಿಸಲ್ಪಟ್ಟಿರುವ ಮಣಿಪುರದ ಅತ್ಯಾಚಾರಿಗಳಿಗೆ ಕಠಿಣ ಶಿಕ್ಷೆ ಜಾರಿಮಾಡಬೇಕು, ಶೋಷಣೆಗೊಳಗಾದ ಕುಟುಂಬಕ್ಕೆ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ನೀಡಬೇಕೆಂದು ಆಗ್ರಹಿಸಲಾಗಿದೆ. ಅತ್ಯಾಚಾರಿಗಳಿಗೆ ವಿಧಿಸುವ ಶಿಕ್ಷೆಯನ್ನು ಮತ್ತಷ್ಟು ಕಠಿಣಗೊಳಿಸಬೇಕು, ಈಗಿರುವ ಶಿಕ್ಷೆಯ ವಿಧಾನವನ್ನು ಬದಲಿಸಬೇಕು ಮತ್ತು ಅತೀ ಶೀಘ್ರದಲ್ಲಿ ತೀರ್ಪು ನೀಡಿ ಉಗ್ರರನ್ನು ಮಟ್ಟಹಾಕಬೇಕು. ನಾಗರಿಕ ಸಮಾಜ ತಲೆ ತಗ್ಗಿಸುವಂತಹ ಘಟನೆ ಮರುಕಳಿಸಬಾರದು ಮತ್ತು ಮಣಿಪುರದ ಕಾನೂನು ವ್ಯವಸ್ಥೆಯನ್ನು ಉತ್ತಮಗೊಳಿಸಬೇಕೆಂದು ಮನವಿಯಲ್ಲಿ ಆಗ್ರಹಿಸಲಾಗಿದೆ.

ಪ್ರತಿಭಟನೆಯಲ್ಲಿ ಮಹಿಳೋದಯ ಮಹಿಳಾ ಒಕ್ಕೂಟದ ಪ್ರಮುಖರಾದ ವಿಜಯ ನಾರಾಯಣ, ಚಿನ್ನಮ್ಮ, ಮೀನಾ ಕುಮಾರಿ, ತಾರಾ, ಲಲಿತ, ಮೈಸೂರು ಓಡಿಪಿಯ ಲಲಿತಾ, ರೇಣು ಕುಮಾರಿ, ಜುಲೇಕಾಬಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಬೆಂಗೂರು ವ್ಯಾಪ್ತಿಯಲ್ಲಿ ಕುಡಿಯುವ ನೀರು ಯೋಜನೆ ಕಾಮಗಾರಿ ಕಳಪೆ ಆರೋಪ

ಲೋಕಾಯುಕ್ತ ಅಧಿಕಾರಿಗಳಿಂದ ತನಿಖೆ ಆರಂಭ



ಮಡಿಕೇರಿ,ಆ.5– ಬೆಂಗೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯ್ತಿ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಕೈಗೊಳ್ಳಲಾದ ಕುಡಿಯುವ ನೀರಿನ ಯೋಜನೆಯ ಕಳಪೆ ಹಾಗೂ ಅಪೂರ್ಣ ಕಾಮಗಾರಿಗೆ ಸಂಬಂಧಿಸಿದ ದೂರನ್ನು ಆಧರಿಸಿ ಲೋಕಾಯುಕ್ತ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

ಚೇರಂಬಾಣೆ ಸೇರಿದಂತೆ ಮೂರು ಗ್ರಾಮಗಳಲ್ಲಿ 2019–20ನೇ ಸಾಲಿನಲ್ಲಿ ಸರಕಾರದ ಸುಮಾರು 35 ಲಕ್ಷ ರೂಪಾಯಿಗಳ ಅನುದಾನ ದುರ್ಬಳಕೆಯಾಗಿದ್ದು, ಈ ಬಗ್ಗೆ ಕ್ರಮಕೈಗೊಳ್ಳುವಂತೆ ಚೇರಂಬಾಣೆ ಗ್ರಾಮಸ್ಥರಾದ ಮನೋಜ್ ಮಂದಣ್ಣ ಎಂಬವರು ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು.

ಅನುದಾನ ದುರ್ಬಳಕೆ ಆರೋಪ: ಕಾಮಗಾರಿ ನಡೆಸಿ 2 ವರ್ಷಗಳಾದರೂ ಗ್ರಾಮ ಪಂಚಾಯ್ತಿಗೆ ಹಸ್ತಾಂತರಿಸಿಲ್ಲ, ಈ ಬಗ್ಗೆ ಗ್ರಾಮ ಸಭೆಯಲ್ಲಿ ಪ್ರಸ್ತಾಪಿಸಿದರೂ ಪೂರಕ ಸ್ಪಂದನೆ ದೊರೆತ್ತಿಲ್ಲ. ಕೊಳಗದಾಳು ಗ್ರಾಮದ ಚೇರಮನ್ನ ಕೊಲ್ಲಿ ಚೆಕ್ ಡ್ಯಾಂ ನಿರ್ಮಿಸದೇ ಬಿಲ್ ಪಾವತಿಸಿರುವುದು, ನೀಲೋಕೆಯಲ್ಲಿ ಸುಮಾರು 2 ಸಾವಿರ ಮೀಟರ್ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಪೂರ್ಣಗೊಂಡಿಲ್ಲ. ಕೊಟ್ಟೂರು ಗ್ರಾಮದಲ್ಲಿ 1 ಸಾವಿರ ಮೀಟರ್ ಪೈಪ್‌ಲೈನ್ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ. ಬೆಂಗೂರು ಗ್ರಾಮದ ಐವತ್ತೋಕ್ಲುವಿನಲ್ಲಿ ಸುಮಾರು 4 ಲಕ್ಷ ರೂ.ಗಳ ಕುಡಿಯುವ ನೀರಿನ ಕಾಮಗಾರಿ ಅಪೂರ್ಣಗೊಂಡಿದ್ದು, ಕಾಮಗಾರಿಗಳಿಗೆ ಬಿಲ್ ಪಾವತಿಸಿರುವುದರಿಂದ ಸರಕಾರದ ಸುಮಾರು 35 ಲಕ್ಷ ರೂ.ಗಳು ದುರ್ಬಳಕೆಯಾಗಿದೆ ಎಂದು ಮನೋಜ್ ಮಂದಣ್ಣ ದೂರು ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಕೊಡಗು ಲೋಕಾಯುಕ್ತ ಡಿವೈಎಸ್‌ಪಿ ಪವನ್‌ಕುಮಾರ್ ಅವರ ನೇತೃತ್ವದಲ್ಲಿ ಜಿಲ್ಲಾ ಪಂಚಾಯ್ತಿ ಹಾಗೂ ಲೋಕೋಪಯೋಗಿ ಇಲಾಖೆಯ ತಾಂತ್ರಿಕ ತಜ್ಞರು ಹಾಗೂ ದೂರುದಾರರಾದ ಮನೋಜ್ ಮಂದಣ್ಣ ಮತ್ತು ಗ್ರಾಮಸ್ಥರ ಸಮ್ಮುಖದಲ್ಲಿ, ಕಾಮಗಾರಿಗಳು ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂದರ್ಭ ಕುಡಿಯುವ ನೀರಿನ ಪೈಪ್‌ಲೈನ್ ಗುಣಮಟ್ಟ ಹಾಗೂ ಕಾಮಗಾರಿಗಳು ನಡೆದಿರುವ ಸ್ಥಳವನ್ನು ಅಗೆದು ಪರಿಶೀಲನೆ ನಡೆಸಲಾಯಿತು.

ದೂರುದಾರ ಮನೋಜ್ ಮಂದಣ್ಣ ಮಾತನಾಡಿ, ಕೆಲವೆಡೆ ಕಾಮಗಾರಿಗಳು ಅಪೂರ್ಣಗೊಂಡಿದ್ದರೆ ಮತ್ತೇ ಕೆಲವು ಕಡೆಗಳಲ್ಲಿ ಕಳಪೆ ಗುಣಮಟ್ಟದಿಂದ ಕೂಡಿದೆ. ಕೆಲವು ಕಡೆ ಕಾಮಗಾರಿ ನಡೆಯದೆ ಬಿಲ್ ಪಾವತಿ ಮಾಡಲಾಗಿದೆ. ಇದರಿಂದ ಸರಕಾರದ ಸುಮಾರು 35 ಲಕ್ಷ ರೂ.ಗಳು ನೀರಿನಲ್ಲಿ ಹೋಮ ಮಾಡಿದಂತಾಗಿದೆ ಎಂದು ಅಧಿಕಾರಿಗಳ ಗಮನ ಸೆಳೆದರು. ಗ್ರಾಮಸ್ಥರಾದ ಬಿ.ಎಂ.ನಂದಕುಮಾರ್ ಮಾತನಾಡಿ, ಸಂಬಂಧಿಸಿದ ಕಾಮಗಾರಿಗಳಿಗೆ ಬಿಲ್ ಪಾವತಿಸಿದವರಿಂದಲೇ ಹಣ ವಸೂಲಿ ಮಾಡಬೇಕು. ಅಪೂರ್ಣಗೊಂಡಿರುವ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳನ್ನು ಒತ್ತಾಯಿಸಿದರು.

ಕೊಡವ ಸಾಹಿತ್ಯ ಉಳಿಯಲು ಕೊಡವ ಭಾಷೆ ಬಳಸುವವರ ಸಂಖ್ಯೆ ಹೆಚ್ಚಾಗಬೇಕು

ಕೊಡವ ಮಕ್ಕಡ ಕೂಟದ 71ನೇ ಪುಸ್ತಕ 'ಕರ್ಮ–ಪ್ರಾರಬ್ಧ' ಬಿಡುಗಡೆ



ಮಡಿಕೇರಿ,ಆ.5– ಕೊಡವ ಸಾಹಿತ್ಯ ಉಳಿಯಬೇಕಾದರೆ ಓದುಗರು ಮತ್ತು ಕೊಡವ ಭಾಷೆ ಬಳಸುವವರ ಸಂಖ್ಯೆ ಹೆಚ್ಚಾಗಬೇಕು ಎಂದು ಹಿರಿಯ ಸಾಹಿತಿ ಹಾಗೂ ಎಂ.ಎ ಕೊಡವ ವಿಭಾಗದ ಉಪನ್ಯಾಸಕ ಬಾಚರಣಿಯಂಡ ಅಪ್ಪಣ್ಣ ಅಭಿಪ್ರಾಯಪಟ್ಟಿದ್ದಾರೆ.

ಕೊಡವ ಎಂ.ಎ ಸ್ನಾತಕೋತ್ತರ ವಿಭಾಗ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಹಾಗೂ ಕೊಡವ ಮಕ್ಕಡ ಕೂಟದ ಸಹಯೋಗದಲ್ಲಿ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜಿನಲ್ಲಿ ಸಾಹಿತಿ ಕೊಟ್ಟುಕತ್ತಿರ ಜಾಲಿ ಸೋಮಣ್ಣ ಬರೆದಿರುವ, ಕೊಡವ ಮಕ್ಕಡ ಕೂಟದ 71ನೇ ಪುಸ್ತಕ 'ಕರ್ಮ–ಪ್ರಾರಬ್ಧ'ವನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ ಅಪ್ಪಣ್ಣ, ಓದಲು ಎಷ್ಟು ಸಾಧ್ಯವೋ ಅಷ್ಟು ಓದಬೇಕು. ಇದರಿಂದ ಸಾಹಿತ್ಯ, ಭಾಷೆ, ಜನಪದ ಕಲೆಯ ಬೆಳವಣಿಗೆಯಾಗಲಿದೆ. ನಾವು ಓದಿದ ಪ್ರತಿ ಪುಸ್ತಕವನ್ನು ಸಂಗ್ರಹದ ರೂಪದಲ್ಲಿ ಇಡಬೇಕು. ಅಲ್ಲದೆ ಅದರ ಸಾರಾಂಶವನ್ನು ಮತ್ತೊಬ್ಬರಿಗೆ ತಿಳಿಸುವ ಮೂಲಕ ಸಾಹಿತ್ಯ ಬೆಳವಣಿಗೆಗೆ ಮುಂದಾಗಬೇಕು ಎಂದರು. ಕೊಡವ ಮಕ್ಕಡ ಕೂಟದ ವತಿಯಿಂದ ಬೊಳ್ಳಜಿರ ಬಿ.ಅಯ್ಯಪ್ಪ ಅವರು ಸಾಹಿತ್ಯ ಕ್ರಾಂತಿ ಮಾಡುತ್ತಿದ್ದು, 71 ಪುಸ್ತಕ ಬಿಡುಗಡೆ ಮಾಡಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಫೀ.ಮಾ.ಕಾರ್ಯಪ್ಪ ಕಾಲೇಜಿನ ಪ್ರಾಂಶುಪಾಲ ಡಾ.ಮೇಜರ್ ರಾಘವ, ಯಾವುದೇ ಒಂದು ಜನಾಂಗದ ಭಾಷೆ, ಸಂಸ್ಕೃತಿ, ಆಚಾರ, ವಿಚಾರ ಉಳಿಯಬೇಕಾದರೆ ಆ ಭಾಷೆಯಲ್ಲಿ ಕೃತಿಗಳು ಬಿಡುಗಡೆಯಾಗಬೇಕು. ಇಲ್ಲದಿದ್ದರೆ ಭಾಷೆ ಅವನತಿ ಹೊಂದಲು ಕಾರಣವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ನಮ್ಮ ಆಚಾರ, ವಿಚಾರ, ಸಂಸ್ಕೃತಿಯನ್ನು ಉಳಿಸುವಲ್ಲಿ ಹಿರಿಯರ ಕೊಡುಗೆ ಅಪಾರ. ಮುಂದಿನ ಪೀಳಿಗೆಗೆ ಪುಸ್ತಕಗಳ ಮೂಲಕವೂ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವ ಕಾರ್ಯ ಆಗಬೇಕು ಎಂದರು.

ಎಂ.ಎ ಕೊಡವ ವಿಭಾಗದ ಸಂಯೋಜಕ ಮೇಚಿರ ರವಿಶಂಕರ್ ನಾಣಯ್ಯ ಮಾತನಾಡಿ, ಭಾರತದ ಆಧ್ಯಾತ್ಮಿಕ ಚಿಂತನೆಯಲ್ಲಿ ಕರ್ಮ–ಪ್ರಾರಬ್ಧಕ್ಕೆ ದೊಡ್ಡ ಹಿನ್ನೆಲೆ ಇದೆ. ನಾವು ಸಮಾಜಕ್ಕೆ ಏನನ್ನು ನೀಡುತ್ತೇವೆ ಅದೇ ನಮಗೆ ಫಲವಾಗಿ ದೊರಕುತ್ತದೆ. ಇದನ್ನು ಪುಸ್ತಕದಲ್ಲಿ ವಿವರವಾಗಿ ತಿಳಿಸಲಾಗಿದೆ ಎಂದರು. 'ಕರ್ಮ–ಪ್ರಾರಬ್ಧ' ಪುಸ್ತಕದ ಬರಹಗಾರ ಹಾಗೂ ಸಾಹಿತಿ ಕೊಟ್ಟುಕತ್ತಿರ ಜಾಲಿ ಸೋಮಣ್ಣ ಮಾತನಾಡಿ, ಪ್ರತಿಯೊಂದು ಜೀವಿಯೂ ತನ್ನ ಜೀವಿತದ ಅವಧಿಯಲ್ಲಿ ಮಾಡುವ ಕೆಲಸ ಕಾರ್ಯಗಳು ಕರ್ಮ ಸಿದ್ಧಾಂತಕ್ಕೆ ಒಳಪಟ್ಟಿರುತ್ತವೆ. ಕರ್ಮದಿಂದ ಉಂಟಾದ ಫಲವನ್ನು ವ್ಯಕ್ತಿ ಅನುಭವಿಸಲೇ ಬೇಕು. ಪ್ರಾರಬ್ಧ ಎಂದರೆ ಹಿಂದೆ ಜನ್ಮ ಜನ್ಮಗಳಲ್ಲಿ ಮಾಡಿದ ಕರ್ಮಗಳಲ್ಲಿ ಕೆಲವು ಈ ಜನ್ಮದಲ್ಲಿ ಪ್ರಭಾವ ಬೀರುತ್ತವೆ. ಆದ್ದರಿಂದ ನಮ್ಮ ಜೀವತಾವಧಿಯಲ್ಲಿ ಉತ್ತಮ ಕಾರ್ಯಗಳನ್ನು ಮಾಡುವ ಮೂಲಕ ಪ್ರೀತಿಯಿಂದ ಎಲ್ಲವನ್ನು ಪಡೆದುಕೊಳ್ಳುವಂತಾಗಬೇಕು ಎಂದು ಹೇಳಿದರು.

ದಾಖಲೆಯ 71ನೇ ಪುಸ್ತಕ: ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ. ಅಯ್ಯಪ್ಪ ಮಾತನಾಡಿ, ಸಾಮಾಜಿಕ ಕಳಕಳಿ, ಕೊಡಗಿನ ಅಭ್ಯುದಯ, ಸಂಸ್ಕೃತಿ, ಸಾಹಿತ್ಯ, ಆಚಾರ ವಿಚಾರದ ಬೆಳವಣಿಗೆಯ ಮೇಲಿನ ಆಸಕ್ತಿಯಿಂದ ಕೂಟ ನಿರಂತರ ಕಾರ್ಯನಿರ್ವಹಣೆಯಲ್ಲಿ ತೊಡಗಿದೆ. ಜಿಲ್ಲೆಯ ಸಾಹಿತ್ಯ ಪ್ರತಿಭೆಗಳಿಗೆ ನಿರಂತರವಾಗಿ ವೇದಿಕೆಯನ್ನು ಕಲ್ಪಿಸಿಕೊಡುತ್ತಾ ಬಂದಿದೆ. ಕಳೆದ ಅನೇಕ ವರ್ಷಗಳಿಂದ ಉದಯೋನ್ಮುಖ ಬರಹಗಾರರಿಗೆ ಪ್ರೋತ್ಸಾಹ ನೀಡುತ್ತಾ ಕೊಡಗಿನ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸುವ ಪ್ರಯತ್ನವನ್ನು ನಾವು ಮಾಡಿದ್ದೇವೆ ಎಂದು ತಿಳಿಸಿದರು. ಜಿಲ್ಲೆಯ ಹಲವು ಬರಹಗಾರರು, ಸಾಹಿತಿಗಳು ಬರೆದ ಕೊಡವ, ಕನ್ನಡ, ಇಂಗ್ಲೀಷ್, ಹಿಂದಿ ಸೇರಿದಂತೆ ಒಟ್ಟು 70 ಕೃತಿಗಳನ್ನು ಬಿಡುಗಡೆ ಮಾಡಿದ್ದು, ಇದೀಗ 71ನೇ ಪುಸ್ತಕವಾಗಿ 'ಕರ್ಮ–ಪ್ರಾರಬ್ಧ'ವನ್ನು ಬಿಡುಗಡೆ ಮಾಡುತ್ತಿರುವುದು ಹೆಮ್ಮೆ ಎನಿಸಿದೆ ಎಂದು ಅಯ್ಯಪ್ಪ ಹೇಳಿದರು.

ನಿರ್ದೇಶಕ, ನಟ ಕೊಟ್ಟುಕತ್ತಿರ ಪ್ರಕಾಶ್ ಕಾರ್ಯಪ್ಪ ಮಾತನಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಹಾಗೂ ಎಂ.ಎ ಕೊಡವ ಉಪನ್ಯಾಸಕಿ ಬಾಚರಣಿಯಂಡ ರಾಣು ಅಪ್ಪಣ್ಣ, ಎಂ.ಎ ಕೊಡವ ವಿದ್ಯಾರ್ಥಿಗಳು ಹಾಗೂ ಕಾಲೇಜಿನ ಉಪನ್ಯಾಸಕರು ಉಪಸ್ಥಿತರಿದ್ದರು.

ಪೊಲೀಸರ ಮೇಲೆ ಹಲ್ಲೆ ನಡೆಸಿದ್ದವರು ಖುಲಾಸೆ

ವಿರಾಜಪೇಟೆ, ಆ.5– ಪೊಲೀಸರ ಮೇಲೆ ಹಲ್ಲೆ ನಡೆಸಿದ ಆರೋಪ ಎದುರಿಸುತ್ತಿದ್ದ ಇಬ್ಬರನ್ನು ನ್ಯಾಯಾಲಯ ಖುಲಾಸೆಗೊಳಿಸಿದೆ.

ತಾಲೂಕಿನ ಸಿದ್ದಾಪುರ ಠಾಣಾ ವ್ಯಾಪ್ತಿಯ ಚೆನ್ನಯ್ಯನಕೋಟೆ ಗ್ರಾಮದಲ್ಲಿ 2019 ರ ಏಪ್ರಿಲ್‌ನಲ್ಲಿ ಯುಗಾದಿ ಹಬ್ಬದ ಸಮಯದಲ್ಲಿ ಸ್ಥಳೀಯ ನಿವಾಸಿಗಳಾದ ಸಿ.ಟಿ. ದಿನೇಶ್, ಎಚ್.ಆರ್.ರಮೇಶ್ ಅವರು ಸಾರ್ವಜನಿಕ ರಸ್ತೆಯಲ್ಲಿ ಜನರಿಗೆ ತೆಂಗಿನಕಾಯಿ ಇಟ್ಟು ಕಲ್ಲು ಹೊಡೆಯುತ್ತಿದ್ದರು. ಕರ್ತವ್ಯದಲ್ಲಿದ್ದ ಪೊಲೀಸ್ ಪೇದೆಗಳಾದ ಆರ್.ಎಂ.ಭರತ್ ಮತ್ತು ಸಂತೋಷ್ ಚೌಹಾಣ್ ಸಾರ್ವಜನಿಕರಿಗೆ ತೊಂದರೆ ಮಾಡದಂತೆ ಆರೋಪಿಗಳಿಗೆ ತಿಳಿಸಿದ ಸಂದರ್ಭದಲ್ಲಿ ಅವಾಚ್ಯವಾಗಿ ನಿಂದಿಸಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿ, ದೈಹಿಕವಾಗಿ ಹಲ್ಲೆ ನಡೆಸಿ, ಕೊಲೆ ಬೆದರಿಕೆ ಹಾಕಿದ್ದ ಬಗ್ಗೆ ಮೊಕದ್ದಮೆ ದಾಖಲಾಗಿ ಪ್ರಕರಣದ ಬಗ್ಗೆ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಟ್ಟಿತ್ತು.

ಅಂತಿಮವಾಗಿ ವಿರಾಜಪೇಟೆ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ಸಂತೋಷ್ ಕೊಠಾರಿ ಅವರು ಪ್ರಾಸಿಕ್ಯೂಷನ್ ಆರೋಪ ಸಾಬೀತುಪಡಿಸುವಲ್ಲಿ ವಿಫಲವಾಗಿದೆ ಎಂದು ತೀರ್ಮಾನಿಸಿ ಆರೋಪಿಗಳನ್ನು ಖುಲಾಸೆಗೊಳಿಸಿದ್ದಾರೆ. ಆರೋಪಿಗಳ ಪರವಾಗಿ ವಕೀಲರಾದ ಡಿ.ಸಿ.ಧ್ರುವಕುಮಾರ್ ವಾದಿಸಿದ್ದರು.



ಕುಶಾಲನಗರ ತಾಲೂಕಿನ ನಂಜರಾಯಪಟ್ಟಣ ಗ್ರಾಪಂ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸಿ.ಎಲ್.ವಿಶ್ವ, ಉಪಾಧ್ಯಕ್ಷರಾಗಿ ಪಿ.ಎನ್.ಕುಸುಮ ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭ ಗ್ರಾಪಂ ಸದಸ್ಯರಾದ ಆರ್.ಕೆ.ಚಂದ್ರ, ಸಮೀರ, ಮಾವಾಜಿ ರಕ್ಷಿತ್, ಗಿರಿಜಮ್ಮ, ಜಾಜಿ, ಪಿಡಿಒ ಕಲ್ಪ, ಜೆಡಿಎಸ್ ಪ್ರಮುಖ ಪಿ.ಡಿ.ರವಿ ಮತ್ತಿತರರು ಇದ್ದರು.

ಪರಾರಿಯಾಗಿದ್ದ ವಿಚಾರಣಾಧೀನ ಕೈದಿ ಸೆರೆ



ಚಾಮರಾಜನಗರ, ಆ.5– ಪೊಲೀಸರ ಕಣ್ತಪ್ಪಿಸಿ ಪರಾರಿಯಾಗಿದ್ದ ವಿಚಾರಣಾಧೀನ ಕೈದಿ ಚಾಮರಾಜನಗರ ಸಮೀಪದ ಕೌಲಂದೆ ರೈಲ್ವೆ ನಿಲ್ದಾಣದಲ್ಲಿ ಪೊಲೀಸರಿಗೆ ಸಿಕ್ಕಿ ಬಿದ್ದಿದ್ದಾನೆ.

ತಾಲೂಕಿನ ಮೇಗಲಹುಂಡಿಯ ಸುರೇಶ್(30) ಪೊಲೀಸರ ಕೈಗೆ ಸಿಕ್ಕಿಬಿದ್ದ ವಿಚಾರಣಾ ಕೈದಿ. ಈತನನ್ನು ತಪ್ಪಿಸಿಕೊಂಡ 24 ಗಂಟೆಯೊಳಗೆ ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಸುರೇಶ್‌ನನ್ನು ಕೆಲ ದಿನಗಳ ಹಿಂದೆ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ತಮಿಳುನಾಡು ಸತ್ಯಮಂಗಲಂನ ನ್ಯಾಯಾಲಯಕ್ಕೆ ಶುಕ್ರವಾರ ವಿಚಾರಣೆಗೆ ಕರೆದೊಯ್ಯುವಾಗ ಆಸನೂರಿನ ಹೋಟೆಲ್ ಬಳಿ ಪೊಲೀಸರ ಕಣ್ತಪ್ಪಿಸಿ ಸುರೇಶ್ ಪರಾರಿಯಾಗಿದ್ದ. ಬಳಿಕ ಕೈಗೆ ಹಾಕಲಾಗಿದ್ದ ಬೇಡಿಯನ್ನು ಕಲ್ಲಿನಿಂದ ಜಜ್ಜಿಕೊಂಡು, ಇತರರನ್ನು ಕಾಡಿ ಬೇಡಿ ಸುರೇಶ್ ಚಾಮರಾಜನಗರಕ್ಕೆ ಬಂದಿದ್ದಾನೆ ಎನ್ನಲಾಗಿದೆ.

ಚಾಮರಾಜನಗರದಿಂದ ನಂಜನಗೂಡಿಗೆ ಶುಕ್ರವಾರ ರಾತ್ರಿ ರೈಲಿನಲ್ಲಿ ಹೋಗಿದ್ದ ಸುರೇಶ್, ಶನಿವಾರ ಬೆಳಗ್ಗೆ ನಂಜನಗೂಡಿನಿಂದ ವಾಪಸ್ ಚಾಮರಾಜನಗರಕ್ಕೆ ಬರುವಾಗ ಮಹಿಳಾ ಬೋಗಿ ಹತ್ತಿ ಪರ್ಸ್ ಕದಿಯಲು ಯತ್ನಿಸಿದ ವೇಳೆ ಪ್ರಯಾಣಿಕರು ಈತನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಹೀಗಾಗಿ ಪರಾರಿಯಾಗಿದ್ದ ಕೈದಿ ಪ್ರಕರಣ ಸುಖಾಂತ್ಯಗೊಂಡಿದ್ದು, ಚಾಮರಾಜನಗರ ಗ್ರಾಮಾಂತರ ಠಾಣಾ ಪೊಲೀಸರು ಸುರೇಶ್‌ನ ಆರೋಗ್ಯ ತಪಾಸಣೆಗೊಳಿಸಿ ಸತ್ಯಮಂಗಲಂ ನ್ಯಾಯಾಲಯ ವಶಕ್ಕೆ ನೀಡಲು ತೆರಳಿದ್ದಾರೆ.

ಚಾ.ನಗರದಲ್ಲಿ ಗೃಹಜ್ಯೋತಿಗೆ ಚಾಲನೆ

ಫಲಾನುಭವಿಗಳಿಗೆ ಶೂನ್ಯ ದರದ ಬಿಲ್ ವಿತರಿಸಿದ ಸಚಿವ ಕೆ.ವೆಂಕಟೇಶ್



ನುಡಿದಂತೆ ನಡೆದ ಸರ್ಕಾರ ನಮ್ಮದು. ಜಿಲ್ಲೆ ಅಭಿವೃದ್ಧಿಗೆ ಸಿದ್ದರಾಮಯ್ಯನವರ ಕೊಡುಗೆ ಸಾಕಷ್ಟಿದೆ. ಕುಡಿಯುವ ನೀರಿನ ಯೋಜನೆ ಸೇರಿದಂತೆ ನಗರದ ಅನೇಕ ಅಭಿವೃದ್ಧಿ ಕಾರ್ಯಗಳ ಜಾರಿಗೆ ಮನವಿ ಮಾಡಿದ್ದು, ಎಲ್ಲವೂ ಚಾಲನೆಗೊಳ್ಳಲಿದೆ.
–ಸಿ.ಪುಟ್ಟರಂಗಶೆಟ್ಟಿ, ಶಾಸಕ.

ಚಾಮರಾಜನಗರ, ಆ.5– ಪ್ರತಿ ಮನೆಗೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಜ್ಯೋತಿ ಯೋಜನೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಚಾಲನೆ ನೀಡಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಶನಿವಾರ ಇಂಧನ ಇಲಾಖೆ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಗೃಹಜ್ಯೋತಿ ಯೋಜನೆ ಉದ್ಘಾಟಿಸಿ ಫಲಾನುಭವಿಗಳಿಗೆ ಶೂನ್ಯ ದರದ ಬಿಲ್ ವಿತರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ಚುನಾವಣಾ ಪೂರ್ವ ನೀಡಿದ್ದ ಭರವಸೆಯಂತೆ 200 ಯೂನಿಟ್‌ವರೆಗೆ ಉಚಿತವಾಗಿ ವಿದ್ಯುತ್ ನೀಡುವ ಗೃಹಜ್ಯೋತಿ ಯೋಜನೆಗೆ ಇಂದು ಚಾಲನೆ ನೀಡಿದ್ದೇವೆ. ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಗೆ ಶೇ.82ರಷ್ಟು ಮಂದಿ ನೋಂದಾಯಿಸಿಕೊಂಡಿದ್ದಾರೆ. ಉಳಿದಿರುವ ಗ್ರಾಹಕರು ಶೀಘ್ರ ನೋಂದಾಯಿಸಿಕೊಂಡು ಈ ಯೋಜನೆ ಸದುಪಯೋಗಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಗೃಹಜ್ಯೋತಿ ಯೋಜನೆಗೆ ವರ್ಷದ ಸರಾಸರಿ ಬಳಕೆಯ ಯೂನಿಟ್‌ಗಳನ್ನು ಪರಿಗಣಿಸಲಾಗುತ್ತದೆ. ಇದರ ಮೇಲೆ ಶೇ.10ರಷ್ಟು ಹೆಚ್ಚಿಸಿ ಅದಕ್ಕನುಗುಣವಾಗಿ ಉಚಿತವಾಗಿ ವಿದ್ಯುತ್ ಸೌಲಭ್ಯ ಒದಗಿಸಲಾಗುತ್ತದೆ. ವಿದ್ಯುತ್ ದುರುಪಯೋಗ ತಡೆಯಲು ಸರಾಸರಿ ಬಳಕೆ ಅನುಸರಿಸಲಾಗುತ್ತಿದೆ. ಯೋಜನೆಗೆ ನೋಂದಾಯಿಸಿಕೊಂಡ ಅರ್ಹರೆಲ್ಲರಿಗೂ ಜುಲೈ ತಿಂಗಳ ಬಳಕೆಯ ಶೂನ್ಯ ಬಿಲ್ ಬರಲಿದೆ. ಮುಂದೆಯೂ ನೋಂದಾಯಿಸಿಕೊಂಡಲ್ಲಿ ಯೋಜನೆ ಲಭ್ಯವಾಗಲಿದೆ ಎಂದರು.

ಕುಟುಂಬದ ಯಜಮಾನಿಗೆ 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆಗೆ ಫಲಾನುಭವಿಗಳ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಜಿಲ್ಲೆಯಲ್ಲಿ ಈವರೆಗೆ ಶೇ.86ರಷ್ಟು ನೋಂದಣಿಯಾಗಿದ್ದು, ಶೇ.14ರಷ್ಟು ನೋಂದಣಿಯಾಗಬೇಕಿದೆ. ಆ.15ರಂದು ಈ ಯೋಜನೆ ಜಾರಿಯಾಗಲಿದೆ ಎಂದರು.

ಅನ್ನಭಾಗ್ಯ ಯೋಜನೆಯಡಿ ಪಡಿತರ ಚೀಟಿದಾರರಿಗೆ ನಗದು ವರ್ಗಾವಣೆ ಮಾಡಲಾಗಿದೆ. ಮಹಿಳೆಯರು ಶಕ್ತಿ ಯೋಜನೆ ಸದುಪಯೋಗಪಡಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರದ ಮತ್ತೊಂದು ಯೋಜನೆ ಯುವನಿಧಿಯನ್ನೂ ಸಹ ಜಾರಿಗೆ ತರಲಿದ್ದೇವೆ ಎಂದ ಅವರು, ಸಮಾಜದ ಎಲ್ಲಾ ವರ್ಗದವರ ಅಭಿವೃದ್ಧಿಗೆ ಸರ್ಕಾರ ಕೆಲಸ ಮಾಡುತ್ತಿದೆ ಎಂದರು.

ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರು, ಗಣ್ಯರು ಫಲಾನುಭವಿಗಳಿಗೆ ಶೂನ್ಯ ದರದ ವಿದ್ಯುತ್ ಬಿಲ್ ವಿತರಿಸಿದರು. ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಎಂ.ಆರ್. ಮಂಜುನಾಥ್, ಹೆಚ್.ಎಂ.ಗಣೇಶ್ ಪ್ರಸಾದ್, ಡಾ.ಡಿ. ತಿಮ್ಮಯ್ಯ, ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್, ಜಿಪಂ ಸಿಇಓ ಎಸ್. ಪೂವಿತಾ, ಎಡಿಸಿ ಗೀತಾ ಹುಡೇದ, ಎಸಿ ಮಹೇಶ್, ತಹಸೀಲ್ದಾರ್ ಗಿರಿಜಾ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧೀಕ್ಷಕ ಇಂಜಿನಿಯರ್ ಸೋಮಶೇಖರ್, ತಾಂತ್ರಿಕ ವಿಭಾಗದ ಪ್ರಧಾನ ವ್ಯವಸ್ಥಾಪಕ ಲೋಕೇಶ್, ಕಾರ್ಯ ನಿರ್ವಾಹಕ ಇಂಜಿನಿಯರ್ ವಸಂತ್ ಕುಮಾರ್ ಇತರರಿದ್ದರು.

ನಾಳೆ ಇಂದ್ರ ಧನುಷ್ ಅಭಿಯಾನ ಉದ್ಘಾಟನೆ

ಚಾಮರಾಜನಗರ, ಆ.5– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದಡಿ ಮೊದಲ ಸುತ್ತಿನ ತೀವ್ರತರ ಮಿಷನ್ ಇಂದ್ರ ಧನುಷ್ ಅಭಿಯಾನದ ಉದ್ಘಾಟನಾ ಸಮಾರಂಭ ಆ.7ರಂದು ಬೆಳಗ್ಗೆ 10.30ಕ್ಕೆ ಚಾಮರಾಜನಗರದ ಗುಂಡ್ಲುಪೇಟೆ ರಸ್ತೆಯಲ್ಲಿರುವ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಆ.7 ರಿಂದ 12ರವರೆಗೆ ಮೊದಲ ಸುತ್ತಿನ ತೀವ್ರತರ ಮಿಷನ್ ಇಂಧ್ರಧನುಷ್ ಅಭಿಯಾನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಅಶ್ವಘೋಷ ನಾಟಕ

ಚಾಮರಾಜನಗರ, ಆ.5– ನಗರದ ವರನಟ ಡಾ.ರಾಜಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ಆ.6ರಂದು ಸಂಜೆ 7 ಗಂಟೆಗೆ ಶಾಂತಲಾ ಕಲಾವಿದರ ತಂಡದಿಂದ ಅಶ್ವಘೋಷ ನಾಟಕ ನಡೆಯಲಿದೆ.

ಬಿ.ಎಸ್.ವಿನಯ್ ಬರೆದಿರುವ ನಾಟಕವನ್ನು ವಿ.ಚಿತ್ರ ನಿರ್ದೇಶಿಸಲಿದ್ದಾರೆ. ಶ್ರೀಧರ್ ಹೆಗ್ಗೋಡು ಸಂಗೀತ ನೀಡಿದ್ದಾರೆ. ವಿ.ಡಿ. ಮಧುಸೂದನ್ ಬೆಳಕಿನ ವಿನ್ಯಾಸ ಮಾಡಲಿದ್ದಾರೆ. ಹರೀಶ್‌ಕುಮಾರ್ ವಸ್ತ್ರವಿನ್ಯಾಸ ಮಾಡಿದ್ದಾರೆ. ಬೇಂದ್ರೆಯವರ ಕವಿತೆ ಮತ್ತು ವೃತ್ತಿ ಕಂಪನಿ ಜನಪ್ರಿಯ ಹಾಡನ್ನು ಬಳಸಿಕೊಳ್ಳಲಾಗಿದೆ ಈ ನಾಟಕದಲ್ಲಿ ತಂಡದ ಹಿರಿಯರ ಜೊತೆ ಅನೇಕ ಕಿರಿಯರು ಪಾತ್ರ ನಿರ್ವಹಿಸಿದ್ದಾರೆ ಎಂದು ಶಾಂತಲಾ ಕಲಾವಿದರ ಸಂಘದ ಮ್ಯಾನೇಜಿಂಗ್ ಟ್ರಸ್ಟಿ ಕೆ.ವೆಂಕಟರಾಜು ತಿಳಿಸಿದ್ದಾರೆ.

ನಾಳೆ, ನಾಳಿದ್ದು ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಆ.5– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಗುಂಡ್ಲುಪೇಟೆ ಮತ್ತು ಬೇಗೂರು ಉಪವಿಭಾಗಗಳ ವ್ಯಾಪ್ತಿಯಲ್ಲಿ 2ನೇ ತ್ರೈಮಾಸಿಕ ನಿರ್ವಹಣಾ ಕಾರ್ಯ ಹಮ್ಮಿಕೊಂಡಿರುವುದರಿಂದ ಆ.7ರಂದು ಹಿರಿಕಾಟಿ, ನಿಟ್ರೆ, ಬೇಗೂರು, ವಾಟರ್ ಸಪ್ಲೈ, ಹೆಗ್ಗಡಹಳ್ಳಿ, ಮಂಚಳ್ಳಿ ಎನ್‌ಜೆವೈ, ಶೆಟ್ಟಹಳ್ಳಿ, ದೇಸಿಪುರ, ಇಂಡಸ್ಟ್ರಿಯಲ್, ಹೊರೆಯಾಲ, ಆ.8ರಂದು ಬೊಮ್ಮನಹಳ್ಳಿ, ಕುಂದಗೆರೆ, ಕಟ್ನವಾಡಿ, ದೇಪಾಪುರ, ಎನ್‌ಜೆವೈ, ಗೋವಿಂದಪುರ, ಕಗ್ಗಳ, ಕೆಲಸಿಪುರ, ಲಕ್ಕೂರು, ಫ್ಯಾಕ್ಟರಿ, ವಾಟರ್ ಸಪ್ಲೈ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಬೆಳಗ್ಗೆ 9 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಕಾರುಗಳ ನಡುವೆ ಡಿಕ್ಕಿ: ಚಾಲಕನಿಗೆ ಗಾಯ

ಬೇಗೂರು, ಆ.5– ಕಾರುಗಳ ನಡುವೆ ಡಿಕ್ಕಿ ಸಂಭವಿಸಿ ಚಾಲಕ ಗಾಯಗೊಂಡಿರುವ ಘಟನೆ ಗ್ರಾಮದ ಶ್ರೀತ್ರಿಪುರ ಸುಂದರಿ ಕಲ್ಯಾಣ ಮಂಟಪದ ಬಳಿ ಶುಕ್ರವಾರ ನಡೆದಿದೆ.

ಮೈಸೂರಿನ ಸಿದ್ಧಾರ್ಥ ನಗರದ ನಿವಾಸಿ ರಾಘವೇಂದ್ರ(35) ಗಾಯಗೊಂಡವರು. ಶುಕ್ರವಾರ ರಾತ್ರಿ ಮೈಸೂರಿನಿಂದ ಗುಂಡ್ಲುಪೇಟೆಗೆ ತೆರಳುತ್ತಿದ್ದ ಕಾರು ಹಾಗೂ ಕೇರಳದಿಂದ ನಂಜನಗೂಡು ಕಡೆಗೆ ತೆರಳುತ್ತಿದ್ದ ಕಾರಿನ ನಡುವೆ ಡಿಕ್ಕಿ ಸಂಭವಿಸಿದೆ. ಈ ವೇಳೆ ಒಂದು ಕಾರಿನಲ್ಲಿದ್ದ ರಾಘವೇಂದ್ರ ತೀವ್ರ ಗಾಯಗೊಂಡು ಮೈಸೂರಿನ ಕಾವೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೇಗೂರು ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಎರಡೂ ಕಾರುಗಳನ್ನು ವಶಕ್ಕೆ ಪಡೆದು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಆ.9,ಯಳಂದೂರಿಗೆ ಲೋಕಾಯುಕ್ತ ಅಧಿಕಾರಿಗಳ ಭೇಟಿ: ದೂರು ಸ್ವೀಕಾರ

ಚಾಮರಾಜನಗರ, ಆ.5– ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಆ.9 ರಂದು ಯಳಂದೂರಿಗೆ ಭೇಟಿ ನೀಡಿ ಅಲ್ಲಿನ ತಾಲೂಕು ಪ್ರವಾಸಿ ಮಂದಿರದಲ್ಲಿ (ಐಬಿ) ಸಾರ್ವಜನಿಕರಿಂದ ದೂರು ಸ್ವೀಕರಿಸಲಿದ್ದಾರೆ.

ಅಂದು ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆವರೆಗೆ ಯಳಂದೂರಿನ ಪ್ರವಾಸಿ ಮಂದಿರದಲ್ಲಿ ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸುವರು. ಸರ್ಕಾರಿ ಕಚೇರಿಗಳಲ್ಲಿ ಸಾರ್ವಜನಿಕ ಕೆಲಸ ಮಾಡಿಕೊಡಲು ಅಧಿಕಾರಿ, ಸಿಬ್ಬಂದಿಯಿಂದ ಲಂಚದ ಬೇಡಿಕೆ, ಕಚೇರಿ ಕೆಲಸದಲ್ಲಿ ಅನಗತ್ಯ ವಿಳಂಬ, ಇನ್ನಿತರ ತೊಂದರೆ ನೀಡುತ್ತಿರುವ ಸರ್ಕಾರಿ ಅಧಿಕಾರಿ ಹಾಗೂ ನೌಕರರ ವಿರುದ್ಧ ಸಾರ್ವಜನಿಕರು ಲೋಕಾಯುಕ್ತ ಕಾಯ್ದೆಯಡಿ ದೂರುಗಳನ್ನು ನಿಗದಿತ ನಮೂನೆ–1 ಮತ್ತು 2ರಲ್ಲಿ ಭರ್ತಿ ಮಾಡಿ ನೀಡಬಹುದು. ಸಾರ್ವಜನಿಕರು ಈ ಅವಕಾಶ ಸದುಪಯೋಗಪಡಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಜಿ ಸಚಿವ ಹೆಚ್.ಎಸ್.ಮಹದೇವಪ್ರಸಾದ್ ಹುಟ್ಟುಹಬ್ಬ ಹಿನ್ನೆಲೆ

ಹರವೆಯಲ್ಲಿ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿ



ಚಾಮರಾಜನಗರ, ಆ.5– ಮಾಜಿ ಸಚಿವ ದಿ.ಹೆಚ್.ಎಸ್.ಮಹದೇವಪ್ರಸಾದ್ ಅವರ 65ನೇ ಹುಟ್ಟುಹಬ್ಬ ಹಿನ್ನಲೆಯಲ್ಲಿ ತಾಲೂಕಿನ ಹರವೆಯಲ್ಲಿ ಉಚಿತ ಕಣ್ಣಿನ ತಪಾಸಣಾ ಶಿಬಿರ ಯಶಸ್ವಿಯಾಗಿ ನಡೆಯಿತು.

ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಆವರಣದಲ್ಲಿ ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆ ಸಹಯೋಗದಲ್ಲಿ ನಡೆದ ಕಣ್ಣಿನ ತಪಾಸಣಾ ಶಿಬಿರಕ್ಕೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಚಾಲನೆ ನೀಡಿದರು.

ಶಿಬಿರದಲ್ಲಿ ಸುಮಾರು 300ಕ್ಕೂ ಹೆಚ್ಚು ಮಂದಿ ತಪಾಸಣೆಗೆ ಒಳಪಟ್ಟರು. ಈ ವೇಳೆ ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದ 130ಕ್ಕೂ ಹೆಚ್ಚು ಮಂದಿಯನ್ನು ಕೊಯಮತ್ತೂರಿನ ಅರವಿಂದ ಕಣ್ಣಾಸ್ಪತ್ರೆಗೆ ಕರೆದೊಯ್ಯಲಾಯಿತು.

ಇದೇ ವೇಳೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ನೋಟ್‌ಬುಕ್ ಮತ್ತು ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆ ನೀಡಲಾಯಿತು.

ಈ ವೇಳೆ ಶ್ರೀಸರ್ಪಭೂಷಣ ಸ್ವಾಮೀಜಿ, ಹೆಚ್.ಎಸ್. ಮಹದೇವ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ, ಜಿಪಂ ಮಾಜಿ ಸದಸ್ಯ ನವೀನ್, ಪರಿಶುದ್ಧ ಡಿಸ್ಟ್ರಿಬ್ಯೂಟರ್‌ನ ಮಹೇಶ್, ಸಾಮಾಜಿಕ ಜಾಲತಾಣದ ಅಧ್ಯಕ್ಷ ಸೈಯದ್ ಮೊಸಾಯಿದ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಮುಖಂಡರಾದ ರವಿಕುಮಾರ್, ಗುರುಸಿದ್ದೇಗೌಡ, ಸಿದ್ದರಾಮಯ್ಯ ಅಭಿಮಾನಿ ಬಳಗದ ಅಧ್ಯಕ್ಷ ಬೆಳ್ಳೇಗೌಡ, ಸುನೀಲ್, ಕೆ.ಎಲ್.ರವಿಕುಮಾರ್, ಪರ್ವತಪ್ಪ, ಗುರುಬಸಪ್ಪ, ಉದಯ ಕುಮಾರ್, ಗ್ರಾಪಂ ಅಧ್ಯಕ್ಷ ಶಿವಕುಮಾರ್, ರೇವಣ್ಣ, ಮಲ್ಲಣ್ಣ, ಪ್ರವೀಣ್, ಡಾ.ಸುರೇಶ್, ಅರವಿಂದ್ ಕಣ್ಣಾಸ್ಪತ್ರೆ ವಿಜಯಕುಮಾರ್, ನಾಗೇಶ್, ಮಲ್ಲಣ್ಣ, ಮಂಜುನಾಥ್, ಸೋಮಶೇಖರ್ ಇತರರಿದ್ದರು.

ಯಳಂದೂರಲ್ಲಿ ಹಡಪದ ಅಪ್ಪಣ್ಣ ಜಯಂತಿ



ಯಳಂದೂರು, ಆ.5– ಪಟ್ಟಣದ ತಾಪಂ ಸಭಾಂಗಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ವತಿಯಿಂದ ಹಡಪದ ಅಪ್ಪಣ್ಣ ಜಯಂತಿ ಆಚರಿಸಲಾಯಿತು.

ಅಪ್ಪಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಮಾತನಾಡಿದ ಶಾಸಕ ಎ.ಆರ್. ಕೃಷ್ಣಮೂರ್ತಿ, 12ನೇ ಶತಮಾನದಲ್ಲಿ ಅಪ್ಪಣ್ಣನವರು ಕ್ರಾಂತಿಕಾರಿ ಬಸವಣ್ಣನವರ ಅನುಭವ ಮಂಟಪದಲ್ಲಿ ವಿಶೇಷ ಸ್ಥಾನ ಪಡೆದಿದ್ದರು. ಇವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಅಳವಡಿಸಕೊಳ್ಳಬೇಕು ಎಂದರು. ಸವಿತಾ ಸಮಾಜದವರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸುವ ಮೂಲಕ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯವಾಗಿ ಮುಂದೆ ಬರಬೇಕು ಎಂದು ತಿಳಿಸಿದರು. ಸಾಹಿತಿ ಗುಂಬಳ್ಳಿ ಬಸವರಾಜ್ ಹಡಪದ ಅಪ್ಪಣ್ಣ ಜೀವನ ಚರಿತ್ರೆ ಮತ್ತು ಅವರ ಆದರ್ಶಗಳ ಬಗ್ಗೆ ವಿಸ್ತಾರವಾಗಿ ತಿಳಿಸಿದರು.

ಈ ವೇಳೆ ಪಪಂ ಅಧ್ಯಕ್ಷೆ ಪ್ರಭಾವತಿ, ತಹಸೀಲ್ದಾರ್ ಶಿವರಾಜು, ದೈಹಿಕ ಪರಿವೀಕ್ಷಕರಾದ ಲಿಂಗರಾಜು, ತಾಲೂಕು ಸವಿತಾ ಸಮಾಜದ ಅಧ್ಯಕ್ಷ ಶ್ರೀಕಂಠಸ್ವಾಮಿ, ಪಪಂ ಸದಸ್ಯರಾದ ಮಹೇಶ್, ರಂಗನಾಥ್, ಶಾಂತಮ್ಮ, ರವಿ, ಸುಶೀಲಾ, ನೌಕರರ ಸಂಘದ ಅಧ್ಯಕ್ಷ ವೈ.ಎಂ.ಮಂಜುನಾಥ್, ಗ್ರಾಮಸೇವಕ ಮಹದೇವಸ್ವಾಮಿ ಹಾಗೂ ಸವಿತಾ ಸಮಾಜದ ಮುಖಂಡರು ಹಾಜರಿದ್ದರು.

ಮೈಸೂರು ಮಿತ್ರ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ತಮಿಳುನಾಡಿನ ಮಧುಮಲೆ ಹುಲಿ ಸಂರಕ್ಷಿತ ಪ್ರದೇಶದ ತೆಪ್ಪಕಾಡು ಆನೆ ಶಿಬಿರಕ್ಕೆ ಶನಿವಾರ ಭೇಟಿ ನೀಡಿದರು.



ಮೈಸೂರಿನ ಶ್ರೀ ಅವಧೂತ ದತ್ತ ಪೀಠದ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಶನಿವಾರ ಭೇಟಿ ನೀಡಿದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು, ಗಣಪತಿ ಸಚ್ಚಿದಾನಂದ ಶ್ರೀಗಳನ್ನು ಸನ್ಮಾನಿಸಿದರು. ಬಳಿಕ ಇಲ್ಲಿನ ಶುಕವನಕ್ಕೆ ತೆರಳಿ ದೇಶಿ–ವಿದೇಶಿ ಪಕ್ಷಿಗಳನ್ನು ವೀಕ್ಷಿಸಿ ಆಹಾರ ನೀಡಿದರಲ್ಲದೇ, ಪಕ್ಷಿಗಳೊಂದಿಗೆ ಫೋಟೋ ಕ್ಲಿಕ್ಕಿಸಿಕೊಂಡು ಸಂತಸಪಟ್ಟರು.

ಸಜ್ಜನರ ಸಂಗದಿಂದ ಸಾಧನೆಯ ಅರಿವು ಮೂಡುತ್ತದೆ

ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ



ಮೈಸೂರು, ಆ.5(ಸಿಎನ್)–ಅಲ್ಪಜ್ಞಾನಿಯಾದವನು ಮದವೇರಿದ ಆನೆಯಂತಾಗುತ್ತಾನೆ. ನಾನೇ ಮಹಾಜ್ಞಾನಿ ಎಂಬ ಮನೋಭಾವ ಬೆಳೆಸಿಕೊಳ್ಳುತ್ತಾನೆ. ಅದನ್ನು ತ್ಯಜಿಸಿ ಸಜ್ಜನರ ಸಂಗ ಮಾಡಿದರೆ ನೀವು ಕಲಿತದ್ದು ಏನೇನು ಇಲ್ಲ, ಸರ್ವಜ್ಞನಾಗಲೂ ಸಾಧನೆ ಮಾಡಬೇಕು ಎಂಬುದು ನಿಮಗೇ ಅರಿವಾಗುತ್ತದೆ ಎಂದು ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಸಲಹೆ ನೀಡಿದರು.

ನಗರದ ಸರಸ್ವತಿಪುರಂನ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿ ಪೇಜಾವರ ಮಠದ ಪೀಠಾಧ್ಯಕ್ಷರಾದ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ವೇಳೆ ಅವರು ಮಾತನಾಡಿದರು.

ವಸಿಷ್ಠ ಋಷಿ–ವಿಶ್ವಾಮಿತ್ರರ ನಡುವಿನ ಯುದ್ಧದ ಬಗ್ಗೆ ಮುಂದುವರಿಸಿ ಮಾತನಾಡಿದ ಅವರು, ವಸಿಷ್ಠರ ಅನುಮತಿ ಮೇರೆಗೆ ನಂದಿನಿ ವಿಶ್ವಮಿತ್ರರ ಸೈನ್ಯವನ್ನು ನಾಶಪಡಿಸಿತು. ಕೋಪೋದ್ರಿಕ್ತರಾಗಿದ್ದ ವಿಶ್ವಾಮಿತ್ರರು ಮತ್ತಷ್ಟು ಶಕ್ತಿ ಸಾಧಿಸಿ, ಹೇಗಾದರೂ ಮಾಡಿ ವಸಿಷ್ಠರನ್ನು ಹತಗೈಯ್ಯಬೇಕು ಎಂದು ಹಟತೊಟ್ಟು, ಶಿವನನ್ನು ಕುರಿತು ಕಠಿಣ ತಪಸ್ಸಿಗೆ ಕುಳಿತರು. ಬಹುಕಾಲದ ತಪಸ್ಸಿನ ನಂತರ ಪ್ರತ್ಯಕ್ಷರಾದ ಶಿವ, ಬೇಕಾದ ವರವನ್ನು ಕೇಳು ಎಂದಾಗ, ಧನುರ್ವೇದದಲ್ಲಿ ನಾನು ಕಲಿಯದಂತ ವಿದ್ಯೆ ಕರಗತ ಹಾಗೂ ದೇವತೆಗಳು, ದಾನವರು, ಯಕ್ಷರು, ಕಿಂಕರರು, ಗಂಧರ್ವರ ಸರ್ವ ವಿದ್ಯೆಗಳನ್ನು ಕರುಣಿಸಿ ಎಂದಾಗ ಭಕ್ತ ಪ್ರಿಯ ಶಿವ ತಥಾಸ್ತು ಎಂದು ಬಿಟ್ಟರು.

ಸಾಧನೆಯಿಲ್ಲದೇ ಸಕಲವೂ ದೊರೆತರೆ ದರ್ಪದ ರೂಪಕ್ಕೆ ತಿರುಗುತ್ತದೆ ಎಂಬುದಕ್ಕೆ ವಿಶ್ವಾಮಿತ್ರರೇ ಸಾಕ್ಷಿಯಾದರು. ಆದರೆ ವಸಿಷ್ಠರ ಬಳಿ ಇಂತಹ ದರ್ಪವಿರಲಿಲ್ಲ, ತುಂಬಿದ ಕೊಡ ತುಳುಕುವುದಿಲ್ಲ ಎಂಬಂತೆ ಬದುಕುತ್ತಿದ್ದರು. ಅಡ್ಡದಾರಿಯಿಂದ ಬಂದ ವಿದ್ಯೆಗೆ ದೀರ್ಘಕಾಲದ ಉಳಿವಿಲ್ಲ ಎಂಬುದು ವಸಿಷ್ಠರಿಗೆ ಚೆನ್ನಾಗಿಯೇ ತಿಳಿದಿತ್ತು.

ವರ ಪಡೆದ ವಿಶ್ವಾಮಿತ್ರರು ಮದವೇರಿದ ಆನೆಯಂತೆ ವಸಿಷ್ಠರ ಆಶ್ರಮಕ್ಕೆ ಬಂದು ಅವರ ತಪೋವನವನ್ನು ಸುಟ್ಟು ಭಸ್ಮಮಾಡುತ್ತಾರೆ. ವಿಪರ್ಯಾಸ ಎಂದರೆ ಅದೇ ವಿಶ್ವಾಮಿತ್ರರು ಈ ಹಿಂದೆ ಭೋಜನ ಕೂಟಕ್ಕೆ ಬಂದಾಗ ಆ ವನವನ್ನು ಕಂಡು ಹೊಗಳಿರುತ್ತಾರೆ. ಆದರೆ ಅವರ ಬುದ್ಧಿಗೆ ಮಂಕು ಬಡಿದಂತೆ, ಎಲ್ಲವನ್ನು ಸುಟ್ಟು ಭಸ್ಮ ಮಾಡುತ್ತಾರೆ. ಪ್ರಾಣಿ ಪಕ್ಷಿಗಳು, ತಪೋನಿರತರು ಅಲ್ಲಿಂದ ಓಡಿ ಹೋಗುತ್ತಿರುತ್ತಾರೆ.

ವಸಿಷ್ಠರು ಅವರನ್ನು ತಡೆದು, ಓಡಬೇಡಿ ಹೆದರಬೇಡಿ, ಸುಳಿವು ನೀಡದೇ ವಿಶ್ವಾಮಿತ್ರ ಆಕ್ರಮಣ ಮಾಡುತ್ತಿದ್ದಾರೆ. ಅವರನ್ನು ನಾನು ಎದುರಿಸುತ್ತೇನೆ ಎಂದು ಭರವಸೆ ನೀಡುತ್ತಾರೆ.

ವಸಿಷ್ಠರ ಮುಂದೆ ನಿಂತು ವಿಶ್ವಾಮಿತ್ರರು ಏಕಾಏಕಿ ನಿರಸ್ತ್ರಾರಿಯಾದ ವಸಿಷ್ಠರಿಗೆ ಒಂದೇಸಮನೆ ಶಸ್ತ್ರಹೂಡುತ್ತಾರೆ. ಇತ್ತ ಕೇವಲ ಬ್ರಹ್ಮ ದಂಡವನ್ನು ಮುಂದಿಟ್ಟು ಕುಳಿತಿದ್ದ ವಸಿಷ್ಠರು ಸಮರ್ಥವಾಗಿ ಎದುರಿಸುತ್ತಾರೆ. ಅಸ್ತ್ರ ಹೂಡಿದ ವಿಶ್ವಾಮಿತ್ರರನ್ನು ಪ್ರಶ್ನಿಸಿದ ವಸಿಷ್ಠರು, 'ನೀನು ಕ್ಷತ್ರಿಯನಲ್ಲ, ಕ್ಷತ್ರ ಕೂಟಕ್ಕೆ ದೊಡ್ಡ ಕಳಂಕ ನೀನಾಗಿದ್ದೀಯ' ಎಂದಾಗ, ಕೋಪಗೊಂಡ ವಿಶ್ವಾಮಿತ್ರರು 40 ಬಗೆಯ ಅಸ್ತ್ರಗಳನ್ನು ಪ್ರಯೋಗ ಮಾಡಿದರು. ಆಗಲೂ ಹೆದರದ ವಸಿಷ್ಠರು ಎಲ್ಲಾ ಅಸ್ತ್ರಗಳನ್ನು ದಂಡದಿಂದ ನಾಶ ಪಡೆಸಿದರು.

ಅಂತಿಮವಾಗಿ ಭಸ್ಮಾಸ್ತ್ರವನ್ನು ಪ್ರಯೋಗ ಮಾಡಿದಾಗ, ಮೂರು ಲೋಕ ಸಹ ಗಡಗಡನೇ ನಡುಗಿತು. ವಸಿಷ್ಠರ ಮೇಲೆ ಇಂತಹ ದೊಡ್ಡ ಅಸ್ತ್ರಪ್ರಯೋಗ ಮಾಡಿದ ವಿಶ್ವಾಮಿತ್ರರ ವಿರುದ್ಧ ಅಸಮಾಧಾನ ಹೊರಹಾಕಿದರು. ಭಸ್ಮಾಸ್ತ್ರವನ್ನು ಸಹ ಬ್ರಹ್ಮ ದಂಡ ನುಂಗಿ ಹಾಕಿದ ವೇಳೆ ವಸಿಷ್ಠರ ಕೋಪಾಗ್ನಿ ಹಿಡಿತದಲ್ಲಿರಲಿಲ್ಲ. ದೇವಾನು ದೇವತೆಗಳು ವಸಿಷ್ಠರ ಕೋಪ ಶಮನಕ್ಕೆ ಪ್ರಾರ್ಥಿಸಿದಾಗ, ವಸಿಷ್ಠರ ಕೋಪ ತಣ್ಣಗಾಯಿತು.

ಇದರಿಂದ ವಿಶ್ವಾಮಿತ್ರರಿಗೆ ಮುಖಭಂಗವಾಗಿ, ತಕ್ಷಣ ವಸಿಷ್ಠರ ಬಳಿ ಕ್ಷಮೆಯಾಚಿಸಿ, ಕ್ಷತ್ರ ಬಲಕ್ಕಿಂತ ಬ್ರಹ್ಮಬಲ ಮುಖ್ಯವಾಗುತ್ತದೆ ಎಂದು ಮತ್ತೊಮ್ಮೆ ತಪಸ್ಸಿಗೆ ಕುಳಿತರು ಎಂದು ಅರ್ಥಪೂರ್ಣವಾಗಿ ವಿವರಿಸಿದರು.

ಭಯಾನಕ ಪ್ರಾಣಿ ಮನುಷ್ಯ

ಪ್ರಪಂಚದ ಭಯಾನಕ ಪ್ರಾಣಿ ಎಂದರೆ ಅದು ಮನುಷ್ಯನೇ ಆಗಿದ್ದಾನೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಸಮೇತ ಉತ್ತರಿಸಿದ ಅವರು, ಒಂದು ಮೃಗಾಲಯದಲ್ಲಿ ಮನುಷ್ಯನಿಗಿಂತ ಭಯಾನಕ ಪ್ರಾಣಿ ಇದು ಎಂಬ ಅಡಿಬರಹ ಬರೆಯಲಾಗಿರುತ್ತದೆ. ಆ ಬರಹವನ್ನು ನೋಡಿ ಎಲ್ಲರೂ ಆಶ್ಚರ್ಯದಿಂದ ಹೋಗಿ ನೋಡಿದಾಗ, ಅಲ್ಲಿ ಒಂದು ಕನ್ನಡಿಯನ್ನು ಅಳವಡಿಸಿರುತ್ತಾರೆ, ಅದರಲ್ಲಿ ಕಾಣುವ ಬಿಂಬವೇ ಭಯಾನಕ ಪ್ರಾಣಿ ಅರ್ಥಾತ್ ಮನುಷ್ಯ ಎಂದು ವಿವರಿಸಿದಾಗ ಜೋರಾದ ಕರತಾಡನ ಮೊಳಗಿತು. ಬಳಿಕ ವಿದ್ವಾನ್ ಕೃಷ್ಣ ಪವನ್ ಕುಮಾರ್ ಕೊಳಲುವಾದ್ಯ ವೃಂದದಿಂದ ಕೊಳಲುವಾದನ ಕಾರ್ಯಕ್ರಮ ನೆರವೇರಿತು.

ಮುಖ್ಯಮಂತ್ರಿ ಸಿದ್ದರಾಮಯ್ಯರ ಜನ್ಮದಿನದ ಪ್ರಯುಕ್ತ

ಆ.11ರಂದು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ



ಮೈಸೂರು,ಆ.5(ಪಿಎಂ)–ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ ಹಾಗೂ ಕನ್ನಡ ಸಾಹಿತ್ಯ ಕಲಾಕೂಟದ ಸಂಯುಕ್ತಾಶ್ರಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನ್ಮದಿನದ ಪ್ರಯುಕ್ತ ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಆ.11 ರಂದು ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿದ್ದು, ಇದೇ ವೇಳೆ ಪಿ.ಆರ್. ತಿಪ್ಪೇಸ್ವಾಮಿ ಸೇರಿದಂತೆ ಕಲಾವಿದರ ಚಿತ್ರಕಲಾ ಪ್ರದರ್ಶನ ಕೂಡ ಹಮ್ಮಿಕೊಳ್ಳಲಾಗಿದೆ ಎಂದು ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಕಲಾಮಂದಿರ ಆವರಣದ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಅಂದು ಬೆಳಗ್ಗೆ 11ಕ್ಕೆ ಚಿತ್ರಕಲಾ ಸ್ಪರ್ಧೆ ಹಾಗೂ ಚಿತ್ರಕಲಾ ಪ್ರದರ್ಶನ ಆರಂಭಗೊಳ್ಳಲಿದೆ. ಚಿತ್ರಕಲಾ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತವಿದೆ ಎಂದರು.

3ರಿಂದ 6ನೇ ತರಗತಿವರೆಗೆ (ನಿಸರ್ಗದ ಚಿತ್ರ), 7ರಿಂದ 10ನೇ ತರಗತಿವರೆಗೆ (ಪರಿಸರ ಸಂರಕ್ಷಣೆ) ಹಾಗೂ ಪಿಯುಸಿ ಮತ್ತು ಪದವಿವರೆಗಿನ (ರಾಜ್ಯ ಸರ್ಕಾರದ ಯೋಜನೆಗಳು) ಮೂರು ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿವೆ. ಪ್ರತಿ ವಿಭಾಗದಲ್ಲೂ ಪ್ರಥಮ (7 ಸಾವಿರ ರೂ. ನಗದು ಬಹುಮಾನ), ದ್ವಿತೀಯ (5 ಸಾವಿರ ರೂ.), ತೃತೀಯ (3 ಸಾವಿರ ರೂ.) ಬಹುಮಾನಗಳನ್ನು ಪ್ರಶಸ್ತಿ ಪತ್ರದೊಂದಿಗೆ ನೀಡಲಾಗುವುದು. ಜೊತೆಗೆ ಎಲ್ಲಾ ವಿಭಾಗದಲ್ಲೂ 10 ಸಮಾಧಾನಕರ ಬಹುಮಾನಗಳನ್ನು (ಪ್ರಶಸ್ತಿ ಪತ್ರ ಮಾತ್ರ) ನೀಡಲಾಗುವುದು ಎಂದು ಹೇಳಿದರು.

ಚಿತ್ರ ಬರೆಯಲು ಕಾಗದ ಒದಗಿಸಲಾಗುವುದು. ಚಿತ್ರ ರಚಿಸಲು ಅಗತ್ಯವಿರುವ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಶಾಲಾ–ಕಾಲೇಜಿನ ವತಿಯಿಂದ ನೋಂದಣಿ ಮಾಡುವುದಾದರೆ ವಿದ್ಯಾಸಂಸ್ಥೆಯ ಲೆಟರ್‌ಹೆಡ್‌ನಲ್ಲಿ ವಿದ್ಯಾರ್ಥಿಗಳ ಪಟ್ಟಿಯನ್ನು ಮೊ.ಸಂ. 97437 77471ಗೆ ವಾಟ್ಸಾಪ್ ಮೂಲಕ ಕಳುಹಿಸಬಹುದು. ಸ್ಪರ್ಧೆಗೆ ಸ್ಥಳದಲ್ಲೂ ನೋಂದಣಿ ಮಾಡಿಕೊಳ್ಳಲು ಅವಕಾಶವಿದೆ. ಹೆಚ್ಚಿನ ವಿವರಗಳಿಗೆ ಕಲಾವಿದ ರಾಜಕುಮಾರ್ ಅವರನ್ನು ಮೊಬೈಲ್‌ನಲ್ಲಿ (81058 70406) ಸಂಪರ್ಕಿಸಬಹುದು ಎಂದರು.

ಹೆಚ್‌ಡಿಕೆ ವಿರುದ್ಧ ಕಿಡಿ: ರಾಜ್ಯ ಕಾಂಗ್ರೆಸ್ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಹುನ್ನಾರ ನಡೆಸಲಾಗುತ್ತಿದೆ. ಬಿಜೆಪಿ ಆಡಳಿತಾವಧಿಯಲ್ಲಿ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪ ಕೇಳಿ ಬಂದರೂ ಮೌನವಾಗಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಈಗ ಕಾಂಗ್ರೆಸ್ ಸರ್ಕಾರದ ವಿರುದ್ಧ ನಿರಂತರವಾಗಿ ಇಲ್ಲಸಲ್ಲದ ಆರೋಪದಲ್ಲಿ ನಿರತರಾಗಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ವಿರುದ್ಧ ಮಾಜಿ ಸಚಿವ ಆರಗ ಜ್ಞಾನೇಂದ್ರ ಅವಹೇಳನಕಾರಿಯಾಗಿ ಮಾತನಾಡಿದ್ದು, ಇದು ಖಂಡನೀಯ. ಈ ಸಂಬಂಧ ಎಫ್‌ಐಆರ್ ಸಹ ದಾಖಲಾಗಿದ್ದು, ಆರಗ ಜ್ಞಾನೇಂದ್ರ ಅವರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದರು.

ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ, ಕಾಂಗ್ರೆಸ್ ಹಿಂದುಳಿದ ವರ್ಗಗಳ ವಿಭಾಗದ ನಗರಾಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೀಶ್ ಉಪ್ಪಾರ್, ಮುಖಂಡರಾದ ಮೈಸೂರು ಬಸವಣ್ಣ ಮೋಹನ್, ಕಲಾವಿದ ರಾಜಕುಮಾರ್ ಗೋಷ್ಠಿಯಲ್ಲಿದ್ದರು.

ಇಂದು ಕಲಾಮಂದಿರದಲ್ಲಿ 'ಶಿವಧೂತ ಗುಳಿಗ' ನಾಟಕ ಪ್ರದರ್ಶನ

ಮೈಸೂರು, ಆ. 5(ಆರ್‌ಕೆ)– ಮೈಸೂರಿನ ಕಲಾಮಂದಿರದಲ್ಲಿ ನಾಳೆ (ಆ. 6) 'ಶಿವಧೂತ ಗುಳಿಗ' ವಿಶಿಷ್ಟ ಶೈಲಿಯ ಕನ್ನಡ ನಾಟಕ ಪ್ರದರ್ಶನ ಏರ್ಪಡಿಸಲಾಗಿದೆ.

ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದಿಂದ ಆಯೋಜಿಸಿರುವ ನಾಟಕವು ಮಧ್ಯಾಹ್ನ 2 ಗಂಟೆಯಿಂದ ಎರಡು ಪ್ರದರ್ಶನವಾಗಲಿದೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು ನಾಟಕವನ್ನು ಉದ್ಘಾಟಿಸಲಿದ್ದು, ಒಕ್ಕೂಟದ ಗೌರವಾಧ್ಯಕ್ಷ ಸುಧಾಕರ ಎಸ್. ಶೆಟ್ಟಿ, ಉದ್ಯಮಿ ಎಂ. ಜಗನ್ನಾಥ ಶೆಣೈ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

ಒಕ್ಕೂಟದ ಅಧ್ಯಕ್ಷ ಗ್ರೇಷಿಯಸ್ ರೋಡ್ರಿಗಸ್, ಉಪಾಧ್ಯಕ್ಷರಾದ ಎಂ.ಕೆ. ಪುರಾಣಿಕ್, ಡಾ. ಲಕ್ಷ್ಮೀನಾರಾಯಣ ಶೆಣೈ ಸೇರಿದಂತೆ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಈ ಸಂದರ್ಭ ಭಾಗವಹಿಸುವರು. ಪ್ರದರ್ಶನ ವೀಕ್ಷಿಸಬಯಸುವವರು ಕಾರ್ಯದರ್ಶಿ ನಾರಾಯಣ ಹೆಗಡೆ (8762843840) ಅವರನ್ನು ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಧ್ರುವನಾರಾಯಣ್ ಸ್ಮರಣಾರ್ಥ ಆರೋಗ್ಯ ತಪಾಸಣಾ ಶಿಬಿರ

ಮೈಸೂರು, ಆ.5(ಎಂಟಿವೈ)– ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರ ಸ್ಮರಣಾರ್ಥ ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ (ಎನ್‌ಎಸ್‌ಯುಐ) ಶನಿವಾರ ಆಯೋಜಿಸಿದ್ದ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರದಲ್ಲಿ ಹಲವು ಮಂದಿ ಪಾಲ್ಗೊಂಡಿದ್ದರು.

ಜನಾನುರಾಗಿಯಾಗಿ ಸೇವೆ ಸಲ್ಲಿಸಿದ್ದ ದಿ.ಆರ್.ಧ್ರುವನಾರಾಯಣ್ ಅವರ ಜನ್ಮದಿನದ ಅಂಗವಾಗಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರದಲ್ಲಿ ರಕ್ತದಾನ, ನೇತ್ರ ದಾನಕ್ಕೆ ನೋಂದಣಿ, ನೇತ್ರ ತಪಾಸಣೆ ನಡೆಸಲಾಯಿತು. ಶಿಬಿರದಲ್ಲಿ 150ಕ್ಕೂ ಹೆಚ್ಚು ಕಾರ್ಯಕರ್ತರು ಪಾಲ್ಗೊಂಡು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಇದೇ ವೇಳೆ 15 ಮಂದಿ ರಕ್ತದಾನ ಮಾಡಿದರೆ, ಐವರು ನೇತ್ರದಾನ ಮಾಡಲು ಹೆಸರು ನೋಂದಾಯಿಸಿಕೊಂಡರು.

ಕಾರ್ಯಕ್ರಮದಲ್ಲಿ ಎನ್‌ಎಸ್‌ಯುಐ ರಾಜ್ಯ ಪ್ರಧಾನ ಕಾರ್ಯದರ್ಶಿ ರಫೀಕ್ ಅಲಿ ಮಾತನಾಡಿ, ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ಕಾರ್ಯಕರ್ತರನ್ನು ಪ್ರೀತಿಯಿಂದ ಕಾಣುತ್ತಿದ್ದರು. ಶಾಸಕರಾಗಿ, ಸಂಸದರಾಗಿ ಮಿಂಚಿ ಮರೆಯಾದ ಧ್ರುವನಾರಾಯಣ್ ಅವರು ಅತ್ಯುತ್ತಮವಾದ ರಾಜಕೀಯ ನಡೆಯೊಂದಿಗೆ, ಸದಾ ಬಡವರು, ಶೋಷಿತರು ಹಾಗೂ ಜನಸಾಮಾನ್ಯರ ಹಿತಕ್ಕಾಗಿಯೇ ಹವಣಿಸುತ್ತಿದ್ದರು. ಆದ ಕಾರಣ ಅವರ ಸ್ಮರಣಾರ್ಥ ಎನ್‌ಎಸ್‌ಯುಐ ವತಿಯಿಂದ ಕಾರ್ಯಕರ್ತರ ಆರೋಗ್ಯ ಕಾಪಾಡಲು ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದ ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಘಟಕದ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಎನ್‌ಎಸ್‌ಯುಐ ಕಾರ್ಯದರ್ಶಿ ಪ್ರಶಾಂತ್, ನಗರಾಧ್ಯಕ್ಷ ಮನೋಜ್, ಗ್ರಾಮಾಂತರ ಅಧ್ಯಕ್ಷ ಬಾಲರಾಜ್, ವಿವಿ ಘಟಕದ ಅಧ್ಯಕ್ಷ ಸಾಗರ್, ಅಪೋಲೋ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ರಮೇಶ್ ಹಾಗೂ ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಎನ್‌ಎಸ್‌ಯುಐ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಸಿಎಂ ಸಿದ್ದರಾಮಯ್ಯ ಅಧಿಕೃತ ಚಾಲನೆ

1.28 ಕೋಟಿ ಕುಟುಂಬಗಳಿಗೆ 2000 ರೂ.ಗಳನ್ನು ಈ ಯೋಜನೆಯಡಿ ನೀಡಲಾಗುವುದು. ನಾವು ಜನರ ಕೈಗೆ ದುಡ್ಡು ನೀಡುತ್ತಿದ್ದೇವೆ. ಜನರಲ್ಲಿ ಕೊಂಡುಕೊಳ್ಳುವ ಶಕ್ತಿ ಹೆಚ್ಚಾಗುತ್ತದೆ. ತನ್ಮೂಲಕ ರಾಜ್ಯದ ಜಿಡಿಪಿ, ಆರ್ಥಿಕ ಚಟುವಟಿಕೆ ಜಾಸ್ತಿಯಾಗುತ್ತದೆ. ಐದು ಗ್ಯಾರಂಟಿಗಳಿಂದ ಒಬ್ಬರಿಗೆ 4 ರಿಂದ 5 ಸಾವಿರ ರೂ. ದೊರೆಯಲಿದ್ದು, ಈ ರೀತಿ ವಾರ್ಷಿಕವಾಗಿ 48 ರಿಂದ 60 ಸಾವಿರ ರೂ. ಜನರಿಗೆ ಲಭಿಸಲಿದೆ ಎಂದು ತಿಳಿಸಿದರು. ಯೋಜನೆಗಳ ಅನುಷ್ಠಾನದ ಜೊತೆಗೆ ರಾಜ್ಯವನ್ನು ಸರ್ವತೋಮುಖ ಅಭಿವೃದ್ಧಿಯತ್ತ ಕೊಂಡೊಯ್ಯುತ್ತೇವೆ. ನಾವು ನೀಡಿದ ಭರವಸೆಯಂತೆ 200 ಯುನಿಟ್ ಬಳಕೆ ಮಾಡುವ 2.14 ಕೋಟಿ ಕುಟುಂಬಗಳಿಗೆ ಶೂನ್ಯ ವಿದ್ಯುತ್ ಬಿಲ್ ತಲುಪಲಿದೆ. ಯಾರು ನೋಂದಣಿ ಮಾಡುತ್ತಾರೋ ಅವರೆಲ್ಲರಿಗೂ ಜುಲೈ ಒಂದರಿಂದಲೇ ಉಚಿತ ವಿದ್ಯುತ್ ದೊರೆಯುತ್ತಿದೆ.

ರಾಜ್ಯ ಸರ್ಕಾರದ ಯೋಜನೆಗಳು ಬಿಜೆಪಿ ಹಾಗೂ ಪ್ರಧಾನಿ ಅವರಿಗೆ ನಡುಕ ಉಂಟು ಮಾಡಿದೆ. ವಿಧಾನಸಭೆ ಚುನಾವಣೆ ರೀತಿಯ ಫಲಿತಾಂಶವೇ ಲೋಕಸಭೆ ಚುನಾವಣೆಯಲ್ಲೂ ಮರುಕಳಿಸಲಿದೆ ಎಂಬ ಭಯ ಬಿಜೆಪಿ ಅವರನ್ನು ಕಾಡುತ್ತಿದೆ.

ಬಡವರ ವಿರೋಧಿ ಬಿಜೆಪಿಯನ್ನು ಮುಂದಿನ ಲೋಕಸಭಾ ಚುನಾವಣೆಯಲ್ಲೂ ಜನ ತಿರಸ್ಕರಿಸಿ, ದೆಹಲಿಯಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ತರಲಿದ್ದಾರೆ ಎಂದರು.

ಕೊಲೆ ಆರೋಪ ಹೊರಿಸಿದ ಸಿಬಿಐ!

ಎಂದು ಸಿಬಿಐ ಹೇಳಿದೆ. ಗುರುದ್ವಾರ ಪುಲ್ ಬಂಗಾಶ್, ಠಾಕೂರ್ ಸಿಂಗ್ ಮತ್ತು ಬಾದಲ್ ಸಿಂಗ್‌ರನ್ನು ಹತ್ಯೆ ಮಾಡಲಾಗಿತ್ತು. ಕಾಂಗ್ರೆಸ್ ನಾಯಕ ತನ್ನ ಕಾರಿನಿಂದ ಇಳಿದು ಗುಂಪನ್ನು ಪ್ರಚೋದಿಸುವುದನ್ನು ನಾನು ನೋಡಿದ್ದೇನೆ ಎಂದು ಸಾಕ್ಷಿಯೊಬ್ಬರನ್ನು ಉಲ್ಲೇಖಿಸಿ ಸಿಬಿಐ ಚಾರ್ಜ್‌ಶೀಟ್ ಉಲ್ಲೇಖಿಸಿದೆ. ಜೊತೆಗೆ, ಪೆಟ್ರೋಲ್ ಬಾಟಲ್, ಲಾಠಿ, ಕತ್ತಿಗಳು ಮತ್ತು ರಾಡ್‌ಗಳನ್ನು ಹೊತ್ತೊಯ್ಯುತ್ತಿದ್ದ ಗುಂಪನ್ನು ನೋಡಿದ ಇನ್ನೊಬ್ಬ ಸಾಕ್ಷಿಯನ್ನು ಚಾರ್ಜ್‌ಶೀಟ್ ಉಲ್ಲೇಖಿಸಿದೆ. ಅಂದು ಸಂಸದರಾಗಿದ್ದ ಜಗದೀಶ್ ಟೈಟ್ಲರ್ ಕೂಡ ಗುರುದ್ವಾರ ಪುಲ್ ಬಂಗಾಶ್ ಎದುರು ಹಾಜರಾಗಿದ್ದರು ಎಂದ ಅವರು, ಕಾಂಗ್ರೆಸ್ ನಾಯಕರು ಗುರುದ್ವಾರದ ಮೇಲೆ ದಾಳಿ ಮಾಡಲು ಗುಂಪನ್ನು ಪ್ರಚೋದಿಸುತ್ತಿದ್ದಾರೆ. 1984ರ ಸಿಖ್ ವಿರೋಧಿ ದಂಗೆಯ ಸಂದರ್ಭದಲ್ಲಿ ಪುಲ್ ಬಂಗಾಶ್ ಹತ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯವು ಟೈಟ್ಲರ್‌ಗೆ ಜಾಮೀನು ಮಂಜೂರು ಮಾಡಿತ್ತು. ಹೆಚ್ಚುವರಿ ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ವಿಧಿ ಗುಪ್ತಾ ಆನಂದ್ ಮಾತನಾಡಿ, ಆರೋಪಿಯು ಈಗಾಗಲೇ ಸೆಷನ್ಸ್ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಚಾರ್ಜ್‌ಶೀಟ್‌ನ ಪ್ರತಿಯನ್ನು ಟೈಟ್ಲರ್‌ಗೆ ನೀಡುವಂತೆ ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ಕೋರ್ಟ್ ಸೂಚಿಸಿದೆ. ಬಿಗಿ ಭದ್ರತೆಯ ನಡುವೆ ಕಾಂಗ್ರೆಸ್ ನಾಯಕ ಟೈಟ್ಲರ್ ನ್ಯಾಯಾಲಯಕ್ಕೆ ಹಾಜರಾದರು. ಅವರ ಪತ್ನಿ ಜೆನ್ನಿಫರ್ ಟೈಟರ್ ಅವರಿಗೆ ಜಾಮೀನುದಾರರಾಗಿ ನಿಂತಿದ್ದಾರೆ. ನ್ಯಾಯಾಲಯವು ಜೆನ್ನಿಫರ್ ಅವರ ಗುರುತು ಮತ್ತು ಆರ್ಥಿಕ ಸ್ಥಿತಿಯನ್ನು ಪರಿಶೀಲಿಸಿ ಶ್ಯೂರಿಟಿಯಾಗಿ ಪರಿಗಣಿಸಿದೆ.

ಇಮ್ರಾನ್‌ಖಾನ್‌ಗೆ 3 ವರ್ಷ ಜೈಲು

ಭಯೋತ್ಪಾದನೆ, ಹಿಂಸಾಚಾರ, ಧರ್ಮನಿಂದನೆ, ಭ್ರಷ್ಟಾಚಾರ ಮತ್ತು ಕೊಲೆಯಂತಹ ಆರೋಪಗಳನ್ನು ಎದುರಿಸುತ್ತಿದ್ದಾರೆ. ಅಕ್ಟೋಬರ್ 21, 2022 ರಂದು ಪಾಕಿಸ್ತಾನದ ಚುನಾವಣಾ ಆಯೋಗವು (ECP) ಇಮ್ರಾನ್ ಖಾನ್ ಅವರನ್ನು "ಸುಳ್ಳು ಹೇಳಿಕೆಗಳು ಮತ್ತು ತಪ್ಪು ಘೋಷಣೆಗಾಗಿ" ಅನರ್ಹಗೊಳಿಸಿದ ನಂತರ ತೋಶಾಖಾನಾ ವಿಷಯವು ರಾಷ್ಟ್ರೀಯ ರಾಜಕೀಯದಲ್ಲಿ ಮುನ್ನಲೆಗೆ ಬಂತು. ತೋಷಖಾನಾವು ಕ್ಯಾಬಿನೆಟ್ ವಿಭಾಗದ ಅಡಿಯಲ್ಲಿ ಒಂದು ಇಲಾಖೆಯಾಗಿದ್ದು, ಇದು ಆಡಳಿತಗಾರರು ಮತ್ತು ಸರ್ಕಾರಿ ಅಧಿಕಾರಿಗಳಿಗೆ ಇತರ ಸರ್ಕಾರಗಳ ಮುಖ್ಯಸ್ಥರು ಮತ್ತು ವಿದೇಶಿ ಗಣ್ಯರು ನೀಡಿದ ಉಡುಗೊರೆಗಳನ್ನು ಸಂಗ್ರಹಿಸುತ್ತದೆ. ಖಾನ್ ಅವರು ಬೆಲೆಬಾಳುವ ವಾಚ್ ಸೇರಿದಂತೆ ಕೆಲವು ಉಡುಗೊರೆಗಳನ್ನು ತೆಗೆದುಕೊಂಡು ಅವುಗಳನ್ನು ಲಾಭಕ್ಕಾಗಿ ಮಾರಾಟ ಮಾಡಿದ್ದರು ಎಂಬುದು ಆರೋಪವಾಗಿದೆ. ಇಮ್ರಾನ್ ಖಾನ್ ತೋಷಖಾನಾದಿಂದ ಉಳಿಸಿಕೊಂಡ ಉಡುಗೊರೆಗಳ ವಿವರಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿದ್ದಾರೆ ಎಂದು ಇಸಿಪಿ ಸಲ್ಲಿಸಿದ ಕ್ರಿಮಿನಲ್ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಲಾಗಿತ್ತು.

ಇಂದು ಅಂತರ ಜಿಲ್ಲಾ ದೇಹದಾರ್ಢ್ಯ ಸ್ಪರ್ಧೆ ; ನೂತನ ಶಾಸಕರಿಗೆ ಸನ್ಮಾನ



ಮೈಸೂರು,ಆ.5(ಪಿಎಂ)– ಅಶೋಕಪುರಂ ಯೂತ್ಸ್, ಮೈಸೂರು ಡಿಸ್ಟ್ರಿಕ್ಟ್ ಅಮೆಚೂರ್ ಬಾಡಿ ಬಿಲ್ಡರ್ ಅಸೋಸಿಯೇಷನ್ ಜಂಟಿ ಆಶ್ರಯದಲ್ಲಿ 'ಮಿ.ಧ್ರುವನಾರಾಯಣ್ ಕಪ್–2023 ; ಅಂತರ ಜಿಲ್ಲಾ ದೇಹದಾರ್ಢ್ಯ ಸ್ಪರ್ಧೆ ಹಾಗೂ ನೂತನ ಶಾಸಕರಿಗೆ ಸನ್ಮಾನ ಸಮಾರಂಭವನ್ನು ಆ.6ರಂದು ಹಮ್ಮಿಕೊಳ್ಳಲಾಗಿದೆ ಎಂದು ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ನವೀನ್‌ಚಂದ್ರ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಶೋಕಪುರಂನ ಅಂಬೇಡ್ಕರ್ ಪಾರ್ಕ್ ಎದುರಿನ ಎನ್‌ಟಿಎಂಎಸ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಅಂದು ಸಂಜೆ 7ಕ್ಕೆ ಸ್ಪರ್ಧೆ ಹಾಗೂ ಸನ್ಮಾನ ಸಮಾರಂಭ ನಡೆಯಲಿದ್ದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದಾರೆ ಎಂದರು.

ಇದೇ ವೇಳೆ ನೂತನ ಶಾಸಕರಾದ ಕೆಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಎ.ಆರ್.ಕೃಷ್ಣಮೂರ್ತಿ, ಎಂ. ಗಣೇಶ್ ಪ್ರಸಾದ್ ಅವರನ್ನು ಸನ್ಮಾನಿಸಲಾಗುವುದು. ಅತಿಥಿಗಳಾಗಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಜಯರಾಜ್, ಮಾರ್ಕೆಟ್ ದಿನೇಶ್ ಪಾಲ್ಗೊಳ್ಳಲಿದ್ದಾರೆ. ದೇಹದಾರ್ಢ್ಯ ಸ್ಪರ್ಧೆಯಲ್ಲಿ ಮಿ.ಧ್ರುವನಾರಾಯಣ್ ಕಪ್‌ಗೆ ಭಾಜನರಾದವರಿಗೆ 30 ಸಾವಿರ ರೂ. ನಗದು ಬಹುಮಾನ ದೊರೆಯಲಿದೆ. ಇದಲ್ಲದೆ, ಶಾರ್ಟ್, ಮೀಡಿಯಮ್, ಟಾಲ್ ಹಾಗೂ ಸೂಪರ್‌ಟಾಲ್ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು.

ಎಲ್ಲಾ ವಿಭಾಗಗಳಲ್ಲೂ ನಗದು ಬಹುಮಾನ ಇದ್ದು, ಒಟ್ಟಾರೆ 75 ಸಾವಿರ ರೂ. ಮೊತ್ತದ ನಗದು ಬಹುಮಾನ ನೀಡಲಾಗುತ್ತಿದೆ. ಸ್ಪರ್ಧೆಗೆ ಪ್ರವೇಶ ಶುಲ್ಕ 5 ಸಾವಿರ ರೂ. ನಿಗದಿ ಮಾಡಿದ್ದು, ಹೆಚ್ಚಿನ ವಿವರಗಳಿಗೆ ಮೊ.ಸಂ. 99015 51432 ಸಂಪರ್ಕಿಸಬಹುದು ಎಂದು ತಿಳಿಸಿದರು. ಅಶೋಕಪುರಂನ ಮುಖಂಡರಾದ ಪೈಕೃಷ್ಣ, ಆದರ್ಶ ಭೀಮ್, ಸಿದ್ದು, ಮಂಜು ಗೋಷ್ಠಿಯಲ್ಲಿದ್ದರು.

ಎಸ್‌ಸಿ, ಎಸ್‌ಟಿ ಕಲ್ಯಾಣ ಅನುದಾನ ಗ್ಯಾರಂಟಿ ಯೋಜನೆಗೆ ಬಳಕೆ ವಿರುದ್ಧ ಬಿಜೆಪಿ ಪ್ರತಿಭಟನೆ



ಮೈಸೂರು, ಆ.5(ಜಿಎ)– ಎಸ್.ಸಿ.ಎಸ್.ಪಿ/ ಟಿ.ಎಸ್.ಪಿ ಯೋಜನೆಯ ಅನುದಾನವನ್ನು ರಾಜ್ಯ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಬಳಸಿಕೊಳ್ಳುತ್ತಿರುವುದನ್ನು ವಿರೋಧಿಸಿ ಬಿಜೆಪಿ ಎಸ್.ಸಿ ಮೋರ್ಚಾದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ನಗರದ ಪುರಭವನದ ಅಂಬೇಡ್ಕರ್ ಪುತ್ಥಳಿ ಮುಂಭಾಗ ಜಮಾಯಿಸಿದ ಎಸ್.ಸಿ. ಮೋರ್ಚಾದ ಪದಾಧಿಕಾರಿಗಳು ರಾಜ್ಯ ಸರ್ಕಾರದ ವಿರುದ್ಧ ವಿವಿಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಪ್ರತಿಭಟನಾಕಾರರು ಮಾತನಾಡಿ, ಜು.31ರಂದು ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಪರಿಷತ್ ಸಭೆಯಲ್ಲಿ 2023–24 ನೇ ಸಾಲಿಗೆ ಎಸ್.ಸಿ/ಎಸ್.ಟಿ.ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ರಾಜ್ಯದ ಒಟ್ಟು ಆಯವ್ಯಯದಲ್ಲಿ 34,293 ಕೋಟಿ ರೂ. ಅನುದಾನವನ್ನು ನಿಗದಿಪಡಿಸಿರುವುದು ಸ್ವಾಗತಾರ್ಹ ವಿಷಯವಾಗಿದೆ. ಆದರೆ, ಇದರಲ್ಲಿ 11,000 ಕೋಟಿ ಅನುದಾನವನ್ನು ರಾಜ್ಯ ಸರ್ಕಾರ ಘೋಷಣೆ ಮಾಡಿರುವ ಐದು ಗ್ಯಾರಂಟಿ ಯೋಜನೆಗಳಿಗೆ ಮೀಸಲಿಟ್ಟಿರುವುದು ದಲಿತರ ಅಭಿವೃದ್ಧಿಗೆ ಮಾರಕವಾಗಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಎಸ್.ಸಿ.ಎಸ್.ಪಿ/ಟಿ.ಎಸ್.ಪಿ. ಅನುದಾನವನ್ನು ಇತರೆ ಯೋಜನೆಗಳಿಗೆ ಬಳಸಿಕೊಳ್ಳುವ ತೀರ್ಮಾನವನ್ನು ತಕ್ಷಣ ಕೈ ಬಿಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಮಾಜಿ ಶಾಸಕ ಎನ್. ಮಹೇಶ್, ಮೋರ್ಚಾ ನಗರ ಜಿಲ್ಲಾಧ್ಯಕ್ಷ ಈಶ್ವರ್, ಗ್ರಾಮಾಂತರ ಜಿಲ್ಲಾಧ್ಯಕ್ಷ ಎಸ್.ಸಿ. ಮಹದೇವಯ್ಯ, ಪ್ರಧಾನ ಕಾರ್ಯದರ್ಶಿ ಜಯರಾಮ್, ಡಿ.ಮಂಜುನಾಥ್ ಬಾಬು, ಮುಖಂಡರಾದ ಗಿರಿಧರ್ ಸೇರಿದಂತೆ ಕಾರ್ಯಕರ್ತರು ಭಾಗಿಯಾಗಿದ್ದರು.

ತೆಂಗು ಬೆಳೆಗಾರರ ಸಮಸ್ಯೆ ಬಗೆಹರಿಸುವಂತೆ ಆಗ್ರಹಿಸಿ ಪ್ರತಿಭಟನೆ



ಮೈಸೂರು, ಆ.5(ಜಿಎ)–ತೆಂಗು ಬೆಳೆಗಾರರ ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿ ಮೈಸೂರು, ಚಾಮರಾಜನಗರ ಸಂಸದರ ಕಚೇರಿ ಮುಂಭಾಗ ರೈತರು ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಸಂಯುಕ್ತ ಹೋರಾಟ ಕರ್ನಾಟಕದ ವತಿಯಿಂದ ನಗರದ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿರುವ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ ಮತ್ತು ಕಾಡಾ ಕಚೇರಿ ಆವರಣದಲ್ಲಿರುವ ಚಾಮರಾಜನಗರ ಸಂಸದ ವಿ.ಶ್ರೀನಿವಾಸ್ ಪ್ರಸಾದ್ ಕಚೇರಿ ಮುಂಭಾಗ ಪ್ರತಿಭಟನೆ ಮಾಡಿ, ತೆಂಗು ಬೆಳೆಗಾರರ ಸಮಸ್ಯೆಯನ್ನು ಮತ್ತು ಹಕ್ಕೊತ್ತಾಯಗಳನ್ನು ಸಲ್ಲಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು, ವಿಶ್ವಾದ್ಯಂತ ಪ್ರಸಿದ್ಧವಾಗಿರುವ ಉಂಡೆ ಕೊಬ್ಬರಿಯ ಬೆಲೆ 7 ಸಾವಿರ ರೂ.ಗೆ ಕುಸಿದಿದೆ. ಕರ್ನಾಟಕದಲ್ಲಿ 2.18 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುವ ಕೊಬ್ಬರಿಯನ್ನು ನಂಬಿಕೊಂಡು ಸಾವಿರಾರು ಕುಟುಂಬಗಳು ಜೀವನ ನಡೆಸುತ್ತಿವೆ. ಅವರಿಗೆ ಬೆಲೆ ಕುಸಿತವು ತೀವ್ರ ಸಂಕಷ್ಟವನ್ನು ಉಂಟುಮಾಡಿದೆ. 2.18 ಲಕ್ಷ ಮೆಟ್ರಿಕ್ ಟನ್ ಕೊಬ್ಬರಿಯಲ್ಲಿ 1.75 ಲಕ್ಷ ಮೆಟ್ರಿಕ್ ಟನ್ ಇನ್ನೂ ರೈತರ ಬಳಿಯೇ ಇದೆ. ಖರೀದಿ ಕೇಂದ್ರದಲ್ಲಿ ಖರೀದಿಯನ್ನು ಆಗಸ್ಟ್ 25 ರವರೆಗೆ ವಿಸ್ತರಿಸುವುದು ಸ್ವಾಗತಾರ್ಹ. ಆದರೆ, ಅಷ್ಟರೊಳಗೆ ಕೊಬ್ಬರಿ ತರಲು ರೈತರಿಗೆ ಸಾಧ್ಯವಾಗು ವುದಿಲ್ಲ. ಈ ಕಾರಣ ಕನಿಷ್ಠ ಇನ್ನೂ ಮೂರು ತಿಂಗಳು ಅವಧಿ ವಿಸ್ತರಿಸಬೇಕು. ಜೊತೆಗೆ ನೋಂದಣಿ ಮಾಡಲು ಸಾಧ್ಯವಾಗದ ರೈತರು ಸಾಕಷ್ಟು ಸಂಖ್ಯೆಯಲ್ಲಿರುವುದರಿಂದ ನೋಂದಣಿಯನ್ನು ಮತ್ತೆ ಆರಂಭಿಸಬೇಕು ಎಂದು ಆಗ್ರಹಿಸಿದರು.

ಕಳೆದ ಐದಾರು ವರ್ಷಗಳಿಂದ ಒಣಬರ ಮತ್ತು ಹಸಿಬರಗಳಿಗೆ ತೆಂಗಿನಮರಗಳು ಧರೆಗುರುಳಿವೆ. ಇದರಿಂದ ತೆಂಗು ಬೆಳೆಗಾರರು ನಷ್ಟ ಅನುಭವಿಸಿದರು. ಇದರ ಜೊತೆಗೆ ಕಪ್ಪು, ಕೆಂಪು ಮೂತಿ ಕೀಟಗಳ ಬಾಧೆ, ದೊಡ್ಡ ರಸ ಸೋರುವ ರೋಗ, ಅಪ್ಪ ಚುಕ್ಕೆ ರೋಗ, ಗರಿ ಉದುರುವ ರೋಗಗಳಿಗೆ ತೆಂಗಿನಮರಗಳು ಬಲಿಯಾಗುತ್ತಿವೆ. ಇದರಿಂದ ತೆಂಗು ಬೆಳೆಗಾರರು ಎಲ್ಲಾ ದಿಕ್ಕುಗಳಿಂದಲೂ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದರು.

ರೈತರ ಆದಾಯವನ್ನು ದುಪ್ಪಟ್ಟು ಮಾಡುತ್ತೇವೆಂದು ಹೇಳಿದ ಕೇಂದ್ರ ಸರ್ಕಾರ ಹೊರದೇಶಗಳಿಂದ ತೆಂಗು, ಕೊಬ್ಬರಿ, ತೆಂಗಿನೆಣ್ಣೆ ಮುಂತಾದ ತೆಂಗಿನ ಉತ್ಪನ್ನಗಳನ್ನು ಮತ್ತು ತಾಳೆಎಣ್ಣೆ ಸೋಯಾ ಎಣ್ಣೆಗಳಂತೆ ಖಾದ್ಯ ತೈಲಗಳನ್ನು ಆಮದು ಮಾಡಿಕೊಂಡು ತೆಂಗು ಬೆಳೆಯುವ ರೈತರನ್ನು ಬೀದಿಪಾಲಾಗುವಂತೆ ಮಾಡಿದೆ. ಶೂನ್ಯ ತೆರಿಗೆ ಆಮದು ವ್ಯಾಪಾರವನ್ನು 2024ರ ಮಾರ್ಚ್ ತಿಂಗಳವರೆಗೆ ಮೂರು ಬಾರಿ ವಿಸ್ತರಿಸಿ ತೆಂಗು ಬೆಳೆಗಾರರಿಗೆ ಬರೆ ಎಳೆಯುತ್ತಿದೆ ಎಂದು ದೂರಿದರು.

ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ 20,000 ರೂ. ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನಿಗದಿಪಡಿಸಬೇಕು ಮತ್ತು ಅದನ್ನು ಕಾನೂನುಬದ್ಧಗೊಳಿಸಬೇಕು. ಎಳನೀರು ಮತ್ತು ತೆಂಗಿನಕಾಯಿಗೂ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸಬೇಕು. ಪ್ರಮಾಣದ ಮಿತಿ ಹೇರದೇ ತೆಂಗಿನ ಉತ್ಪನ್ನವನ್ನು ಸಂಪೂರ್ಣವಾಗಿ ಖರೀದಿಸಬೇಕು ಮತ್ತು ಅದಕ್ಕೆ ಅವಶ್ಯಕತೆ ಇರುವ ಹಣ ಬಿಡುಗಡೆ ಮಾಡಬೇಕು ಮತ್ತು ಮುಕ್ತ ಮಾರುಕಟ್ಟೆಯಡಿಯಲ್ಲಿ ತೆಂಗಿನ ಉತ್ಪನ್ನ ಮತ್ತು ಖಾದ್ಯ ತೈಲ ಆಮದನ್ನು ಕೂಡಲೇ ನಿಲ್ಲಿಸಬೇಕೆಂದು ಸೇರಿದಂತೆ ವಿವಿಧ ಹಕ್ಕೊತ್ತಾಯಗಳ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ಉಪಾಧ್ಯಕ್ಷ ಎಂ.ಮಹೇಶ್ ಪ್ರಭು, ಜಿಲ್ಲಾ ಪ್ರಧಾನ ರೈತ ಸಂಘದ ಹೊಸಕೋಟೆ ಬಸವರಾಜು, ಪ್ರಧಾನ ಕಾರ್ಯದರ್ಶಿ ಹೊಸೂರು ಕುಮಾರ್, ಕರ್ನಾಟಕ ಪ್ರಾಂತ ರೈತ ಸಂಘ ಮುಖಂಡರಾದ ಜಗದೀಶ್ ಸೂರ್ಯ ಮತ್ತು ಮರಂಕಯ್ಯ ಭಾಗಿಯಾಗಿದ್ದರು.

ಮ.ನ.ಲತಾಮೋಹನ್, ಮೊ. 94818 31434

ಆಹಾ ಈ 'ಸ್ನೇಹ!'



"'ಸ್ನೇಹದ ಮೂಲಕ ಮಾನವ ಚೈತನ್ಯವನ್ನು ಹಂಚಿಕೊಳ್ಳಿ' ಎಂದು 2023ರ ಸ್ನೇಹಿತರ ದಿನದ ಥೀಮ್ ಆಗಿದೆ. ಇದು ವ್ಯಕ್ತಿಗಳ ನಡುವೆ ಅರ್ಥ ಪೂರ್ಣ ಸಂಪರ್ಕ ಮತ್ತು ಸೌಹಾರ್ದತೆ ಬೆಳಸುವ ಉದ್ದೇಶವನ್ನು ಹೊಂದಿದೆ. ನಿಸ್ವಾರ್ಥ ಸ್ನೇಹವೆಂದರೆ 'ನಾನೂ ನೀನೂ ದೋಸ್ತಿ, ಸ್ನೇಹವೇ ನಮ್ಮ ಆಸ್ತಿ' ಎಂಬಂತಿದ್ದಾಗ ಮಾತ್ರ ಸ್ನೇಹಿತರ ನಡುವೆ ಯಾವುದೇ ರೀತಿಯ ಭಿನಾಭಿಪ್ರಾಯ ಮೂಡಿದರೂ ಸಹ ಅದನ್ನು ಪರಿಹರಿಸಿಕೊಳ್ಳುವಷ್ಟರ ಮಟ್ಟಿಗೆ ಸ್ನೇಹದ ಕೊಂಡಿ ಬೆಸೆದುಕೊಳ್ಳುತ್ತದೆ.



ಸ್ನೇಹ ಇದೊಂದು ಸುಮಧುರ ಬಾಂಧವ್ಯ. ನಮಗೆ ಯಾವುದೇ ಸಮಸ್ಯೆಯಿದ್ದರೂ ಅದಕ್ಕೊಂದು ಪರಿಹಾರ ನಮ್ಮ ಗೆಳೆಯರ ಬಳಿ ಇರುತ್ತದೆ ಎಂಬ ಬಲವಾದ ನಂಭಿಕೆ. ಸುಖ, ದುಃಖ, ಸಂತೋಷ, ನೋವುಗಳಲ್ಲಿ ನಮ್ಮ ಕುಟುಂಬದವರಂತೆ ನಮ್ಮೊಂದಿಗೆ ಇರುವುದು ನಮ್ಮ ಸ್ನೇಹಿತರು. ಸ್ನೇಹ ಎಂಬ ಒಳ್ಳೆಯ ಬಾಂಧವ್ಯದ ಮಹತ್ವವನ್ನು ಸಾರಲು ಪ್ರತಿ ವರ್ಷ ಆಗಸ್ಟ್ ಮೊದಲ ವಾರದಲ್ಲಿ ಅಂತರರಾಷ್ಟ್ರೀಯ ಸ್ನೇಹಿತರ ದಿನವನ್ನು ಆಚರಣೆ ಮಾಡಲಾಗುತ್ತದೆ.

ಸ್ನೇಹ ಎಂಬ ಬಾಂಧವ್ಯ ಶುದ್ಧ ಸ್ವರೂಪದ್ದಾಗಿದ್ದು ರಕ್ತ ಸಂಬಂಧವಲ್ಲವಾದರೂ ಪ್ರೀತಿಯಿಂದ ಕೂಡಿದೆ. ಯಾವುದೇ ಜಾತಿ, ಬಣ್ಣ, ಜನಾಂಗ, ಸಂಸ್ಕೃತಿಯ ಭೇದವಿಲ್ಲದೇ ಸ್ನೇಹದ ಬಲವಾದ ಬಂಧ ಮತ್ತು ಪ್ರೀತಿಯ ಪ್ರಾಮುಖ್ಯತೆಯನ್ನು ಸಾರಲು ಈ ದಿನವನ್ನು ಆಚರಣೆ ಮಾಡಲಾಗುತ್ತದೆ.

ಸ್ನೇಹಿತರು ಪರಸ್ಪರರ ಕೈ ಮೇಲೆ ಫ್ರೆಂಡ್ ಶಿಪ್ ಬ್ಯಾಂಡ್ ಕಟ್ಟಿ, ನಾವಿಬ್ಬರು ಬೆಸ್ಟ್ ಫ್ರೆಂಡ್ಸ್ ಫಾರೆವರ್ ಎಂದು ಭರವಸೆ ನೀಡಿ, ಹರ್ಷಿಸುತ್ತಾರೆ.

ಅಂತರರಾಷ್ಟ್ರೀಯ ಸ್ನೇಹಿತರ ದಿನವನ್ನು ಮೊದಲು 1958ರಲ್ಲಿ ಪರಾಗ್ವೆಯಲ್ಲಿ ಜುಲೈ 30 ರಂದು ಆಚರಿಸಲಾಯಿತು. 1930 ರ ದಶಕದಲ್ಲಿ ರಾಷ್ಟ್ರೀಯ ಸ್ನೇಹ ದಿನವು ಹಾಲ್ಮಾರ್ಕ್ ಕಾರ್ಡ್‌ಗಳ ಮಾರ್ಕೆಟಿಂಗ್ ತಂತ್ರವಾಗಿ ಹೊರಹೊಮ್ಮಿತು. ಇದರ ಸಂಸ್ಥಾಪಕ ಜಾಯ್ಸ್ ಹಾಲ್. ನಿಮಗೆ ಹೆಚ್ಚು ಹತ್ತಿರವಿರುವ ಜನರಿಗೆ ಪ್ರಾಮುಖ್ಯತೆ ಕೊಟ್ಟು, ನೀವು ಅವರ ಬಗ್ಗೆ ಯೋಚಿಸುತ್ತಿದ್ದೀರಿ ಎಂದು ತಿಳಿಸಲು ಅವರಿಗೆ ಕಾರ್ಡ್ ಕಳುಹಿಸಿ ಎಂಬ ಮಾರ್ಕೆಟಿಂಗ್ ತಂತ್ರಕ್ಕೆ, ಅಧಿಕೃತ ರಜಾ ದಿನವನ್ನು 1935 ರಲ್ಲಿ ಯುಎಸ್ ಕಾಂಗ್ರೆಸ್ ಘೋಷಿಸುವಲ್ಲಿ ಯಶಸ್ವಿಯಾಯಿತು. ನಂತರ ಡಾ. ರಾಮನ್ ಆರ್ಟೆಮಿಯೊ ಬ್ರಾಚೊ ಅವರು ಜುಲೈ 20, 1958 ರಂದು ವಿಶ್ವ ಸ್ನೇಹಿತರ ದಿನವನ್ನು ಆಚರಿಸಲು ಆರಂಭಿಸಿದರು. ನಂತರ 2011ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಜುಲೈ 30ರಂದು ಅಂತರರಾಷ್ಟ್ರೀಯ ಸ್ನೇಹ ದಿನ ಎಂದು ಆಚರಿಸಲು ಘೋಷಣೆ ಮಾಡಲಾಯಿತು. ಆದರೆ ವಿಶ್ವಸಂಸ್ಥೆಯ ಘೋಷಣೆಯ ನಂತರ ಸಹ ಕೆಲ ದೇಶಗಳಲ್ಲಿ ಬೇರೆ ಬೇರೆ ತಿಂಗಳು, ಬೇರೆ ಬೇರೆ ದಿನಗಳಲ್ಲಿ ಆಚರಣೆ ಮಾಡಲಾಗುತ್ತದೆ.

ಭಾರತ, ಬಾಂಗ್ಲಾದೇಶ, ಮಲೇಷ್ಯಾ, ಯುಎಇ, ಯುಎಸ್‌ನಲ್ಲಿ ಮಾತ್ರ ಆಗಸ್ಟ್ ಮೊದಲ ಭಾನುವಾರ ಅಂತರಾಷ್ಟ್ರೀಯ ಸ್ನೇಹ ದಿನವನ್ನು ಆಚರಣೆ ಮಾಡಲಾಗುತ್ತದೆ. ನೇಪಾಳದಲ್ಲಿ ಜುಲೈ 30ರಂದು, ಬರ್ಲಿನ್, ಓರ್ಬಲಿಯೊ, ಓಹೊಯೋದಲ್ಲಿ ಏಪ್ರಿಲ್ 9 ರಂದು ಆಚರಿಸಲಾಗುತ್ತದೆ. ಅರ್ಜೆಂಟೀನಾ, ಮೆಕ್ಸಿಕೋದಲ್ಲಿ ಜುಲೈ 14 ರಂದು ಆಚರಣೆ ಮಾಡಿದರೆ, ಬ್ರೆಜಿಲ್‌ನಲ್ಲಿ ಜುಲೈ 20ರಂದು ಅಂತರಾಷ್ಟ್ರೀಯ ಸ್ನೇಹ ದಿನವನ್ನು ಆಚರಣೆ ಮಾಡಲಾಗುತ್ತದೆ.

ಏಷ್ಯಾ, ಅರ್ಜೆಂಟೀನಾ, ಪೆರುಗ್ವೇ, ಪೆರು, ಭಾರತ, ಫಿನ್‌ಲ್ಯಾಂಡ್, ಎಸ್ಟೋನಿಯಾ, ಬ್ರೆಜಿಲ್, ಯುಎಇ, ಯುಎಸ್ ಸೇರಿದಂತೆ ಹಲವಾರು ದೇಶಗಳಲ್ಲಿ ಅಂತರರಾಷ್ಟ್ರೀಯ ಸ್ನೇಹ ದಿನವನ್ನು ಸ್ನೇಹಿತರಿಗೆ ಶುಭಾಶಯ ಪತ್ರಗಳು, ಉಡುಗೊರೆಗಳ ವಿನಿಮಯ, ಸ್ನೇಹಿತರ ಕೈಗೆ ಫ್ರೆಂಡ್‌ಶಿಪ್ ಬ್ಯಾಂಡ್ ಕಟ್ಟುವುದು, ಅತ್ಯಮುಲ್ಯವಾದ ಸಮಯವನ್ನು ಅವರಿಗಾಗಿ ಮೀಸಲಿಡುವ ಮೂಲಕ ಆಚರಿಸಲಾಗುತ್ತದೆ.

1943 ರ ಸೈಕಲಾಜಿಕಲ್ ರಿವ್ಯೂನಲ್ಲಿ ಬರೆದ "ಎ ಥಿಯರಿ ಆಫ್ ಹ್ಯೂಮನ್ ಮೋಟಿವೇಷನ್" ನಲ್ಲಿ ಅಬ್ರಹಾಂ ಮಾಸ್ಲೊ ಪ್ರಸ್ತಾಪಿಸಿದ್ದು ಮಾನವನಿಗೆ ಅಗತ್ಯವಾಗಿ ಸೇರಬೇಕಾದುದ್ದು ಪ್ರೀತಿ. ಮಾನವನ ನಡವಳಿಕೆ ಮತ್ತು ಪ್ರೇರಣೆಯನ್ನು ಅರ್ಥಮಾಡಿಕೊಳ್ಳಲು ಪಿರಮಿಡ್ ರೇಖಾಚಿತ್ರದ ಮೂಲಕ ಅವರು ಶಾರೀರಿಕ, ಸುರಕ್ಷತೆ, ಪ್ರೀತಿ, ಸಾಮಾಜಿಕ ಅಗತ್ಯಗಳು ಮತ್ತು ಸ್ವಯಂ ವಾಸ್ತವೀಕರಣ ಮುಂತಾದ ಪದಗಳನ್ನು ಬಳಸಿದರು. ಮಾಸ್ಲೊ ಸಿದ್ಧಾಂತಗಳ ಪ್ರಕಾರ, ಮಾನವನ ಅಗತ್ಯಗಳಿಗೆ ಸಾಮಾಜಿಕ ಮತ್ತು ಪರಸ್ಪರ ಸಂಬಂಧಗಳು ಅವಶ್ಯ. ಮಾನವರು ಚೈತನ್ಯದಿಂದ ಉಳಿಯಲು ಮತ್ತು ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಎಲ್ಲರನ್ನೂ ಪ್ರೀತಿಸಬೇಕು. ಈ ಅಂಶದ ಅನುಪಸ್ಥಿತಿಯು ಮೂಲಭೂತ ಕಾರ್ಯಚಟುವಟಿಕೆಗಳಿಗೆ ಅಡ್ಡಿಯಾಗಬಹುದು. ಇದರಿಂದ ಜನರು ಒಂಟಿತನ, ಆತಂಕ ಮತ್ತು ಖಿನ್ನತೆಗೆ ಒಳಗಾಗುತ್ತಾರೆ. ಆದರೆ ಇದಕ್ಕೆಲ್ಲದಕ್ಕೂ ಪರಿಹಾರವಾಗಿ ಸ್ನೇಹ ಎಂಬುದೊಂದಿದ್ದರೆ ಎಲ್ಲವೂ ಉಪ್ಪು ನೀರಿನಲ್ಲಿ ಕರಗುವಂತೆ ಕರಗಿಹೋಗುತ್ತದೆ.

ಅಂತರರಾಷ್ಟ್ರೀಯ ಸ್ನೇಹಿತರ ದಿನದ ಆಚರಣೆಯಿಂದ ವಿಶ್ವದ ಎಲ್ಲ ದೇಶಗಳ ನಡುವೆ ಉತ್ತಮ ಬಾಂಧವ್ಯ ವೃದ್ಧಿಯಾಗಿ ವಿಶ್ವ ಶಾಂತಿಗೆ ಸ್ಫೂರ್ತಿಯಾಗುತ್ತದೆ ಎನ್ನುವ ಉದ್ದೇಶದಿಂದ ಪ್ರತಿ ವರ್ಷ ಅಂತರರಾಷ್ಟ್ರೀಯ ಸ್ನೇಹ ದಿನವನ್ನು ಆಚರಣೆ ಮಾಡಲಾಗುತ್ತದೆ.

ಸ್ನೇಹ ಇದೊಂದು ಕೇಳಲು ಹಿತವಾದ ಶಬ್ಧ ಎಂದು ಎಲ್ಲರಿಗೂ ಅನ್ನಿಸುತ್ತದೆ. ಸ್ನೇಹಕ್ಕೆ ಅದರದ್ದೇ ಆದ ಮಹತ್ವ ಇದೆ. ಕೆಲವೊಮ್ಮೆ ಇಬ್ಬರ ನಡುವೆ ಆತ್ಮೀಯತೆ ಬೆಳೆಯಬಹುದು. ಇನ್ನೂ ಕೆಲವು ಬಾರಿ ನಾಲ್ಕು, ಐದು ಜನ ಆತ್ಮೀಯ ಸ್ನೇಹಿತರು ಆಗಿರುತ್ತಾರೆ.

ಸ್ನೇಹಿತನ ಮೇಲೆ ನಂಬಿಕೆ, ವಿಶ್ವಾಸವಿದ್ದರೆ ಆ ಸ್ನೇಹ ಕೊನೆ ತನಕ ಗಟ್ಟಿಯಾಗಿ ಉಳಿಯುತ್ತದೆ. 7 ವರ್ಷಕ್ಕೂ ಮೇಲೂ ಸ್ನೇಹ ಉಳಿದಿದ್ದರೆ, ಅದು ಸಾಯೋವರೆಗೂ ಇರುತ್ತೆ ಅನ್ನೋ ನಂಬಿಕೆ. ಸ್ನೇಹಿತರು ಎಷ್ಟೊಂದು ಆತ್ಮೀಯರಾಗಿರುತ್ತಾರೆ ಎಂದರೆ, ಮನೆಯವರ ಬಳಿ ಹೇಳಿಕೊಳ್ಳಲಾಗದ ಎಷ್ಟೋ ವಿಷಯಗಳನ್ನು ಅವರ ಬಳಿ ಹೇಳುತ್ತೇವೆ. ನಮಗೆ ಕಷ್ಟ-ಸುಖ ಎಂದರೆ ಮೊದಲು ನೆನಪಾಗುವುದೇ ಸ್ನೇಹಿತರು. ನಮ್ಮ ಬದುಕಿನಲ್ಲಿ ಏನೇ ನಡೆದರೂ ಅವರಿಗೆ ಮೊದಲು ತಿಳಿಸಬೇಕು ಅಂದುಕೊಳ್ಳುತ್ತೇವೆ.

ಸ್ನೇಹವು ಮನುಷ್ಯರ ನಡುವಿನ ಅತ್ಯಂತ ಸುಂದರವಾದ ಸಂಬಂಧಗಳಲ್ಲಿ ಒಂದಾಗಿದೆ. ಸ್ನೇಹಿತ ಎಂದರೆ ಕಷ್ಟದ ಸಮಯದಲ್ಲಿ ಯಾವಾಗಲೂ ಇರುವ ವ್ಯಕ್ತಿ. ನಿಮ್ಮನ್ನು ಬೆಂಬಲಿಸುವ ಮತ್ತು ಮಾರ್ಗದರ್ಶನ ಮಾಡುವ ಸಹಚರರು. ನಾವು ವರ್ಷವಿಡೀ ನಮ್ಮ ಸ್ನೇಹಿತರೊಂದಿಗೆ ಕ್ಷಣಗಳನ್ನು ಆನಂದಿಸುತ್ತಿರುವಾಗ, ನಮ್ಮ ಸ್ನೇಹಿತರಿಗೆ ಧನ್ಯವಾದ ಸಲ್ಲಿಸಲು ಮತ್ತು ನಮ್ಮ ಜೀವನದಲ್ಲಿ ಅವರ ಕೊಡುಗೆಯನ್ನು ಆಚರಿಸಲು ಅಂತರರಾಷ್ಟ್ರೀಯ ಸ್ನೇಹ ದಿನವು ಉತ್ತಮ ಮಾರ್ಗವಾಗಿದೆ.

ಭಾರತ ಸೇರಿದಂತೆ ಕೆಲವು ದೇಶಗಳು ಪ್ರತಿ ಆಗಸ್ಟ್‌ನ ಮೊದಲ ಭಾನುವಾರದಂದು ಸ್ನೇಹಿತರ ದಿನವನ್ನು ಆಚರಿಸಲಾಗುತ್ತದೆ. ಈ ಬಾರಿ ಆಗಸ್ಟ್ 6, 2023 ರಂದು ಫ್ರೆಂಡ್‌ಶಿಪ್ ಡೇ ಆಚರಿಸಲಾಗುತ್ತದೆ. ಈ ದಿನ ಜೊತೆಗಿರುವ ಸ್ನೇಹಿತರು, ಹಳೆಯ ಸ್ನೇಹಿತರು ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಇನ್ನೂ ಕೆಲವರು ಜೊತೆಗೆ ಸೇರಿ ಸ್ನೇಹ ಸಂಭ್ರಮವನ್ನು ಆಚರಿಸುತ್ತಾರೆ. ತಮ್ಮ ಹಳೆಯ ನೆನಪುಗಳನ್ನು ಮೆಲುಕು ಹಾಕುತ್ತಾರೆ.

ಸ್ನೇಹಿತರಿಗೆ ಅವರ ಉಪಸ್ಥಿತಿಯು ನಮ್ಮ ಜೀವನದಲ್ಲಿ ಮುಖ್ಯವಾಗಿದೆ ಎಂದು ನಾವು ಘಂಟಾಘೋಷವಾಗಿ ಹೇಳಬಹುದು. ನಮ್ಮ ಅಗತ್ಯದ ಸಮಯದಲ್ಲಿ ನಮ್ಮ ಬೆನ್ನು ಹಿಂದೆ ನಿಂತು ಸಂತೈಸಿದ ಗೆಳೆಯರಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಲು ಇದೊಂದು ಮಹತ್ವದ ದಿನವೇ ಆಗಿದೆ.



ಹಳೆಯ ಸ್ನೇಹಿತರನ್ನು ತಲುಪಲು ಮತ್ತು ನೆನಪುಗಳನ್ನು ಮರುಸೃಷ್ಟಿಸಲು ಇದು ಒಂದು ಅವಕಾಶ. ಈ ದಿನದಂದು ನಮ್ಮ ಸ್ನೇಹಿತರಿಗೆ ಏನಾದರೂ ವಿಶೇಷವಾದದ್ದನ್ನು ಮಾಡುವ ಮೂಲಕ ನಾವು ಮುರಿದ ಅಥವಾ ಕಳೆದು ಹೋದ ಸ್ನೇಹವನ್ನು ಪುನರುಜ್ಜೀವನಗೊಳಿಸಬಹುದು

'ಸ್ನೇಹದ ಮೂಲಕ ಮಾನವ ಚೈತನ್ಯವನ್ನು ಹಂಚಿಕೊಳ್ಳಿ' ಎಂದು 2023ರ ಸ್ನೇಹಿತರ ದಿನದ ಥೀಮ್ ಆಗಿದೆ. ಇದು ವ್ಯಕ್ತಿಗಳ ನಡುವೆ ಅರ್ಥ ಪೂರ್ಣ ಸಂಪರ್ಕ ಮತ್ತು ಸೌಹಾರ್ದತೆ ಬೆಳಸುವ ಉದ್ದೇಶವನ್ನು ಹೊಂದಿದೆ. ನಿಸ್ವಾರ್ಥ ಸ್ನೇಹವೆಂದರೆ 'ನಾನೂ ನೀನೂ ದೋಸ್ತಿ, ಸ್ನೇಹವೇ ನಮ್ಮ ಆಸ್ತಿ' ಎಂಬಂತಿದ್ದಾಗ ಮಾತ್ರ ಸ್ನೇಹಿತರ ನಡುವೆ ಯಾವುದೇ ರೀತಿಯ ಭಿನಾಭಿಪ್ರಾಯ ಮೂಡಿದರೂ ಸಹ ಅದನ್ನು ಪರಿಹರಿಸಿಕೊಳ್ಳುವಷ್ಟರ ಮಟ್ಟಿಗೆ ಸ್ನೇಹದ ಕೊಂಡಿ ಬೆಸೆದುಕೊಳ್ಳುತ್ತದೆ.

ಈ ದಿನದಂದು ಸ್ನೇಹಿತರೊಂದಿಗೆ ಕಾಲ ಕಳೆಯುವುದು, ಟ್ರಿಪ್ ಆಯೋಜಿಸುವುದು, ಉಡುಗೊರೆಗಳನ್ನು ನೀಡುವುದು, ಸಂದೇಶ ಕಳುಹಿಸುವುದು, ಸ್ನೇಹಕ್ಕೆ ಸಂಬಂಧಿಸಿದ ಹಾಡುಗಳನ್ನು ಅರ್ಪಿಸುವುದರ ಮೂಲಕ ಸ್ನೇಹಿತರ ದಿನವನ್ನು ಮತ್ತಷ್ಟು ಉತ್ತುಂಗಕ್ಕೆ ಕೊಂಡೊಯ್ಯಬಹುದು.


ಸಾಮಾಜಿಕ ಜಾಲತಾಣದ ವಾಟ್ಸ್‌ಆಪ್, ಫೇಸ್ ಬುಕ್, ಇನ್‌ಸ್ಟಾಗ್ರಾಂಗಳಲ್ಲಿ ಸ್ಟೇಟಸ್ ಹಾಕಿಕೊಳ್ಳುವ ಮೂಲಕ ಪ್ರೀತಿ ಹಾಗೂ ಮೆಚ್ಚುಗೆಯನ್ನು ವ್ಯಕ್ತಪಡಿಸಬಹುದು. ಇದೆಲ್ಲಕ್ಕಿಂತ ಹೆಚ್ಚಾಗಿ ನೇರಾನೇರ ಭೇಟಿಯಾಗಿ ಒಬ್ಬರಿಗೊಬ್ಬರು ಹಿಂದಿನ ದಿನಗಳನ್ನು ಮೆಲುಕು ಹಾಕುತ್ತಾ ಸಂತಸದ ಕ್ಷಣಗಳನ್ನು ಮತ್ತೊಮ್ಮೆ ಕಣ್ಮುಂದೆ ತಂದುಕೊಳ್ಳುವುದರ ಮೂಲಕ ಸ್ನೇಹವನ್ನು ಮತ್ತಷ್ಟು ಗಟ್ಟಿಗೊಳಿಸಿಕೊಳ್ಳಬಹುದು. ತಪ್ಪು ಮಾಡಿದಾಗ ತಿದ್ದಿ-ತೀಡಿ ಅದಕ್ಕೊಂದು ಪ್ರೀತಿಯ ಬಲೆ ನೇಯ್ದು ನಾವು ಅತ್ತಾಗ ಅತ್ತು ನಾವು ನಕ್ಕಾಗ ನಕ್ಕು ನಮ್ಮ ಜೀವನದ ಕೊನೆಯುಸಿರಿನವರೆಗೂ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಅಚ್ಚೊತ್ತಿದ ಮಧುರವಾದ ಬಂಧವೇ ಈ ಸ್ನೇಹವೆಂಬ ಸಂಕೋಲೆ ಎಂದರೆ ತಪ್ಪಾಗಲಾರದು

ನಮ್ಮ ನಗುವಿನ ಹಿಂದಿನ ನೋವನ್ನು, ಮೌನದ ಹಿಂದಿನ ಮಾತನ್ನು, ಸಿಟ್ಟಿನ ಹಿಂದಿನ ಪ್ರೀತಿಯನ್ನು ಹಂಚಿಕೊಳ್ಳುವ ಸ್ನೇಹಿತರಿದ್ದರೆ ಜೀವನದಲ್ಲಿ ಬರುವ ಎಲ್ಲಾ ಕಷ್ಟಗಳೂ ಹೇಳ ಹೆಸರಿಲ್ಲದಂತೆ ಮಾಯವಾದಂತಹ ಅನುಭವವನ್ನು ಕೊಡುವುದೇ ನಿಜವಾದ ಸ್ನೇಹ ಎಂದೆನ್ನಬಹುದು.


ಮಕ್ಕಳ ಚಿತ್ರಕಥೆ

100 ರುಪಾಯಿ ಕೊಟ್ಟರೆ ಏನು ಕೊಳ್ಳುವೆ...?


-ಹೆಚ್.ಜಿ.ಎನ್.ಪ್ರಸಾದ್, ಮೊ:9845376199




ಒಂದು ಶಾಲೆಯಲ್ಲಿ ದಿನದ ಪಾಠ ನಡೆಯುತಿತ್ತು ಎಂದಿನಂತೆ. ಹೊರಗೆ ಜೋರಾಗಿ ಮಳೆ ಬರುತ್ತಿತ್ತು. 4ನೇ ತರಗತಿಯಲ್ಲಿ ಪಾಠದ ಮದ್ಯ ಶಿಕ್ಷಕರೊಬ್ಬರು ತಮಾಷೆಗೆ ಮಕ್ಕಳನ್ನು ಕೇಳಿದರು. ನಿಮ್ಮೆಲ್ಲರಿಗೂ ನಾನು 100,100 ರೂಪಾಯಿಕೊಟ್ಟರೆ ನೀವೆಲ್ಲರೂ ಏನು ಖರೀದಿಸುತ್ತೀರಿ..?




ಒಬ್ಬ ವಿದ್ಯಾರ್ಥಿ ಹೇಳಿದ, "ನಾನು ವಿಡಿಯೋ ಗೇಮ್ ಖರೀದಿಸುತ್ತೇನೆ". ಇನ್ನೊಬ್ಬ ಹೇಳಿದ,"ನಾನು ಕ್ರಿಕೆಟ್ ಬಾಲ್ ಖರೀದಿಸುತ್ತೇನೆ". ಆದರೆ ಒಂದು ಮಗು ಆಲೋಚನೆಯಲ್ಲಿ ಮುಳುಗಿತ್ತು. ಅದನ್ನು ಗಮನಿಸಿದ ಶಿಕ್ಷಕರು, ನೀನು ಏನು ಯೋಚಿಸುತ್ತಿದ್ದೀಯಾ ಮರಿ. ನೀನು ಏನು ಖರೀದಿಸುತ್ತೀಯಾ...?" ಎಂದು ಕೇಳಿದರು.




ಆ ಮಗು ಹೇಳಿತು, "ನಾನು ಕನ್ನಡಕ ಖರೀದಿಸುವೆ". ಅದಕ್ಕೆ ಶಿಕ್ಷಕ, "ಕನ್ನಡಕನಾ.. ಅದು ಏಕೆ ನಿನಗೆ ..?" ಆ ಹುಡುಗ ಹೇಳಿದ "ಸಾರ್, ನನ್ನ ತಾಯಿಗೆ ಸ್ವಲ್ಪ ದೃಷ್ಟಿ ಮಂಜು. ಸರಿಯಾಗಿ ಕಣ್ಣು ಕಾಣುವುದಿಲ್ಲ. ಆದ್ದರಿಂದ ನಾನು ನನ್ನ ತಾಯಿಗೆ ಕನ್ನಡಕವನ್ನು ಖರೀದಿಸುತ್ತೇನೆ..!".



ಶಿಕ್ಷಕರು ಕೇಳಿದರು, ನಿನ್ನ ತಂದೆ ನಿನ್ನ ತಾಯಿಗೆ ಕನ್ನಡಕ ತಂದುಕೊಡಬಹುದು. ನಿನಗಾಗಿ ಏನೂ ಬೇಕಿಲ್ಲವೇ ಈ 100 ರೂಪಾಯಿಯಲ್ಲಿ..? ಎಂದು ಪ್ರಶ್ನಿಸಿದರು. ಮಗು ನೀಡಿದ ಉತ್ತರದಿಂದ ಶಿಕ್ಷಕರ ಕಣ್ಣು ತುಂಬಿಬಂತು. ಮಗು ಹೇಳಿತು,"ನನ್ನ ತಂದೆ ಈಗ ಈ ಜಗತ್ತಿನಲ್ಲಿಲ್ಲ. ನನ್ನ ತಾಯಿಯೇ ನನಗೆ ಎಲ್ಲಾ. ನನ್ನ ತಾಯಿ ಊರ ಜನರ ಬಟ್ಟೆ ಹೊಲಿದು, ಬರುವ ಸಂಪಾದನೆಯಿಂದ ನನಗೆ ಊಟ, ಬಟ್ಟೆ, ಶಾಲೆಗೆ ಹೋಗಲು ಪುಸ್ತಕ, ಪೆನ್ನು ಕೊಡಿಸುತ್ತಾಳೆ.



"ಕೆಲವು ತಿಂಗಳುಗಳಿಂದ ದೃಷ್ಟಿ ಹೀನತೆಯಿಂದ ಬಟ್ಟೆಯನ್ನು ಹೊಲಿಯಲು ಪರದಾಡುತ್ತಾಳೆ. ಅದಕ್ಕಾಗಿಯೇ ನಾನು ನನ್ನ ತಾಯಿಗೆ ಕನ್ನಡಕವನ್ನು ನೀಡುತ್ತೇನೆ. ಏಕೆಂದರೆ ನಾನು ಕೊಡಿಸುವ ಕನ್ನಡಕದಿಂದ ನನ್ನ ತಾಯಿ, ನನ್ನನ್ನು ಚೆನ್ನಾಗಿ ಓದಿಸುತ್ತಾಳೆ ಎನ್ನುವ ನಂಬಿಕೆಯಿಂದ ಮತ್ತು ನನ್ನ ತಾಯಿಯ ಸಹಾಯದಿಂದ ನಾನು ಭವಿಷ್ಯದಲ್ಲಿ ದೊಡ್ಡ ವ್ಯಕ್ತಿ ಆದರೂ ಆಗಬಹುದು...!" ಎಂದ.



ಆಗ ಶಿಕ್ಷಕ, "ಶಭಾಷ್ ಪುಟ್ಟ, ನಿನ್ನ ಆಲೋಚನೆಯೇ ನಿನ್ನ ಸಂಪಾದನೆ. ತಗೋ ಈ 100ರೂಪಾಯಿ. ನೀನು ಕೊಟ್ಟ ಭರವಸೆಯ ಮಾತಿನಂತೆ ನಾನು ಇನ್ನೂ 200 ರೂಗಳನ್ನು ಸಾಲವಾಗಿ ನೀಡುತ್ತಿದ್ದೇನೆ. ನೀನು ದೊಡ್ಡ ವ್ಯಕ್ತಿಯಾಗಿ ಹಣಗಳಿಸಿದಾಗ, ಈ 200ನ್ನು ಹಿಂತಿರುಗಿಸು. ನೀನು ಅಂತಹ ದೊಡ್ಡ ವ್ಯಕ್ತಿಯಾಗಬೇಕೆಂದು ಬಯಸುತ್ತೇನೆ" ಎನ್ನುತ್ತಾ ಆ ವಿದ್ಯಾರ್ಥಿಯ ತಲೆಯ ಮೇಲೆ ಕೈ ಇಟ್ಟು ಆಶೀರ್ವದಿಸುತ್ತಾ 300ರೂ ಕೊಟ್ಟರು.

ಕಾಲ ಬದಲಾಗಲು ಹೆಚ್ಚು ಸಮಯ ತೆಗೆದುಕೊಳ್ಳುವುದಿಲ್ಲ.ಚಕ್ರವರ್ತಿಯ ಮಗ ನಿರ್ಗತಿಕನಾಗುತ್ತಾನೆ ಮತ್ತು ಬಡವನ ಮಗ ಚಕ್ರವರ್ತಿಯಾಗುತ್ತಾನೆ. ಒಳ್ಳೆಯ ಗುರು, ಒಳ್ಳೆಯ ಗುರಿ ಇರಬೇಕಷ್ಟೇ...!



ವಾರಭವಿಷ್ಯ

6.8.2023 ರಿಂದ 12.8.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಕಟಕ, ಚಂದ್ರ-ಮೀನ, ಮೇಷ, ವೃಷಭ, ಮಿಥುನ, ಕುಜ-ಸಿಂಹ, ಬುಧ-ಸಿಂಹ, ಗುರು, ಮೇಷ, ಶುಕ್ರ-ಕಟಕ, ಶನಿ-ಕುಂಭ, ರಾಹು-ಮೇಷ ಮತ್ತು ಕೇತು-ತುಲಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಗುರು ಶುಭನಿಲ್ಲ, ಸಜ್ಜನರ ವಿರೋಧ ಎದುರಿಸಬೇಕಾಗುತ್ತದೆ. ಹಾಗೂ ಶತೃತ್ವ ಉಂಟಾಗುತ್ತದೆ. ವ್ಯಾಜ್ಯಗಳಿಂದ ಬವಣೆ ಪಡುವಿರಿ. ವಾರ ಮಧ್ಯೆ ನಿಮ್ಮ ರಾಶಿಗೆ ಚಂದ್ರಗ್ರಹ ಪ್ರವೇಶದಿಂದ ಮಾನಸಿಕ ಖಿನ್ನತೆಗಳು ದೂರವಾಗಿ ಹರುಷದ ವಾತಾವರಣ. ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆ ಕಂಡು ಬರುತ್ತದೆ. ಕೃಷಿಕರಿಗೆ ವಾಣಿಜ್ಯ ಬೆಳೆಗಳು ಕೈ ಹಿಡಿಯುವುದು. ಪರ ಧನ, ಪರಸ್ತ್ರೀ ಲಭಿಸುವುದು.

ಶ್ರೀ ಗಣಪತಿ ಆರಾಧನೆ. ಶುಭ ಸಂಖ್ಯೆ-3.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನೂತನ ಗೃಹ ನಿರ್ಮಾಣಕ್ಕೆ ಸಾಲದ ಪ್ರಯತ್ನಗಳು ಮುಂದುವರೆಯುವುದು. ಈ ವಾರ ತುಂಬಾ ಅನಿವಾರ್ಯವಲ್ಲದ ಕೆಲಸಗಳನ್ನು ಹಮ್ಮಿಕೊಳ್ಳಬೇಡಿ. ವ್ಯಯ ಗುರುವಿನ ಕಾರಣ ಒಂದು ಮಾರ್ಗದಿಂದ ಖರ್ಚು-ವೆಚ್ಚಗಳು ಜಾಸ್ತಿಯಾದರೂ ಇನ್ನೊಂದು ಮೂಲದಿಂದ ಹಣ ಸಂಗ್ರಹವಾಗುವುದು. ವಿದ್ಯಾಭ್ಯಾಸದಲ್ಲಿ ಮನಸ್ಸು ನಿಲ್ಲದೆ ವಿದ್ಯಾರ್ಥಿಗಳು ಹಿಂದೆ ಬೀಳುವರು.

ಶ್ರೀ ಚಾಮುಂಡೇಶ್ವರಿ ದರ್ಶನ. ಶುಭ ಸಂಖ್ಯೆ-2.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ವಾರದ ಆರಂಭಕ್ಕೆ ಅಧಿಕಾರಿಗಳ ಅನುಗ್ರಹ. ಲೇವಾದೇವಿ ಸಂಸ್ಥೆಗಳಿಗೆ ಆದಾಯದಲ್ಲಿ ಹೆಚ್ಚಳ. ವಿವಾಹ ಯೋಗ್ಯರಿಗೆ ಸದ್ವಾರ್ತೆ ಬರುವುದು. ವಾಹನ ಹೊಂದುವ ಆಶಯ ಪೂರ್ಣಗೊಳ್ಳುವುದು. ಮಹಿಳಾ ಮಣಿಯರು ತಮ್ಮ ಇಚ್ಛೆಯ ವಸ್ತು, ವಸ್ತ್ರಗಳನ್ನು ಕೊಳ್ಳುವರು. ಆಭರಣ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರ ಹಾಗೂ ಧಾರಾಳ ಲಾಭವಾಗುವುದು. ವ್ಯಯಸ್ಥರಾಹು ದುಡುಕಿನ ಬುದ್ಧಿಗೆ ಕಾರಣಕರ್ತನಾಗುತ್ತಾನೆ.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ-8.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ನಿಮ್ಮ ರಾಶ್ಯಾಧಿಪತಿ ಚಂದ್ರನ ಶುಭ ಗೋಚರದ ಫಲವಾಗಿ ಲವಲವಿಕೆಯಿಂದ ಎಲ್ಲಾ ಕಾರ್ಯಗಳಲ್ಲಿ ಉತ್ಸಾಹವನ್ನು ತೋರುವಿರಿ. ವಿದ್ಯಾಭ್ಯಾಸದಲ್ಲಿ ಹೆಚ್ಚಿನ ಶ್ರದ್ಧೆ ವಹಿಸಿದಲ್ಲಿ ಉತ್ತಮ ಶ್ರೇಣಿ ನಿಮ್ಮದಾಗಲಿದೆ. ವೈಯಕ್ತಿಕ ಕಾರ್ಯ ನಿಮಿತ್ತ ಪ್ರಯಾಣಗಳು ಉಂಟಾಗಬಹುದು. ಪ್ರಯಾಣದ ಪೂರ್ವ ತಯಾರಿ ಚೆನ್ನಾಗಿರಲಿ. ಕಾನೂನು ವಿಷಯದಲ್ಲಿ ತೊಡಕುಗಳು ಸಂಭವಿಸುವುದು.

ಶ್ರೀ ಸಪ್ತಮಾತೃಕಾದೇವಿ ದರ್ಶನ. ಶುಭ ಸಂಖ್ಯೆ-9.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಬೃಹಸ್ಪತಿಯ ಪರಿಪೂರ್ಣ ಕೃಪೆ ನಿಮ್ಮ ಮೇಲಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ನಿಮ್ಮ ಸೋಮಾರಿತನ ಅಡ್ಡ ಬರುತ್ತಲಿದೆ. 'ಮನಸ್ಸಿದ್ದರೆ ಮಾರ್ಗ' ಹಾಗೂ ಅನುಭವಿಗಳಿಂದ ಮಾರ್ಗದರ್ಶನ ಪಡೆದಲ್ಲಿ ಕಷ್ಟ, ತೊಡರುಗಳು ನೀಗಿ ನಿಮ್ಮ ಹೊಸ ಯೋಜನೆಗಳು ಸಾಕಾರಗೊಳ್ಳುವುವು. ಗುರು-ಚಂಡಾಳ ಪ್ರಭಾವವಿರುವುದರಿಂದ ದುಷ್ಟ ಜನರ ಸಹವಾಸದಿಂದ ದೂರವಿರಿ, ಅನ್ಯಥಾ ಠಾಣೆ ದರ್ಶನ ಅನಿವಾರ್ಯವೆನಿಸುವುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ-1.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

'ಎಣ್ಣೆ ಬಂದಾಗ ಕಣ್ಣು ಮುಚ್ಚಿ ಕೂರಬೇಡಿ' ಎಂಬ ಗಾದೆ ಮಾತಿನಂತೆ, ಭೂ ವ್ಯವಹಾರಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಕೆಲಸಗಳು ನಿಮ್ಮ ಪರ ಆಗುವ ಸಾಧ್ಯತೆ ಗಾಢವಾಗಿದೆ. ಸಾಲ ತೀರಿಸುವ ನಿಟ್ಟಿನಲ್ಲಿ ಆರ್ಥಿಕ ಅಭಿವೃದ್ಧಿಯ ಪ್ರಯತ್ನಗಳು ಫಲಿಸಲಿದೆ. ಕುಟುಂಬ ಸದಸ್ಯರಲ್ಲಿ ಸಾಮರಸ್ಯದ ಕೊರತೆ ಆಗದಂತೆ ಸಂಬಂಧಗಳು ಇರಲಿ. ಸರ್ಕಾರಿ ನೌಕರರು ಕಾನೂನು ಬಾಹಿರ ಆದಾಯಕ್ಕೆ ಕೈ ಹಾಕಬಾರದು.

ಶ್ರೀ ರಾಮನಾಮ ಜಪ. ಶುಭ ಸಂಖ್ಯೆ-5.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ನಿಮ್ಮ ಬಹುದಿನದ ಬಯಕೆಯೊಂದು ಈ ವಾರ ಈಡೇರಲಿದೆ. ನಿಮ್ಮ ಉತ್ತಮ ಕೆಲಸ ಕಾರ್ಯಗಳಿಗೆ ಜನ ಮನ್ನಣೆಯನ್ನು ಪಡೆಯಲಿದ್ದೀರಿ. ಸರ್ಕಾರಿ ನೌಕರರು ಬಡ್ತಿಯೊಂದಿಗೆ ಸ್ಥಳ ಬದಲಾವಣೆಯನ್ನು ಕಾಣುವರು. ಸ್ತ್ರೀಯರು ಅಲಂಕಾರಿಕ ವಸ್ತುಗಳಿಗೆ ಹೆಚ್ಚಿನ ಹಣವನ್ನು ವ್ಯಯಿಸುವರು. ಪುಸ್ತಕ ಪ್ರಕಾಶಕರಿಗೆ ಉತ್ತಮ ಆದಾಯವಾಗುವುದು. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ಇರಲಿ.

ಶ್ರೀದೇವಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-8.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

'ಚಾಡಿ ಮಾತಿನಿಂದ ಚಾವಡಿ ಹಾಳಾಯಿತು' ಎಂಬಂತೆ ಇತರರ ಮಾತಿಗೆ ಬೆಲೆ ಕೊಡಬೇಡಿ. ವಾರದ ಆದಿಗೆ ಮನೆ ಖರ್ಚುಗಳು ಹೆಚ್ಚಾಗುವುದು. ಕೈ ಸಾಲ ಮಾಡಬೇಕಾದ ಪರಿಸ್ಥಿತಿ ಬರಬಹುದು. ವಾರ ಮಧ್ಯೆ ವೃತ್ತಿಯಲ್ಲಿ ಬದಲಾವಣೆ ಆಗುವ ಸಂಭವ ಇರುತ್ತದೆ. ನಿಮ್ಮ ಉತ್ತಮ ಕೆಲಸಗಳಿಗೆ ಜನ ಮನ್ನಣೆಯನ್ನು ಪಡೆಯಲಿದ್ದೀರಿ. ರಾತ್ರಿ ಪ್ರಯಾಣಗಳು ಖಂಡಿತ ಬೇಡಿ.

ಶ್ರೀ ಕುಜನ ಪ್ರೀತ್ಯರ್ಥ ತೊಗರಿಕಾಳು ದಾನ. ಶುಭ ಸಂಖ್ಯೆ-4

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ನಿಮ್ಮ ಜೀವನದಲ್ಲಿ ಕೆಲವೊಂದು ಪ್ರಮುಖ ಬದಲಾವಣೆಗಳು ಉಂಟಾಗುವುದು. ನಿಮ್ಮ ಮಹತ್ವದ ಕೆಲಸ ಕಾರ್ಯಗಳಿಗೆ ಆಪ್ತ ಬಂಧು-ಬಳಗದವರ ಸಲಹೆಗಳು ದೊರೆಯಲಿದೆ. ನೆರೆ ಹೊರೆಯಲ್ಲಿ ಸೌಹಾರ್ದತೆಯು ವೃದ್ಧಿಸುವುದು. ಯುವ ವಿದ್ಯಾರ್ಥಿಗಳಿಗೆ ಉನ್ನತ ಅಧ್ಯಯನದಿಂದ ಕೀರ್ತಿ. ಕೂಡಿಟ್ಟ ಧನ ಸದ್ವಿನಿಯೋಗ ಆಗುವುದು. ಆತುರದ ಮನೋವೃತ್ತಿಯಿಂದ ತಪ್ಪುಗಳು ನಡೆದು ಹೋಗುವುದು.

ಶ್ರೀ ಗುರುಸ್ತುತಿ. ಶುಭ ಸಂಖ್ಯೆ-7.

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಾಡೇಸಾತಿಯ ಪ್ರಭಾವವಿದ್ದರೂ ನಿಮ್ಮ ಪರಿಶ್ರಮದ ಫಲ ದೊರೆಯುವ ಸಮಯ ಬಂದಿದೆ. ನಿಮ್ಮ ಮನೋಭಿಲಾಷೆಗಳು ಸುಲಲಿತವಾಗಿ ನಡೆಯುವುದು. 'ಮಾತೆ ಮುತ್ತು, ಮಾತೇ ಮೃತ್ಯು', ದುಡುಕಿ ಮಾತನಾಡದಿರಿ, ಅನ್ಯಥಾ ನಿಮ್ಮ ಕೆಲಸ ಕೆಡುವುದು. ಫ್ಯಾಷನ್ ಡಿಸೈನ್, ಅಲಂಕಾರಿಕ ವಸ್ತು ಮಾರಾಟಗಾರರಿಗೆ ಉತ್ತಮ ಆದಾಯವಿದೆ. ಆದಾಯದ ಜೊತೆಗೆ ಖರ್ಚು ಎರಡೂ ಹೆಚ್ಚಿರುತ್ತದೆ. ಲೆಕ್ಕ ಪತ್ರಗಳನ್ನು ಸರಿಯಾಗಿ ಇಟ್ಟುಕೊಳ್ಳಿ.

ಶ್ರೀ ಶನಿಸ್ತೋತ್ರ ಪಠಿಸಿ. ಶುಭ ಸಂಖ್ಯೆ-5.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ದೀರ್ಘಕಾಲಿಕ ಯೋಜನೆಗಳನ್ನು ರೂಪಿಸಿಕೊಳ್ಳಲು ಇದು ಸಕಾಲ. ಇದು ನಿಮ್ಮ ಭವಿಷ್ಯದ ಭದ್ರತೆಗೆ ಅಗತ್ಯವಾಗಿದೆ. ಉದ್ಯೋಗ ಸಂಬಂಧಿ ಪ್ರಯಾಣಗಳು ಲಾಭದಾಯಕವಾಗಿ ಪರಿಣಮಿಸಲಿದೆ. ಆರಂಭಿಸಿದ ಕೆಲಸ ಕಾರ್ಯಗಳು ಗುರಿ ಮುಟ್ಟಲು ನಿಮ್ಮ ಹಿತೈಷಿಗಳ ಸಹಕಾರ ದೊರಕುವುದು. ಒಂದು ವೇಳೆ ಸಾಲ ಮಾಡಿದರೂ ಅದು ಸದ್ವಿನಿಯೋಗವಾಗಲಿ. ಗೃಹಲಕ್ಷ್ಮೀಗೆ ಬೇಸರವಾಗದಂತೆ ನಡೆದುಕೊಳ್ಳಿ.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-4.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಿವಿಧ ಸತ್ಕಾರ್ಯಗಳಲ್ಲಿ ತೊಡಗಿಸಿಕೊಂಡು ಎಲ್ಲರ ಮೆಚ್ಚುಗೆಗೆ ಪಾತ್ರರಾಗಲಿದ್ದೀರಿ. ವೈದ್ಯರಿಗೆ, ನ್ಯಾಯವಾದಿಗೆ ಉತ್ತಮ ಆದಾಯದ ವಾರ. ಕಾರ್ಮಿಕ ವರ್ಗದವರಿಗೆ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಗಾರ್ಮೆಂಟ್ಸ್ ಹಾಗೂ ಹತ್ತಿ ವ್ಯಾಪಾರ ಯಶಸ್ವಿಯಾಗಿ ನಡೆಯುವುದು. ನೂತನ ಆವಿಷ್ಕಾರಗಳಿಂದ ಕೀರ್ತಿ ಪ್ರಾಪ್ತಿ. ರಾಹು-ಕೇತುಗಳು ನಿಮ್ಮ ಆರೋಗ್ಯದ ಹದಗೆಡಿಸಬಹುದು.

ಶ್ರೀ ಸಾಯಿಬಾಬಾ ಆರಾಧನೆ. ಶುಭ ಸಂಖ್ಯೆ-3.

ಶಿಕ್ಷಣ ಕ್ಷೇತ್ರಕ್ಕೆ ಸವಲತ್ತು ಕೊಡಿಸಿ, ಶಿಕ್ಷಕರ ಸಮಸ್ಯೆ ನಿವಾರಿಸುವೆ

ಅಭಿನಂದನಾ ಸಮಾರಂಭದಲ್ಲಿ ಶಾಸಕ ಡಿ. ರವಿಶಂಕರ್ ಭರವಸೆ



ಕೆ.ಆರ್.ನಗರ, ಆ.5– ದೇಶದ ಭವಿಷ್ಯದ ಪ್ರಜೆಗಳನ್ನು ರೂಪಿಸುವ ಶಿಕ್ಷಕರು ತಮ್ಮ ವೃತ್ತಿಗೆ ಚ್ಯುತಿ ಬಾರದಂತೆ ಕರ್ತವ್ಯ ನಿರ್ವಹಿಸಬೇಕು, ನಿವೃತ್ತಿ ಆಗುವವರೆಗೂ ಬೇರೆಡೆಗೆ ಗಮನ ಕೊಡದೆ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು ಎಂದು ಶಾಸಕ ಡಿ.ರವಿಶಂಕರ್ ಕರೆ ನೀಡಿದ್ದಾರೆ.

ಪಟ್ಟಣದ ಗುರುಭವನದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ನಡೆದ ಅಭಿನಂದನಾ ಸಮಾರಂಭ ಮತ್ತು ನಿವೃತ್ತ ಶಿಕ್ಷಕರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಥಮಿಕ ಶಿಕ್ಷಣ ವಿದ್ಯಾರ್ಥಿಗಳಿಗೆ ಬಹಳ ಮುಖ್ಯ ಎಂಬುದನ್ನು ಶಿಕ್ಷಕರು ಅರಿತು ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕು ಎಂದರು.

ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕುಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಿಕ್ಷಕರ ಜತೆ ನಾನು ಒಬ್ಬ ಸ್ನೇಹಿತನಾಗಿ ಕೆಲಸ ಮಾಡಲು ಸಿದ್ಧನಿದ್ದು ಸರ್ಕಾರದಿಂದ ಶಿಕ್ಷಣ ಕ್ಷೇತ್ರಕ್ಕೆ ಬೇಕಾಗಿರುವ ಸವಲತ್ತು ಕೊಡಿಸುವುದರ ಜತೆಗೆ ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸಲು ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು.

ಶಿಕ್ಷಕರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆ ತಿಳಿದು ಗುಣಮಟ್ಟದ ಶಿಕ್ಷಣ ನೀಡುವುದರ ಜತೆಗೆ ಒಳ್ಳೆಯ ಸಂಸ್ಕಾರ ಕಲಿಸಿ, ಕ್ರೀಡಾ ಚಟುವಟಿಕೆಗಳಲ್ಲೂ ಮಕ್ಕಳು ಉತ್ತಮ ಸಾಧನೆ ಮಾಡಬೇಕು. ಈ ಬಗ್ಗೆ ದೈಹಿಕ ಶಿಕ್ಷಕರು ಗಮನಹರಿಸಬೇಕು ಎಂದು ಸಲಹೆ ನೀಡಿದರಲ್ಲದೆ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಗ್ರಾಮೀಣ ಮಕ್ಕಳು ಪಾಲ್ಗೊಳ್ಳುವುದರಿಂದ ಇದಕ್ಕೆ ಹೆಚ್ಚು ಒತ್ತು ನೀಡಬೇಕು ಎಂದು ಸೂಚಿಸಿದರು.

ಗುರುಭವನದ ದುರಸ್ತಿಗಾಗಿ ಅನುದಾನ ನೀಡಲಾಗುತ್ತದೆ ಎಂದು ತಿಳಿಸಿದ ಶಾಸಕರು, ಹಾಲಿ ಇರುವ 11 ಲಕ್ಷ ರೂ.ಗಳಲ್ಲಿ ಅಗತ್ಯವಿರುವ ಕಾಮಗಾರಿ ಮಾಡಿಸುವಂತೆ ಬಿಇಒ ಅವರಿಗೆ ಸೂಚಿಸಿದ ಶಾಸಕರು, ಪಟ್ಟಣದಲ್ಲಿ ಒಳಾಂಗಣ ಕ್ರೀಡಾಂಗಣ ನಿರ್ಮಾಣ ಮಾಡಲು ನಿರ್ಧರಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು ಕ್ರೀಡಾ ಸಚಿವ ನಾಗೇಂದ್ರರವರು ಅನುದಾನ ಮಂಜೂರು ಮಾಡುವುದಾಗಿ ಹೇಳಿದ್ದಾರೆ ಎಂದು ಮಾಹಿತಿ ನೀಡಿದರು.

ಬಿಇಒ ಆರ್.ಕೃಷ್ಣಪ್ಪ, ಬಿಆರ್‌ಸಿ ವೆಂಕಟೇಶ್, ಅಕ್ಷರ ದಾಸೋಹ ನಿರ್ದೇಶಕ ಪ್ರದೀಪ್‌ಕುಮಾರ್, ಸಂಘದ ಅಧ್ಯಕ್ಷ ಕೆ.ಎಸ್.ನಾಗರಾಜು, ಕಾರ್ಯದರ್ಶಿ ಪ್ರಸನ್ನಕುಮಾರ್, ಉಪಾಧ್ಯಕ್ಷ ರಾಜಶೇಖರ್, ಗೌರವಾಧ್ಯಕ್ಷ ಸಿದ್ದಯ್ಯ, ಪದಾಧಿಕಾರಿಗಳಾದ ಸಿ.ಎನ್.ಸ್ವಾಮಿ, ಮುತ್ತೇಶಾಚಾರ್, ಕೆ.ಪಿ.ಭಾರತಿ, ರಾಮಕೃಷ್ಣ ಮೋಹನ್‌ಕುಮಾರ್, ತುಳಸಿರಾಮನಾಯಕ, ಡಿ.ಎಸ್. ಗೋವಿಂದ್, ಎಂ.ಪಿ.ಕುಮಾರಸ್ವಾಮಿ, ಸುರೇಶ್, ಕೃಷ್ಣನಾಯಕ ಸೈಯದ್‌ರಿಜ್ವಾನ್, ಶಿಕ್ಷಣ ಸಂಯೋಜಕರಾದ ದಾಸಪ್ಪ ಜಗದೀಶ್, ಮತ್ತಿತರರು ಹಾಜರಿದ್ದರು.

ಸೋಸಲೆ ಗ್ರಾಮ ಪಂಚಾಯತಿಯಲ್ಲಿ ಕಾಂಗ್ರೆಸ್ ಆಡಳಿತ



ತಿ.ನರಸೀಪುರ, ಆ.5– ತಾಲೂಕಿನ ಸೋಸಲೆ ಗ್ರಾಮ ಪಂಚಾಯತಿಯ ಆಡಳಿತ ಪಕ್ಷ ಕಾಂಗ್ರೆಸ್ ಪಾಲಾಗಿದ್ದು, ಎರಡನೇ ಅವಧಿಯ ಅಧ್ಯಕ್ಷರಾಗಿ ಎಂ. ಚಾಂದಿನಿ, ಉಪಾಧ್ಯಕ್ಷರಾಗಿ ಸಿ.ಪ್ರೀತಿ ಅವಿರೋಧವಾಗಿ ಆಯ್ಕೆಗೊಂಡರು.

ಒಟ್ಟು 20 ಮಂದಿ ಸದಸ್ಯ ಬಲವುಳ್ಳ ಸೋಸಲೆ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನ ಸಾಮಾನ್ಯ ಮಹಿಳೆ, ಉಪಾಧ್ಯಕ್ಷಸ್ಥಾನ ಪರಿಶಿಷ್ಟ ಪಂಗಡ ಮಹಿಳೆಗೆ ಮೀಸಲಾಗಿತ್ತು

ಅಧ್ಯಕ್ಷ ಸ್ಥಾನದ ಆಯ್ಕೆ ಬಯಸಿ ಸಿದ್ದನಹುಂಡಿ ಗ್ರಾಮದ ಎಂ.ಚಾಂದಿನಿ, ಉಪಾಧ್ಯಕ್ಷ ಸ್ಥಾನಕ್ಕೆ ಎಸ್.ಕೆ.ಪಿ ಅಗ್ರಹಾರದ ಸಿ.ಪ್ರೀತಿ ಇಬ್ಬರೇ ನಾಮಪತ್ರ ಸಲ್ಲಿಸಿ ಅವಿರೋಧವಾಗಿ ಆಯ್ಕೆಯಾದರು. ಚುನಾವಣೆಯಲ್ಲಿ ನಿಕಟಪೂರ್ವ ಅಧ್ಯಕ್ಷರಾದ ಎಂ. ಮಹೇಶ್, ಉಪಾಧ್ಯಕ್ಷೆ ಹೇಮಾ, ಸದಸ್ಯರಾದ ಎಸ್. ಪುಟ್ಟಸ್ವಾಮಿ, ಸುವರ್ಣ, ಎನ್. ಶೈಲಜಾ, ಎಸ್.ಎನ್. ರೇಖಪ್ರಭ, ಎಸ್. ವಿ. ಮಹೇಶ್ ಕುಮಾರ್, ನಾಗರತ್ನ, ಆರ್. ಮಲ್ಲೇಶ್, ರಾಜಮ್ಮ ಆಶಾ,ಪಿ. ಜ್ಞಾನೇಂದ್ರ, ಸುಂದರ, ಸಿ ನಾರಾಯಣ, ಎಸ್. ವಿ. ಮಂಜುನಾಥ್ ಚುನಾವಣೆಗೆ ಹಾಜರಾಗಿ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆಗೆ ಅನುಮೋದನೆ ನೀಡಿದರೆ, ಎನ್.ನಾಗೇಂದ್ರ, ಎಂ.ಭಾಗ್ಯ, ಎಸ್.ಎನ್.ಮಧುಸೂದನ್ ಗೈರಾಗಿದ್ದರು.

ಚುನಾವಣಾಧಿಕಾರಿ ಹಾಗೂ ಜಿಲ್ಲಾ ಪಂಚಾಯತಿ ತಾಂತ್ರಿಕ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರೆ ಪಿ.ಎನ್.ಚರಿತಾ ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆಯನ್ನು ಪ್ರಕಟಿಸಿದರು. ಸಹಾಯಕ ಚುನಾವಣಾಧಿಕಾರಿಯಾಗಿ ಎಚ್. ನಾಗರಾಜು, ಪಿಡಿಒ ಸಿ ಪುಟ್ಟಸ್ವಾಮಿ ಕಾರ್ಯನಿರ್ವಹಿಸಿದರು.

ಜಿ.ಪಂ.ಮಾಜಿ ಸದಸ್ಯ ಹೊನ್ನನಾಯಕ, ಪಿಎಸಿಸಿ ಅಧ್ಯಕ್ಷ ಸೋಸಲೆ ಪರಶಿವಮೂರ್ತಿ, ತಾಲೂಕು ನಾಯಕ ಸಂಘದ ಮಾಜಿ ಅಧ್ಯಕ್ಷ ಚಿನ್ನಸ್ವಾಮಿ, ತಾ.ಪಂ. ಮಾಜಿ ಅಧ್ಯಕ್ಷರಾದ ಕುಮಾರಸ್ವಾಮಿ, ಕೆಬ್ಬೆ ಶಿವಸ್ವಾಮಿ, ಮಾಜಿ ಸದಸ್ಯ ರಂಗಸ್ವಾಮಿ, ಮೈಸೂರು ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ಮುಖಂಡರುಗಳಾದ ಮುಸುವಿನಕೊಪ್ಪಲು ಶಿವಸ್ವಾಮಿ, ಗದ್ದೆಮೋಳೆ ಸಿದ್ದರಾಜು,ಮಹೇಶ್, ಉಕ್ಕಲಗೆರೆ ಬಸವಣ್ಣ, ಸೋಸಲೆ ಮಹದೇವಸ್ವಾಮಿ, ಸಿದ್ದನಹುಂಡಿ ಗ್ರಾ.ಪಂ.ಮಾಜಿ ಸದಸ್ಯ ಸೋಮಣ್ಣ, ನಟರಾಜ್, ರಂಗಸ್ವಾಮಿ, ಕೃಷ್ಣಪ್ಪ, ಸುರೇಶ್, ಸೋಮಣ್ಣ ಕೊಳತ್ತೂರು ಕುಮಾರ್, ಸೋಮಣ್ಣ, ಸೋಸಲೆ ದೇವು (ಗೂಳಿ), ಶಿವಪ್ರಕಾಶ್ (ಪುಟ್ಟಣ್ಣ) ಮಹದೇವ ಶೆಟ್ಟಿ, ಗುತ್ತಿಗೆದಾರ ರಾಜೇಶ್, ಕೆಬ್ಬೆಹುಂಡಿ ಮಹದೇವಣ್ಣ ಗದ್ದೆ ಮೋಳೆ ಮಹದೇವ್ ಮತ್ತಿತರರು ಇದ್ದರು.

ಹೆಗ್ಗಡಹಳ್ಳಿ ಗ್ರಾಮ ಪಂಚಾಯತಿ ಬಿಜೆಪಿ ವಶ



ನಂಜನಗೂಡು, ಆ.5– ತಾಲೂಕಿನ ಹೆಗ್ಗಡಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ಬಿಜೆಪಿ ಬೆಂಬಲಿತ ಮನೋಜ್, ಉಪಾಧ್ಯಕ್ಷರಾಗಿ ಮಹಾಲಕ್ಷ್ಮಿ ಆಯ್ಕೆಯಾದರು.

19 ಸದಸ್ಯ ಬಲದ ಹೆಗ್ಗಡಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಎರಡನೇ ಅವಧಿಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯನ್ನು ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಮನೋಜ್, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಅಶೋಕ್ ನಾಮಪತ್ರ ಸಲ್ಲಿಸಿದ್ದರು. ಮನೋಜ್ 12 ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾದರೆ, ಅಶೋಕ್ 5 ಮತಗಳನ್ನು ಪಡೆದು ಸೋಲು ಅನುಭವಿಸಿದರು. ಎರಡು ಮತಗಳು ತಿರಸ್ಕೃತಗೊಂಡವು.

ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿಯಾಗಿ ಮಹಾಲಕ್ಷ್ಮಿ, ಕಾಂಗ್ರೆಸ್ ಅಭ್ಯರ್ಥಿಯಾಗಿ ದೊಡ್ಡತಾಯಮ್ಮ ನಾಮಪತ್ರ ಸಲ್ಲಿಸಿದ್ದರು. ಬಿಜೆಪಿ ಪಕ್ಷದ ಮಹಾಲಕ್ಷ್ಮಿ 11 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೆ, ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ದೊಡ್ಡತಾಯಮ್ಮ 8 ಮತಗಳನ್ನು ಪಡೆದು ಸೋತರು. ಚುನಾವಣಾ ಅಧಿಕಾರಿಯಾಗಿ ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಚಂದ್ರು ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆಯನ್ನು ಘೋಷಿಸಿದರು.

ಇದೇ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯ ಸಿ. ಚಿಕ್ಕರಂಗನಾಯಕ ಮಾತನಾಡಿ, ಕಳೆದ 25 ವರ್ಷಗಳಿಂದಲೂ ಸಹ ಹೆಗ್ಗಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಸದೆ ಅವಿರೋಧವಾಗಿ ಆಯ್ಕೆಗೊಳಿಸಲಾಗುತ್ತಿತ್ತು. ಈ ಬಾರಿ ಚುನಾವಣೆ ನಡೆದಿರುವುದು ಉತ್ತಮ ಬೆಳವಣಿಗೆಯಲ್ಲ. ಅಧ್ಯಕ್ಷ, ಉಪಧ್ಯಕ್ಷರಾಗಿ ಆಯ್ಕೆಯಾಗಿರುವವರು ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಮಗಳಿಗೆ ಮೂಲಸೌಕರ್ಯಗಳನ್ನು ಒದಗಿಸುವ ಮೂಲಕ ಪಂಚಾಯಿತಿಯ ಅಭಿವೃದ್ಧಿಗೆ ಶ್ರಮಿಸಿ ಎಂದು ಸಲಹೆ ನೀಡಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ತಾಲೂಕು ಅಧ್ಯಕ್ಷ ಹೊರಳವಾಡಿ ಪಿ.ಮಹೇಶ್, ಜಿಪಂ ಮಾಜಿ ಸದಸ್ಯ ಚಿಕ್ಕರಂಗನಾಯಕ, ಗ್ರಾಪಂ ಸದಸ್ಯರಾದ ಎಚ್.ಕೆ.ಪ್ರಕಾಶ್, ಗೋವಿಂದರಾಜು, ಮಂಜುನಾಥ್, ಕಾಂತರಾಜು, ನಾಗರಾಜು, ರಾಣಿ, ಸವಿತಾ, ಎಸ್.ಡಿ.ಮಹೇಶ್, ಮುಖಂಡರಾದ ದೊಡ್ಡಅಂಕಶೆಟ್ಟಿ, ಚೆನ್ನಪ್ಪ, ಮಂಜು, ಪಿಡಿಒ ಎಂ.ನಾಗರಾಜು, ಕಾರ್ಯದರ್ಶಿ ಮಹೇಶ್ ಸೇರಿದಂತೆ ಹೆಗ್ಗಡಹಳ್ಳಿ ಗ್ರಾಮಸ್ಥರು ಕಾರ್ಯಕರ್ತರು ಇದ್ದರು.

ಜಯಪುರ ಬಳಿ ಹಸುವಿನ ಮೇಲೆ ಹುಲಿ ದಾಳಿ



ಜಯಪುರ, ಆ.5– ಜಯಪುರ ಗ್ರಾಮದಿಂದ ಅರಸಿನಕೆರೆ ಗ್ರಾಮಕ್ಕೆ ತೆರಳುವ ರಸ್ತೆಯಲ್ಲಿ ಶುಕ್ರವಾರ ಸಂಜೆ ಬರುತ್ತಿದ್ದ ಹಸುವಿನ ಮೇಲೆ ಹುಲಿ ದಾಳಿ ಮಾಡಿದ್ದು, ಅದೇ ದಾರಿಯಲ್ಲಿ ಬರುತ್ತಿದ್ದ ಆಟೋ ಚಾಲಕ ಜೋರಾಗಿ ಹಾರನ್ ಹೊಡೆದಿದ್ದರಿಂದ ಹುಲಿಯು ಹಸುವನ್ನು ಬಿಟ್ಟು ಪೊದೆಯೊಳಗೆ ನುಸುಳಿತು ಎಂದು ಪ್ರತ್ಯಕ್ಷದರ್ಶಿ ಗೋಪಾಲಪುರ ವೆಂಕಟೇಶ್ ತಿಳಿಸಿದರು.

ಹಾಡಹಗಲೇ ಜನವಸತಿ ಪ್ರದೇಶದಲ್ಲಿ ಹಸುವನ್ನು ಬೇಟೆಯಾಡಲು ಹುಲಿ ಯತ್ನಿಸಿದ್ದು, ಸುತ್ತಮುತ್ತಲ ಗ್ರಾಮಸ್ಥರು ಭಯಭೀತರಾಗಿದ್ದಾರೆ. ಇತ್ತೀಚೆಗೆ ಹಲವು ಬಾರಿ ಜಯಪುರ, ಅರಸಿನಕೆರೆ, ಮಹದೇವಪುರ, ಹಾರೋಹಳ್ಳಿ, ಗುಜ್ಜೇಗೌಡನಪುರ, ಮಾವಿನಹಳ್ಳಿ, ಬೆಟ್ಟದಬೀಡು, ಗುಮಚನಹಳ್ಳಿ, ಸೋಲಿಗರ ಕಾಲೋನಿ, ಗೋಪಾಲಪುರ ಗ್ರಾಮಗಳ ಜನರಿಗೆ ಹುಲಿಗಳು ಕಾಣಿಸಿಕೊಂಡಿವೆ.

ಹುಲಿಯ ಜೊತೆಗಿರುವ ಎರಡು ಮರಿಗಳ ಸೆರೆಗಾಗಿ ಸಾರ್ವಜನಿಕರು ಅರಣ್ಯಾಧಿಕಾರಿಗಳಿಗೆ ಹಲವು ಬಾರಿ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಕೇವಲ ಕ್ಯಾಮರಾ ಅಳವಡಿಸಿ, ಒಂದು ಬೋನು ಇರಿಸಿರುವುದು ಬಿಟ್ಟರೆ, ಹುಲಿ ಸೆರೆಗಾಗಿ ಅರಣ್ಯ ಅಧಿಕಾರಿಗಳು ಯಾವುದೇ ಪ್ರಯತ್ನ ಮಾಡುತ್ತಿಲ್ಲ. ಜಮೀನುಗಳಿಗೆ ತೆರಳಲು ರೈತರು ಭಯಪಡುವಂತಾಗಿದೆ ಎಂದು ಅರಸಿನಕೆರೆ ಗ್ರಾಮದ ಆನಂದ್ ದೂರಿದರು.

ಜಯಪುರ ಗ್ರಾಮದಿಂದ ಅರಸಿನಕೆರೆ, ಗುಮಚನಹಳ್ಳಿ, ಬೆಟ್ಟದಬೀಡು, ಸೋಲಿಗರ ಕಾಲೋನಿ, ಮದ್ದೂರು, ಎಸ್.ಕಲ್ಲಹಳ್ಳಿ ಗ್ರಾಮಗಳಿಗೆ ಕಾಡಿನ ಮಧ್ಯೆಯೆ ಹೋಗಬೇಕಾಗಿರುವುದರಿಂದ ಜನರು ಮುಸ್ಸಂಜೆಯ ಒಳಗೆ ಮನೆ ಸೇರಿಕೊಳ್ಳುವ ಭಯದ ಪರಿಸ್ಥಿತಿ ನಿರ್ಮಾಣವಾಗಿದೆ. ಅರಣ್ಯಾಧಿಕಾರಿಗಳು ಕೂಡಲೇ ಹುಲಿಗಳನ್ನು ಸೆರೆಹಿಡಿದು ದೂರದ ಕಾಡಿಗೆ ಬಿಟ್ಟು ಸ್ಥಳೀಯರ ಭಯವನ್ನು ಹೋಗಲಾಡಿಸಬೇಕೆಂದು ಗೋಪಾಲಪುರ ದಿಲೀಪ್ ಆಗ್ರಹಿಸಿದರು.

ಜಯಪುರ ಸಮೀಪವಿರುವ ಚಿಕ್ಕನಹಳ್ಳಿ ಅರಣ್ಯ ಪ್ರದೇಶಕ್ಕೆ ಹಾಗೂ ಅರಬ್ಬಿತಿಟ್ಟು ಅರಣ್ಯ ಪ್ರದೇಶಕ್ಕೆ ಹುಲಿಗಳು ಆಗಾಗ್ಗೆ ಬಂದು ಹೋಗುವುದು ಕ್ಯಾಮರಾ ಟ್ರ್ಯಾಪ್‌ನಲ್ಲಿ ಕಂಡುಬಂದಿದೆ ಸಮೀಪದ ಮಂಡನಹಳ್ಳಿಯಲ್ಲಿ ಹುಲಿ ಸೆರೆಗಾಗಿ ಬೋನು ಇರಿಸಲಾಗಿದೆ. ಅರಣ್ಯ ಸಿಬ್ಬಂದಿಗಳು ಗಸ್ತಿನಲ್ಲಿದ್ದಾರೆ. ಹುಲಿಯು ಇದುವರೆಗೂ ಜನಜಾನುವಾರುಗಳಿಗೆ ತೊಂದರೆಮಾಡಿಲ್ಲ. ಪ್ರತಿದಿನವೂ ಹುಲಿಗಳ ಚಲನವಲನ ಬಗ್ಗೆ ಮಾಹಿತಿ ಕಲೆಹಾಕುತ್ತಿದ್ದು, ಸೆರೆಯಡಿಯಲಾಗುವುದು. ಹಿರಿಯ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ಮಾಹಿತಿ ಕಲೆಹಾಕಿದ್ದಾರೆ ಎಂದು ಆರ್.ಎಫ್.ಓ ಸುರೇಂದ್ರ ತಿಳಿಸಿದರು.

ಎಂ.ಸಿ.ತಳಲು ಗ್ರಾಪಂ ಕಾಂಗ್ರೆಸ್ ತೆಕ್ಕೆಗೆ



ಸರಗೂರು, ಆ.5– ಕುತೂಹಲ ಕೆರಳಿಸಿದ್ದ ತಾಲೂಕಿನ ಎಂ.ಸಿ.ತಳಲು ಗ್ರಾಮಪಂಚಾಯಿತಿ ಕಾಂಗ್ರೆಸ್ ತೆಕ್ಕೆಗೆ ಬಿದ್ದಿದ್ದು, ಅಧ್ಯಕ್ಷರಾಗಿ. ಲಕ್ಷ್ಮಿ ಮಾದಪ್ಪ ಭೋವಿ, ಉಪಾಧ್ಯಕ್ಷರಾಗಿ ಲಕ್ಷ್ಮಿ ಕುಮಾರ್ ಆಯ್ಕೆಯಾಗಿದ್ದಾರೆ.


ಪಂಚಾಯಿತಿ ಕಚೇರಿಯಲ್ಲಿ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿ ಲಕ್ಷ್ಮಿ ಮಾದಪ್ಪ ಭೋವಿ ಹಾಗೂ ರಂಜೀತ ನಾಮಪತ್ರ ಸಲ್ಲಿಸಿದ್ದರು. ಈ ಪೈಕಿ ಲಕ್ಷ್ಮಿ ಮಾದಪ್ಪ ಭೋವಿ, 6 ಮತ ಪಡೆದು ಜಯಗಳಿಸಿದರೆ, ರಂಜೀತ 5 ಮತ ಪಡೆದು ಸೋಲುಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ಕೆ.ಸಿ.ಲಕ್ಷ್ಮಿ ಹಾಗೂ ನಾಗಮ್ಮ ನಾಮಪತ್ರ ಸಲ್ಲಿಸಿದರು. ಕೆ.ಸಿ.ಲಕ್ಷ್ಮಿ 6 ಮತ ಪಡೆದು ವಿಜಯಿಯಾದರೆ, ನಾಗಮ್ಮ 5 ಮತ ಪಡೆದು ಪರಾಭವಗೊಂಡರು. ನೀರಾವರಿ ಇಲಾಖೆ ಎಂಜಿನಿಯರ್ ಉಷಾ, ಪಿಡಿಒ ಶಿಲ್ಪ, ಚುನಾವಣಾ ಪ್ರಕ್ರಿಯೆ ನಡೆಸಿಕೊಟ್ಟರು.

ಸದಸ್ಯರಾದ ಪ್ರಕಾಶ್ ಚಂದ್ರ, ರಮೇಶ್, ಕೆಂಡನಾಯಕ, ಕೆ.ಸಿ.ಲಕ್ಷ್ಮಿ, ನಿಂಗಮ್ಮ, ರಂಜೀತ, ರಾಜಕುಮಾರ್, ನಾಗಮ್ಮ, ಭಾಗ್ಯಮ್ಮ, ಚಿಕ್ಕಕ್ಯಾತ ಉಪಸ್ಥಿತರಿದ್ದರು.

ಗ್ರಾಮ ಪಂಚಾಯಿತಿ ಸದಸ್ಯ ಕಾಗ್ರೆಸ್ ಮುಖಂಡ ಪ್ರಕಾಶ್ ಚಂದ್ರ ಮಾತನಾಡಿ, ಕ್ಷೇತ್ರದ ಶಾಸಕ ಅನಿಲ್ ಚಿಕ್ಕಮಾದು ಅವರ ಅಭಿವೃದ್ಧಿ ಕೆಲಸಗಳು, ಅವರ ಸಹಕಾರದಿಂದ ಪಂಚಾಯಿತಿ ಅಧ್ಯಕ್ಷರಾಗಿ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮುಂದಿನ ದಿನಗಳಲ್ಲಿ ಪಂಚಾಯಿತಿ ವ್ಯಾಪ್ತಿಯ ಪ್ರತಿ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿ, ಮಾದರಿ ಪಂಚಾಯಿತಿ ಮಾಡುವ ನಿಟ್ಟಿನಲ್ಲಿ ಎಲ್ಲಾ ಸದಸ್ಯರ ಸಹಕಾರ ಪಡೆದು ಮುಂದಾಗುವುದು ಎಂದು ತಿಳಿಸಿದರು.

ಕಾಂಗ್ರೆಸ್ ಬೂತ್ ಕಮಿಟಿ ಅಧ್ಯಕ್ಷ ಜಯಕುಮಾರ್, ತಾಲೂಕು ಕಾರ್ಮಿಕ ವಿಭಾಗದ ಅಧ್ಯಕ್ಷ ಅಸ್ರಪ್ ಅಲಿ, ಪಂಚಾಯತ್ ರಾಜ್ ಘಟಕದ ಸದಸ್ಯರಾದ ರಾಮು, ದೊಡ್ಡ, ಮುಖಂಡರಾದ ಭರಗಿ ಪ್ರಭು, ಮಹದೇವ ಗೌಡ, ರವಿ, ಕರಿಯ, ನಂದೀಶ್, ಬಾಬು, ಶಿವಪ್ಪ, ಶಿವಪುರ ಪ್ರಕಾಶ್, ಜಯಲಕ್ಷ್ಮಿಪುರ ನಾಗೇದ್ರ, ರಾಜು, ಭಾಗಿಯಾಗಿದ್ದರು,



ಹುಣಸೂರು ತಾಲೂಕಿನ ಹೆಗ್ಗಂದೂರು ಪಂಚಾಯತಿಯ ನೂತನ ಅಧ್ಯಕ್ಷರಾಗಿ ವಡಂಬಾಳು ಗ್ರಾಮದ ರವಿಗೌಡ ಹಾಗೂ ಉಪಾಧ್ಯಕ್ಷರಾಗಿ. ಬೀರನಹಳ್ಳಿ ಗ್ರಾಮದ ನಾಗರತ್ನ ಬಾಲಸುಂದರ ಅವರು ಆಯ್ಕೆಯಾಗಿದ್ದಾರೆ.

ಹಿರಿಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹುಣಸೂರು, ಆ.5– ಇಂದು ನಡೆದ ಹಿರಿಕ್ಯಾತನಹಳ್ಳಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿ ಕುಮಾರಿ ರುಕ್ಮಿಣಿ ಅಧ್ಯಕ್ಷರಾಗಿ, ಉಪಾಧ್ಯಕ್ಷರಾಗಿ ಕಲಾವತಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಈ ಸಂದರ್ಭದಲ್ಲಿ ಮಾಜಿ ಶಾಸಕರ ಸಹೋದರ ಹೆಚ್.ಪಿ.ಅಮರ್‌ನಾಥ್, ಮಾಜಿ ಅಧ್ಯಕ್ಷ ಜವರೇಗೌಡ, ಊರಿನ ಮುಖಂಡರು, ಕಾಂಗ್ರೆಸ್ ಮುಖಂಡರು, ಶಿವಪ್ಪ, ಸುರೇಶ, ಕಾಟೂರ್ ದೇವರಾಜ್ ವಿಜಯ್ ಕುಮಾರ್, ಉದಯ್ ಕುಮಾರ್, ಮಹೇಶ್, ಹರೀಶ್ ಗೌಡ, ಮರೂರು ಸತೀಶ್,ನಾಗರಾಜು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಗಂಧನಹಳ್ಳಿ ಗ್ರಾಪಂನಲ್ಲಿ ಕಾಂಗ್ರೆಸ್ ಆಡಳಿತ



ಭೇರ್ಯ, ಆ.5– ಕೆ.ಆರ್.ನಗರ ತಾಲೂಕಿನ ಗಂಧನಹಳ್ಳಿ ಗ್ರಾಮ ಪಂಚಾಯತಿ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ತಾರಾ ಹರೀಶ್, ಉಪಾಧ್ಯಕ್ಷರಾಗಿ ಅನಂತ ಕುಮಾರ.ಡಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎರಡನೇ ಅವಧಿಗೆ ಅಧ್ಯಕ್ಷ ಸ್ಥಾನ ಹಿಂದುಳಿದ (ಅ) ವರ್ಗಕ್ಕೆ ಹಾಗೂ ಉಪಾಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲು ನಿಗದಿಯಾಗಿದ್ದು, ಅಧ್ಯಕ್ಷ ಸ್ಥಾನಕ್ಕೆ ತಾರಾ ಹರೀಶ್ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಆನಂತಕುಮಾರ್.ಡಿ ಇಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವಿರೋಧವಾಗಿ ಆಯ್ಕೆಯನ್ನು ಚುನಾವಣಾಧಿಕಾರಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಪೂರ್ಣಿಮಾ ಪ್ರಕಟಿಸಿದರು. ಪಿಡಿಓ ಸರಳ ಸಹಕರಿಸಿದರು.

ಚುನಾವಣೆಯಲ್ಲಿ ಗ್ರಾ.ಪಂ.ಸದಸ್ಯರಾದ ರಾಜಮ್ಮ, ರುಕ್ಮಿಣಿ, ಭಾಗ್ಯಜ್ಯೋತಿ, ಮಹದೇವಿ, ಸುಲೋಚನ, ಜಿ.ಪಿ.ಮಂಗಳಮ್ಮ ಜಿ.ಎಸ್. ಸಣ್ಣದೊಡ್ಡೇಗೌಡ, ಜಿ.ಸಿ.ಸತೀಶ, ಜಿ.ಆರ್. ಲೋಕೇಶ್, ಜಿ.ಎಸ್.ರಾಜೇಗೌಡ, ಅಂಗಡಿ ಕುಮಾರ, ಜಯರಾಮೇಗೌಡ ಭಾಗವಹಿಸಿದ್ದರು.

ನೂತನ ಅಧ್ಯಕ್ಷೆ ಮತ್ತು ಉಪಾಧ್ಯಕ್ಷರನ್ನು ಗ್ರಾಮದ ಮುಖಂಡರಾದ ದೊಡ್ಡಯಜಮಾನ ಜಿ.ಆರ್.ರಘು, ಡೈರಿ ಅಧ್ಯಕ್ಷ ಗಾಂಧಿಶಿವಣ್ಣ, ಜಿ.ಕೆ.ಮಹದೇವ್, ಕಾಂಗ್ರೆಸ್ ಮುಖಂಡ ಜಿಎಸ್.ವೆಂಕಟೇಶ್, ಗಂಧನಹಳ್ಳಿ ಹೇಮಂತ್, ತಾ.ಪಂ.ಮಾಜಿ ಸದಸ್ಯರಾದ ಜಿ.ಎಸ್.ಮಂಜುನಾಥ್, ಮಹದೇವ್, ಗ್ರಾಪಂ ಮಾಜಿ ಸದಸ್ಯ ಎಸ್.ರಾಮು, ಜಿ.ಆರ್. ಸತೀಶ್, ಯೋಗೇಶ್, ಬಂಗಾರಿ ಮಹದೇವ್ ಸೇರಿದಂತೆ ಅನೇಕರು ಭಾರೀ ಗಾತ್ರದ ಹಾರ ಹಾಕಿ ಅಭಿನಂದಿಸಿದರು.

ತಲಕಾಡು ಗ್ರಾಪಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ



ತಿ.ನರಸೀಪುರ, ಆ.5– ತಲಕಾಡು ಗ್ರಾಮ ಪಂಚಾಯಿತಿಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಶೋಭಾ ಅಧ್ಯಕ್ಷರಾಗಿ, ವಡೆಯಾಂದಹಳ್ಳಿ ನಾಗರಾಜಮೂರ್ತಿ ಉಪಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮ ಪಂಚಾಯತಿ ಕಚೇರಿಯಲ್ಲಿ 30 ತಿಂಗಳ ಎರಡನೇ ಅವಧಿಗೆ ಅಧ್ಯಕ್ಷ–ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಕರೆಯಲಾಗಿದ್ದ ಚುನಾವಣೆ ಸಭೆಯಲ್ಲಿ ಮಾಜಿ ಅಧ್ಯಕ್ಷ ಮಲ್ಲಣ್ಣಿಯವರ ಪತ್ನಿ ಶೋಭಾ ಅಧ್ಯಕ್ಷ ಸ್ಥಾನಕ್ಕೂ ಹಾಗೂ ವಡೆಯಾಂದಹಳ್ಳಿ ಗ್ರಾಮದ ನಾಗರಾಜ ಮೂರ್ತಿ ಉಪಾಧ್ಯಕ್ಷ ಸ್ಥಾನಕ್ಕೂ ನಾಮಪತ್ರ ಸಲ್ಲಿಸಿದ ಹಿನ್ನೆಲೆಯಲ್ಲಿ ಇವರಿಬ್ಬರ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಶೋಭಾ ಪ್ರಕಟಿಸಿದರು.

ಪಂಚಾಯತಿ ಒಟ್ಟು 25 ಸದಸ್ಯರ ಪೈಕಿ ನಿಕಟಪೂರ್ವ ಅಧ್ಯಕ್ಷ ಜಿ.ಕೆಂಪಯ್ಯ, ಸದಸ್ಯರಾದ ಶಾಂತಕುಮಾರಿ, ಶಾಂತರಾಜು, ಸುಂದರನಾಯಕ, ಸುನೀತಾ, ಟಿ.ಎಂ. ನಾಗೇಂದ್ರ ಕುಮಾರ್, ಮಹದೇವಿ, ಎಂ.ಮಮತ, ಎಸ್.ಪ್ರಮೋದ್, ನಾಗರತ್ನಮ್ಮ, ಉಮಾ, ಕೆ.ಪಾರ್ವತಿ, ಬಿ.ಎಚ್.ಕವಿತಾ, ಚಿಕ್ಕಮಾದನಾಯಕ, ಎಲ್.ನಾಗೇಶ್, ಕೆ.ಎಸ್.ಗೌರಮ್ಮ ಚುನಾವಣಾ ಸಭೆಗೆ ಹಾಜರಾಗಿ ಪಂಚಾಯ್ತಿ ವರಿಷ್ಠರ ಆಯ್ಕೆಗೆ ಅನುಮೋದನೆ ನೀಡಿದರೆ, ನಿಕಟಪೂರ್ವ ಉಪಾಧ್ಯಕ್ಷೆ ಆಸ್ಮಿನ್ ಸೇರಿದಂತೆ 7 ಮಂದಿ ಸದಸ್ಯರು ಗೈರಾಗಿದ್ದರು.

ಅಧ್ಯಕ್ಷ–ಉಪಾಧ್ಯಕ್ಷರ ಅವಿರೋಧ ಆಯ್ಕೆ ಪ್ರಕಟವಾಗುತ್ತಿದ್ದಂತೆ ಪಂಚಾಯ್ತಿ ಮುಂಭಾಗ ಜಮಾಯಿಸಿದ್ದ ನೂರಾರು ಮಂದಿ ಬೆಂಬಲಿಗರು ಪಟಾಕಿ ಸಿಡಿಸಿ,ಸಿಹಿ ಹಂಚಿ ಸಂಭ್ರಮಿಸಿದರು.


ಈ ವೇಳೆ ಅಧ್ಯಕ್ಷ, ಉಪಾಧ್ಯಕ್ಷರನ್ನು ಅಭಿನಂದಿಸಿ ಮಾತನಾಡಿದ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ ನೂತನ ಅಧ್ಯಕ್ಷರು ಪಂಚಾಯತಿ ವ್ಯಾಪ್ತಿಗೆ ಸೇರಿದ ಗ್ರಾಮಗಳ ಮೂಲಸೌಕರ್ಯಗಳಿಗೆ ಮೊದಲ ಆದ್ಯತೆ ನೀಡಿ ಪಂಚಾಯ್ತಿಯನ್ನು ಮಾದರಿ ಪಂಚಾಯ್ತಿ ಮಾಡುವತ್ತ ಚಿತ್ತಹರಿಸಬೇಕು ಎಂದರು.

ತಾಪಂ ಮಾಜಿ ಸದಸ್ಯ ನರಸಿಂಹಮಾದ ನಾಯಕ, ಗ್ರಾ.ಪಂ.ಮಾಜಿ ಅಧ್ಯಕ್ಷ ಮಲ್ಲಣ್ಣಿ, ಯುವ ಮುಖಂಡ ಅನಿಲ್ ಬೋಸ್, ಕುಕ್ಕೂರು ಗಣೇಶ್, ಕಾಳಿಹುಂಡಿ ಮಹೇಂದ್ರ, ವಿಜಯ ಕುಮಾರ್, ಎಚ್.ರಾಜು, ಶಾಂತರಾಜು, ಮೋಹನ್ ಮತ್ತಿತರ ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು ಹಾಜರಿದ್ದರು.

ಕೊಳವೆ ಬಾವಿ ನೀರು ಕುಡಿಯಲು ಯೋಗ್ಯವಲ್ಲ

ಜಯಪುರ, ಆ.5– ಜಯಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬರಡನಪುರ ಗ್ರಾಮದ ಕುಡಿಯುವ ನೀರನ್ನು ಇತ್ತೀಚೆಗೆ ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಪರೀಕ್ಷೆಗೊಳಪಡಿಸಿದಾಗ ಅದರಲ್ಲಿ ನಿಗಧಿತ ಪ್ರಮಾಣಕ್ಕಿಂತ ಹೆಚ್ಚಿನ ನೈಟ್ರೇಟ್ ಅಂಶ ಕಂಡು ಬಂದಿದ್ದು, ನೀರು ಕುಡಿಯಲು, ಯೋಗ್ಯವಾಗಿಲ್ಲ ಎಂಬುದಾಗಿ ವರದಿ ಬಂದಿದೆ. ಈ ನೀರನ್ನು ಸಾರ್ವಜನಿಕರು ಕುಡಿಯಲು ಉಪಯೋಗಿಸಬಾರದು ಎಂದು ಜಯಪುರ ಗ್ರಾಮ ಪಂಚಾಯಿತಿ ಪಿಡಿಓ ಬಸವಣ್ಣ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ. ಬರಡನಪುರ ಗ್ರಾಮಕ್ಕೆ ಕಬಿನಿ ಕುಡಿಯುವ ನೀರನ್ನು ಒದಗಿಸಲಾಗುವುದು, ಜಯಪುರ ಗ್ರಾಮದಲ್ಲಿರುವ ಶುದ್ಧ ಕುಡಿಯುವ ನೀರಿನ ಘಟಕದಿಂದ ಕುಡಿಯುವ ನೀರು ಪಡೆಯುವಂತೆ ಅವರು ವಿನಂತಿಸಿದ್ದಾರೆ.

ಮಹೇಶ್‌ಕುಮಾರ್ ನಿಧನ



ಹುಣಸೂರು, ಆ.5– ನಗರದ ಸ್ಟೋರ್ ಬೀದಿ ನಿವಾಸಿ ಮಹೇಶ್ ಕುಮಾರ್ (47) ಶನಿವಾರ ನಿಧನರಾಗಿದ್ದಾರೆ. ಮೃತರು ನಗರದ ಎಸ್.ಜೆ ರಸ್ತೆಯಲ್ಲಿರುವ ಎಸ್.ಬಿ.ಐ ಬ್ಯಾಂಕ್ ಎದುರು ಟೀ ಅಂಗಡಿ ನಡೆಸಿಕೊಂಡು ಟೀ ಅಂಗಡಿ ಮಹೇಶ್ ಎಂದೇ ಚಿರಪರಿಚಿತರಾಗಿದ್ದರು. ಮೃತರು ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಆ.6) ಮಧ್ಯಾಹ್ನ ತಾಲೂಕು ಕಚೇರಿ ಪಕ್ಕದಲ್ಲಿರುವ ರುದ್ರಭೂಮಿಯಲ್ಲಿ ನಡೆಯಲಿದೆ.

ನೀರಿನ ಮೀಟರ್ ದೋಷ ನಿವಾರಣೆಗೆ ಅಲೆದು... ಅಲೆದು... ಆಕ್ರೋಶಗೊಂಡ ಮಹಿಳೆ

ವಾಟರ್ ವರ್ಕ್ಸ್ ಅಧಿಕಾರಿಗಳಿಗೆ ತರಾಟೆ

ನಗರಪಾಲಿಕೆ ಆಯುಕ್ತರ ಕಾರಿನ ಮುಂದೆ ಮಗನೊಂದಿಗೆ ಕುಳಿತು ಪ್ರತಿಭಟನೆ; ಅಧಿಕಾರಿಗಳಿಗೆ ಮಂಗಳಾರತಿ!



ಮೈಸೂರು, ಆ.5(ಎಸ್‌ಬಿಡಿ)– ನೀರು ಸರಬರಾಜು ಮೀಟರ್ ಸಂಬಂಧಿತ ಸಮಸ್ಯೆ ಸರಿಪಡಿಸುವಂತೆ ಮನವಿ ನೀಡಿ ಆರೇಳು ತಿಂಗಳಾದರೂ ಕ್ರಮ ವಹಿಸದ ಮೈಸೂರು ಮಹಾನಗರ ಪಾಲಿಕೆಯ ವಾಣಿ ವಿಲಾಸ ವಾಟರ್ ವರ್ಕ್ಸ್ ಅಧಿಕಾರಿಗಳನ್ನು ಮಹಿಳೆಯೊಬ್ಬರು ತರಾಟೆಗೆ ತೆಗೆದುಕೊಂಡ ಘಟನೆ ವರದಿಯಾಗಿದೆ.

ಬೆಂಗಳೂರಿನಲ್ಲಿ ನೆಲೆಸಿರುವ ಮಹಿಳೆ ಅವರ ಪುತ್ರನೊಂದಿಗೆ ಮೈಸೂರಿನಲ್ಲಿರುವ ಮನೆಯ ವಾಟರ್ ಮೀಟರ್‌ನ ಸಮಸ್ಯೆ ಪರಿಹರಿಸಿಕೊಳ್ಳಲು ಅಲ್ಲಿಂದಿಲ್ಲಿಗೆ ಅಲೆದಾಡಿ ರೋಸಿ ಹೋಗಿದ್ದು, ಅನಿವಾರ್ಯವಾಗಿ ವಾಣಿ ವಿಲಾಸ ವಾಟರ್ ವರ್ಕ್ಸ್ ಕಾರ್ಯಪಾಲಕ ಇಂಜಿನಿಯರ್ ಕಚೇರಿ ಬಳಿ ನಿಂತಿದ್ದ ಪಾಲಿಕೆ ಆಯುಕ್ತರ ಕಾರಿನ ಮುಂದೆ ಕುಳಿತು ಪ್ರತಿಭಟಿಸಿರುವ ವಿಡಿಯೋ ವೈರಲ್ ಆಗಿದೆ.

ನೀರಿನ ಮೀಟರ್‌ನಲ್ಲಿನ ದೋಷದಿಂದಾಗಿ ಅಧಿಕ ಬಿಲ್ ಬರುತ್ತಿರುವ ಬಗ್ಗೆ 2022ರ ಅಕ್ಟೋಬರ್‌ನಲ್ಲೇ ಪಾಲಿಕೆ ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ. ಆದರೆ ಯಾವುದೇ ಕ್ರಮ ವಹಿಸದ ಕಾರಣ ಪ್ರಸಕ್ತ ವರ್ಷದ ಫೆಬ್ರವರಿ ತಿಂಗಳಲ್ಲಿ ಅರ್ಜಿ ಹಾಕಿ ಸಮಸ್ಯೆ ಸರಿಪಡಿಸಲು ಮನವಿ ಮಾಡಿದ್ದಾರೆ. ಆದರೆ ಈವರೆಗೂ ತಪ್ಪದೇ ನೀರಿನ ಬಿಲ್ ಪಾವತಿಸಿದ್ದಾರೆ. ಈ ನಡುವೆ ಮೂರ್‍ನಾಲ್ಕು ಬಾರಿ ಬೆಂಗಳೂರಿನಿಂದ ಬಂದು ಸಂಬಂಧಪಟ್ಟ ಅಧಿಕಾರಿಗಳನ್ನು ಭೇಟಿಯಾಗಿ, ಸಮಸ್ಯೆ ಪರಿಹರಿಸುವಂತೆ ಮನವಿ ಮಾಡಿದ್ದಾರೆ. ಆದರೆ ಒಬ್ಬ ಅಧಿಕಾರಿಯನ್ನು ಭೇಟಿಯಾದರೆ ಅವರು ಮತ್ತೊಬ್ಬರನ್ನು ಭೇಟಿಯಾಗಲು ಸೂಚಿಸಿದ್ದಾರೆ. ಹೀಗೆ ಅಲ್ಲಿಂದಿಲ್ಲಿಗೆ ಅಲೆದಾಡಿದರೂ ಪರಿಹಾರ ಸಿಗದೆ ರೋಸಿ ಹೋಗಿ ಅಧಿಕಾರಿ ಕಾರು ಮುಂದಕ್ಕೆ ಚಲಿಸಲು ಬಿಡುವುದಿಲ್ಲ ಎಂದು ಪಟ್ಟು ಹಿಡಿದಿರುವುದು ವಿಡಿಯೋದಲ್ಲಿ ತಿಳಿದುಬರುತ್ತದೆ.

ಆರು ತಿಂಗಳಿಂದ ನಿಮ್ಮ ಅಧಿಕಾರಿಗಳಿಗೆ ವೇತನ ಕೊಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ, ಆದರೆ ನಾವು ಮಾತ್ರ 6 ತಿಂಗಳಿಂದ ನೀರಿನ ಬಿಲ್ ಪಾವತಿಸಿದ್ದೇವೆ. ಸರ್ಕಾರಿ ಕೆಲಸ ದೇವರ ಕೆಲಸ ಎನ್ನುತ್ತಾರೆ. ಆದರೆ ಜನರನ್ನು ಹೀಗೆ ಅಲೆದಾಡಿಸುವುದು ಯಾವ ದೇವರಿಗೆ ಪ್ರೀತಿ. ಹಣ ಕಟ್ಟಿದರೂ ನಮ್ಮ ಸಮಸ್ಯೆಗೆ ಪರಿಹಾರ ಸಿಗಲಿಲ್ಲ ಎಂದರೆ ಏನರ್ಥ. ನಾಲ್ಕೈದು ಬಾರಿ ಬೆಂಗಳೂರಿನಿಂದ ಬಂದು ಹೋಗಲು ಸಾವಿರಾರು ರೂ. ಖರ್ಚಾಗಿದೆ. ಒಬ್ಬರು ಸಿಕ್ಕರೆ ಮತ್ತೊಬ್ಬ ಅಧಿಕಾರಿ ಸಿಗುವುದಿಲ್ಲ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಮೀಟರ್ ರೀಡಿಂಗ್ ದೋಷದಿಂದ ಸಮಸ್ಯೆಯಾಗಿದೆ. ನಿಯಮಾನುಸಾರ ಕ್ರಮ ವಹಿಸಲಾಗುತ್ತಿದೆ ಎಂದು ಅಧಿಕಾರಿಗಳು ಸಬೂಬು ಹೇಳಿದಾಗ ಮಹಿಳೆ ಕೆಂಡಾಮಂಡಲವಾಗಿದ್ದಾರೆ. ಮೀಟರ್ ಲೋಪದೋಷ ಸರಿಪಡಿಸಲು 6 ತಿಂಗಳು ಕಾಲಾವಕಾಶ ಬೇಕಾ? ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಮೀಟರ್ ಮರು ಹೊಂದಾಣಿಕೆ ಮಾಡಿಕೊಡಲಾಗುತ್ತದೆ. ನೀವು ಈವರೆಗೆ ಬಡ್ಡಿ ಸಮೇತ ಪಾವತಿಸಿರುವ ಹೆಚ್ಚುವರಿ ಹಣವನ್ನು ಮರುಪಾವತಿ ಮಾಡಿಕೊಡಲಾಗುವುದು. ಶೀಘ್ರವೇ ಸಮಸ್ಯೆ ಸರಿಪಡಿಸಲಾಗುವುದು ಎಂದು ಅಧಿಕಾರಿಗಳು ಭರವಸೆ ನೀಡಿದ್ದರಿಂದ ಮಹಿಳೆ ಸಮಾಧಾನಗೊಂಡಿದ್ದಾರೆ.

ಮೀಟರ್ ದೋಷದಿಂದ ಭಾರೀ ಬಿಲ್ ಬರುತ್ತಿರುವ ಬಗ್ಗೆ ನಗರಪಾಲಿಕೆ ಕೌನ್ಸಿಲ್ ಸಭೆಯಲ್ಲೂ ಗಂಭೀರ ಚರ್ಚೆಯಾಗಿತ್ತು ಕೆಲ ಸದಸ್ಯರು ಬಿಲ್ ಪ್ರದರ್ಶಿಸಿ, ಆಕ್ರೋಶ ಹೊರಹಾಕಿದ್ದರು. ಈ ಬಗ್ಗೆ ತ್ವರಿತವಾಗಿ ಕ್ರಮ ವಹಿಸಬೇಕೆಂದು ಮೇಯರ್ ಸೂಚಿಸಿದ್ದರು. ಆದರೂ ಸಮಸ್ಯೆ ಬಗೆಹರಿದಿಲ್ಲ ಎಂಬುದಕ್ಕೆ ಈ ವಿಡಿಯೋ ಸಾಕ್ಷಿಯಾಗಿದೆ. ಅಧಿಕ ಬಿಲ್ ಬರುತ್ತಿರುವ ಬಗ್ಗೆ ಪರಿಶೀಲನೆ ಮಾಡಿ, ಸಮಸ್ಯೆ ಸರಿಪಡಿಸುವಂತೆ 6 ತಿಂಗಳಿಂದ ಬೇಡಿಕೊಂಡರೂ ಸ್ಪಂದಿಸಿಲ್ಲ. ಹಾಗಾಗಿ ವಿಧಿಯಿಲ್ಲದೆ ಅಧಿಕಾರಿಗಳ ತರಾಟೆಗೆ ತೆಗೆದುಕೊಂಡಿದ್ದಾರೆ. ಇಂತಹ ಗಲಾಟೆ, ಗದ್ದಲಗಳು ಸಹಜ ಎಂಬಂತೆ ಭಾವಿಸಿರುವ ಅಧಿಕಾರಿಗಳು ಈಗಲಾದರೂ ಎಚ್ಚೆತ್ತುಕೊಂಡು ಸಾರ್ವಜನಿಕ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುತ್ತಾರಾ ನೋಡಬೇಕಿದೆ.

13 ಕಂದಾಯ ನಿರೀಕ್ಷಕರಿಗೆ ಬಡ್ತಿ

ಮೈಸೂರು,ಆ.5(ಎಸ್‌ಪಿಎನ್)–13 ಮಂದಿ ಮೈಸೂರು ವಿಭಾಗದ ಪೌರಸೇವಾ ವೃಂದದ ಪ್ರಥಮ ದರ್ಜೆ ಕಂದಾಯ ನಿರೀಕ್ಷಕರುಗಳಿಗೆ ಕಂದಾಯಾಧಿಕಾರಿ ಹುದ್ದೆಗೆ ಮುಂಬಡ್ತಿ ನೀಡಿ, ವಿವಿಧ ನಗರಸಭೆ, ಪುರಸಭೆಗಳಿಗೆ ವರ್ಗಾವಣೆ ಮಾಡಿ ಪೌರಾಡಳಿತ ನಿರ್ದೇಶನಾಲಯ ನಿರ್ದೇಶಕ ಮಂಜುನಾಥ ಶನಿವಾರ ಆದೇಶಿಸಿದ್ದಾರೆ. ಮೈಸೂರು ರಮ್ಮನಹಳ್ಳಿ ಪುರಸಭೆಯಲ್ಲಿ ಪ್ರಥಮ ಕಂದಾಯ ನಿರೀಕ್ಷಕರಾಗಿದ್ದ ಪುಟ್ಟಸ್ವಾಮಿ ಅವರನ್ನು, ಮಂಡ್ಯ ಜಿಲ್ಲೆ ಮದ್ದೂರು ಪುರಸಭೆ ಕಂದಾಯಾಧಿಕಾರಿ, ಮಂಡ್ಯ ನಗರಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿದ್ದ ಎಂ.ಎಸ್.ಗಿರೀಶ್ ಅವರಿಗೆ ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ಪುರಸಭೆ ಕಂದಾಯಾಧಿಕಾರಿಯಾಗಿ, ಹಾಸನ ನಗರ ಸಭೆಯಲ್ಲಿ ಕಂದಾಯ ನಿರೀಕ್ಷಕರಾಗಿದ್ದ ಗೋಪಿ ಅವರಿಗೆ ಬೇಲೂರು ಪುರಸಭೆ ಕಂದಾಯಾಧಿಕಾರಿಯಾಗಿ ಮುಂಬಡ್ತಿ ನೀಡಿ, ವರ್ಗಾಯಿಸಲಾಗಿದೆ.

ಹಾಸನ ನಗರಸಭೆಯ ಕಂದಾಯ ನಿರೀಕ್ಷಕ ಸಿ.ಪಿ.ಪ್ರಕಾಶ ಅವರಿಗೆ ಸಕಲೇಶಪುರ ಪುರ ಸಭೆಯ ಕಂದಾಯಾಧಿಕಾರಿಯಾಗಿ, ಕೊಡಗು ಜಿಲ್ಲೆ ವಿರಾಜಪೇಟೆ ಪುರಸಭೆಯ ಕಂದಾಯ ನಿರೀಕ್ಷಕ ವಿ.ಕೆ.ಸೋಮಶೇಖರ್ ಅವರನ್ನು ಕುಶಾಲನಗರ ಪುರಸಭೆಯ ಕಂದಾ ಯಾಧಿಕಾರಿಯಾಗಿ, ಹಾಸನ ನಗರಸಭೆ ಕಂದಾಯ ನಿರೀಕ್ಷಕ ಟಿ.ಆರ್.ಕೃಷ್ಣೇಗೌಡ ಅವರಿಗೆ ಚನ್ನರಾಯಪಟ್ಟಣ ಪುರಸಭೆಯ ಕಂದಯಾಧಿಕಾರಿಯಾಗಿ ಹಾಗೂ ಹಾಸನ ಜಿಲ್ಲೆ ಚನ್ನರಾಯಪಟ್ಟಣ ಪುರಸಭೆ ಕಂದಾಯ ನಿರೀಕ್ಷಕ ಎನ್.ಮಂಜುನಾಥ್ ಅವರಿಗೆ ಮೈಸೂರು ಜಿಲ್ಲೆ ಹುಣಸೂರು ನಗರಸಭೆ ಕಂದಾಯಾಧಿಕಾರಿಯಾಗಿ ನೇಮಿಸಿದ್ದು, ಮುಂಬಡ್ತಿ ಪಡೆದು ನೌಕರರು ವರ್ಗಾವಣೆಗೊಂಡಿರುವ 15 ದಿನದೊಳಗೆ ಕರ್ತವ್ಯ ಹಾಜರಾಗುವಂತೆ ಸೂಚಿಸಿದ್ದಾರೆ.

ಪ್ಲಾಸ್ಟಿಕ್, ಕಾಗದ ಧ್ವಜ ನಿಷೇಧ

ಮೈಸೂರು,ಆ.5–ಆಗಸ್ಟ್ 15ರಂದು ಮೈಸೂರಿನ ಪಂಜಿನ ಕವಾಯತ್ ಮೈದಾನದಲ್ಲಿ ನಡೆಯಲಿರುವ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ಲಾಸ್ಟಿಕ್ ಮತ್ತು ಕಾಗದ ಧ್ವಜವನ್ನು ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಬಳಸಬಾರದೆಂದು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ. ದಿನಾಚರಣೆಯ ಸಂದರ್ಭದಲ್ಲಿ ಸೂಕ್ತ ರೀತಿಯಲ್ಲಿ ಧ್ವಜಗಳನ್ನು ಬಳಸದೆ ಇರುವುದರಿಂದ ರಾಷ್ಟ್ರ ಧ್ವಜಕ್ಕೆ ಗೌರವ ಮತ್ತು ಅಪಮಾನವಾಗುವುದರಿಂದಾಗಿ ಪ್ಲಾಸ್ಟಿಕ್ ಮತ್ತು ಕಾಗದದ ರಾಷ್ಟ್ರಧ್ವಜವನ್ನು ಬಳಸಬಾರದು. ಬದಲಾಗಿ ಬಟ್ಟೆಯ ಧ್ವಜವನ್ನು ಬಳಸಬೇಕು. ವ್ಯಾಪಾರಸ್ಥರು ಸಹ ಪ್ಲಾಸ್ಟಿಕ್ ಮತ್ತು ಕಾಗದ ರಾಷ್ಟ್ರಧ್ವಜವನ್ನು ತಯಾರಿಸಿ ಮಾರಾಟ ಮಾಡಬಾರದು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



13 ಮಂದಿ ಕೆಎಎಸ್ ಅಧಿಕಾರಿಗಳ ವರ್ಗಾವಣೆ

ಮೈಸೂರು,ಆ.5(ಎಸ್‌ಪಿಎನ್)–13 ಹಿರಿಯ ಮತ್ತು ಕಿರಿಯ ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಶನಿವಾರ ಆದೇಶಿಸಿದೆ. ಮೈಸೂರು–ಮಡಿಕೇರಿ ಎನ್‌ಹೆಚ್‌ಎಐನಲ್ಲಿ ಖಾಲಿ ಇರುವ ವಿಶೇಷ ಭೂಸ್ವಾಧೀನಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ಹುದ್ದೆಗೆ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿ ಹೆಚ್.ಎನ್.ಶಿವೇಗೌಡ, ಚಾಮರಾಜನಗರ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ಆಡಳಿತಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹಿರಿಯ ಕೆಎಎಸ್ ಅಧಿಕಾರಿ ಆರ್.ಮಂಜುನಾಥ್ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಭೂ ಸ್ವಾಧೀನಾಧಿಕಾರಿಯಾಗಿ, ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಕಿರಿಯ ಕೆಎಎಸ್ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಜಿ.ಡಿ.ಶೇಖರ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಹುದ್ದೆಗೆ ವರ್ಗಾಯಿಸಲಾಗಿದೆ.

ಕೋಲಾರ ಜಿಲ್ಲೆಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪ ನಿರ್ದೇಶಕಿ ಡಾ.ಎಂ.ಕೆ.ಶೃತಿ ಅವರನ್ನು ಹಾಸನ ಜಿಲ್ಲೆ ಸಕಲೇಶಪುರ ಉಪ ವಿಭಾಗಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ. ಮೈಸೂರು ಕಾರಾಗೃಹದಲ್ಲಿ ಜಿಲ್ಲಾ ಅಧೀಕ್ಷಕರಾಗಿದ್ದ ಮಹೇಶ್‌ಕುಮಾರ್ ಎನ್.ಜಿಗಣಿ ಅವರನ್ನು ಮೈಸೂರು ನಗರಪಾಲಿಕೆ ವಲಯ ಕಚೇರಿ–3ರ ವಲಯ ಆಯುಕ್ತರಾಗಿ ವರ್ಗಾಯಿಸಲಾಗಿದೆ ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–2)ಯ ಅಧೀನ ಕಾರ್ಯದರ್ಶಿ ಉಮಾದೇವಿ ಆದೇಶ ಹೊರಡಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಮೈಸೂರು,ಆ.5–ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ತನ್ನ ಸದಸ್ಯರ ಮಕ್ಕಳಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಿದೆ. 2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು ಬ್ಯಾಂಕ್‌ನಲ್ಲಿ ಅರ್ಜಿ ಪಡೆದು ದೃಢೀಕೃತ ಅಂಕಪಟ್ಟಿ, ಆಧಾರ್ ಕಾರ್ಡ್ ಪ್ರತಿ, ಎರಡು ಭಾವಚಿತ್ರ ಮತ್ತು ಸದಸ್ಯರ ಪಾಸ್ ಪುಸ್ತಕದ ನಕಲು ಪ್ರತಿಯೊಂದಿಗೆ ಆ.12ರೊಳಗೆ ಅರ್ಜಿ ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ. ಹೆಚ್ಚಿನ ವಿವರಗಳಿಗಾಗಿ ಮೊಬೈಲ್ ಸಂಖ್ಯೆ 9880371421ನ್ನು ಸಂಪರ್ಕಿಸಬಹುದಾಗಿದೆ.

IN THE COURT OF THE HON'BLE IIIrd ADDL. PRL. FAMILY JUDGE AT MYSURU

C.Mis. No. 135/2023

BETWEEN : BABY MEGHANA .N, D/o. Naveen Kumar .M, aged 7 years, Since minor represented by Natural Guardian her Mother Smt. A.R. Aishwarya, aged about 32 years, W/o. Naveen Kumar .M, Residing at No. 83/1/2nd Main, Sheshadripuram, Bangalore - 560 020. ...PETITIONER

vs

NAVEEN KUMAR .M ...RESPONDENT

SUMMONS TO RESPONDENT

SRI. NAVEEN KUMAR .M S/o. Late P. Mohan Kumar, Aged about 39 years, R/at D.No. 1036, LIG-1 Hudco, 6th Stage, (6th Phase, 1st Stage), Bogadi, Chamaraja Mohalla, MYSURU.

Whereas the above petitioner has instituted the above case for recovery against you. Hence you are hereby summoned to appear before the Hon'ble IIIrd Addl. Principal Family Court at Mysore in person or by a Pleader on **28.08.2023 at 11.00 A.M.** to answer the same failing which suit will be disposed of exparte.

Given under my hand and the seal of the court this 4th day of August 2023.

By Order of the Court, Chief Ministerial Officer, Family Court, Mysore.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಮೈಸೂರು ನಗರ, ಕೆ.ಆರ್.ಮೊಹಲ್ಲಾ, ಲಕ್ಷ್ಮೀಪುರಂ, 1ನೇ ಕ್ರಾಸ್, ಮನೆ ನಂ.2410ರಲ್ಲಿ ವಾಸವಾಗಿರುವ ಎಚ್.ಎಸ್.ನಂಜುಂಡಸ್ವಾಮಿರವರ ಮಗಳಾದ ಶ್ರೀಮತಿ ಎಚ್.ಎನ್.ಪ್ರತಿಭಾರವರು ಈ ಕೆಳಕಂಡ ಸ್ವತ್ತನ್ನು ಅದರ ಮಾಲೀಕರಾದ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ವೈ.ಬಸವನಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಶಶಿಧರ್ ರವರ ಮಗನಾದ ಸಂತೋಷ ಕವಾಡ ಇವರಿಂದ ಖರೀದಿಸಲು ಇಚ್ಛಿಸಿ ಇವರ ಇಚ್ಛೆ ಮೇರೆಗೆ ದಿನಾಂಕ: 05–05–2022 ರಂದು ಕ್ರಯದ ಕರಾರನ್ನು ಮಾಡಿಕೊಂಡಿದ್ದು, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸಾರ್ವಜನಿಕರು ಯಾರೂ ವ್ಯವಹರಿಸಬಾರದೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗುತ್ತಿದ್ದು ಒಂದೊಮ್ಮೆ ಈಗಿರುವಾಗ್ಯೂ, ಯಾರಾದರೂ ವ್ಯವಹರಿಸಿದಲ್ಲಿ ಅಂತಹ ವ್ಯವಹಾರಗಳು ನಮ್ಮ ಕಕ್ಷಿದಾರರ ಹಕ್ಕಿಗೆ ಭಾದ್ಯಪಡಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸಲಾಗುತಿದೆ.

ಷೆಡ್ಯೂಲ್ ಸ್ವತ್ತುಗಳು

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ರೀರಾಂಪುರ ಗ್ರಾಮದ ಸರ್ವೆ ನಂ. 17/3 ಮತ್ತು 18/3 ರಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 06–05–2003 ರಂದು ಸಂಖ್ಯೆ.ಮೈ.ನ.ಪ್ರಾ.ನ.ಯೋ.ರೂ.ವೆ.185/2001–02ರ ಮೇರೆ ವಸತಿ ವಿನ್ಯಾಸನಕ್ಕೆ ಅನುಮೋದನೆ ಅನ್ವಯ ಕರ್ನಾಟಕ ರಾಜ್ಯ ಕಂದಾಯ ಇಲಾಖೆ ನೌಕರರ ಸಂಘ (ರಿ) ಜಿಲ್ಲಾ ಶಾಖೆ ಮೈಸೂರು ಇವರು ನಿರ್ಮಿಸಿ ಅಭಿವೃದ್ಧಿಪಡಿಸಿರುವ (ಕಂದಾಯ ನಗರ) ಬಡಾವಣೆಯ ನಿವೇಶನ ನಂ.23ರಲ್ಲಿ ಕಟ್ಟಿರುವ ಮನೆಯ ಸ್ವತ್ತಿಗೆ ಚಕ್ಕುಬಂದಿ:

ಪೂರ್ವಕ್ಕೆ : ನಿವೇಶನ ಸಂಖ್ಯೆ–22, ಪಶ್ಚಿಮಕ್ಕೆ : ಬಡಾವಣೆ ಎಲ್ಲೆ ಉತ್ತರಕ್ಕೆ : 9.00 ಮೀಟರ್ ರಸ್ತೆ ದಕ್ಷಿಣಕ್ಕೆ : ಬಡಾವಣೆ ಎಲ್ಲೆ. ಈ ಮಧ್ಯೆ ಇರುವ ವಿಸ್ತೀರ್ಣ ಪೂರ್ವ–ಪಶ್ಚಿಮ 15.00 ಮೀಟರ್, ಉತ್ತರ–ದಕ್ಷಿಣ 24.00 ಮೀಟರ್‌ಗಳು ಒಟ್ಟು 360.00 ಚದರದ ಆರ್.ಸಿ.ಸಿ. ಇಟಲಿಯನ್ ಮಾರ್ಬಲ್ ನಿಂದ ಕೂಡಿದ ವಾಸದ ಮನೆಯು ವಿದ್ಯುತ್, ನೀರು ಮತ್ತು ಸ್ಯಾನಿಟರಿ ಸೌಲಭ್ಯದಿಂದ ಕೂಡಿದ್ದು ಸದರಿ ಪೂರ್ತಾ ಸ್ವತ್ತು.

Sd/- Manukumar, B.A.L, LL.B
Advocate, # 35, Kuvempu Trust Building, Kalidasa Road, Jayalakshmipuram, MYSORE-570012
Mob: 9620828974

"ಪ್ರಕಟಣೆ"

ನೇತಾಜಿ ಗೃಹ ನಿರ್ಮಾಣ ಸಹಕಾರ ಸಂಘ ನಿ., ಮೈಸೂರು

ಇದರ ಆಡಳಿತ ಮಂಡಳಿಯ ಬಾಕಿ ಉಳಿದಿರುವ ಅವಧಿಗೆ ಖಾಲಿಯಿರುವ 01 ಪರಿಶಿಷ್ಠ ಪಂಗಡದ ನಿರ್ದೇಶಕರ ಸ್ಥಾನಕ್ಕೆ ಚುನಾವಣೆಯನ್ನು ದಿನಾಂಕ: 22.08.2023ರ ಮಂಗಳವಾರ ಬೆಳಿಗ್ಗೆ 9–00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ಸಂಘದ ಕಚೇರಿ ಆವರಣದಲ್ಲಿ ನಿಗಧಿಪಡಿಸಲಾಗಿರುತ್ತದೆ. ಚುನಾವಣೆಗೆ ಸ್ಪರ್ಧಿಸಲು ನಾಮಪತ್ರಗಳನ್ನು ದಿನಾಂಕ: 07–08–2023ರಿಂದ 14.08.2023 ರವರೆಗೆ ಬೆಳಿಗ್ಗೆ 11–00 ಗಂಟೆಯಿಂದ ಮಧ್ಯಾಹ್ನ 3–00 ಗಂಟೆಯವರೆಗೆ ಸಂಘದ ಕಚೇರಿಯಲ್ಲಿ ಸ್ವೀಕರಿಸಲಾಗುವುದು.

ಚುನಾವಣಾ ವೇಳಾಪಟ್ಟಿಯನ್ನು ಎಲ್ಲಾ ಅರ್ಹ ಸದಸ್ಯರಿಗೂ ಅಂಚೆ ಮೂಲಕ ಕಳುಹಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಸಂಘದ ಕಾರ್ಯದರ್ಶಿ ಹಾಗೂ ರಿಟರ್ನಿಂಗ್ ಆಫೀಸರ್‌ರವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ವಸಂತ್ ಕುಮಾರ್ ಎಸ್) ರಿಟರ್ನಿಂಗ್ ಆಫೀಸರ್

TGMC BANK

ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಆಡಳಿತ ಕಛೇರಿ:ಬಿ.ಹೆಚ್.ರಸ್ತೆ, ತುಮಕೂರು–572103. ಫೋ:0816–4021102/03
Email:tgmc.ho@tgmcbank.com, Website:www.tgmcbank.com

"ಪ್ರಕಟಣೆ"

ನಮ್ಮ ಬ್ಯಾಂಕಿನ ಷೇರುದಾರರು / ಠೇವಣಿದಾರರು / ಗ್ರಾಹಕರ ಮಾಹಿತಿಗಾಗಿ ಕಳೆದ ಹಲವಾರು ದಿನಗಳಿಂದ ಕೆಲವು ಅತೃಪ್ತರು ನಮ್ಮ ಬ್ಯಾಂಕಿನ ಮೇಲೆ ಅಪಪ್ರಚಾರವನ್ನು ಮಾಡುತ್ತಿದ್ದಾರೆ ಎಂದು ತಮ್ಮ ಗಮನಕ್ಕೆ ತರಲು ಬ್ಯಾಂಕಿನ ಆಡಳಿತ ಮಂಡಳಿಗೆ ಬಹಳ ನೋವಾಗುತ್ತಿದೆ. ಈ ಎಲ್ಲಾ ಅಪಪ್ರಚಾರಗಳು ಆಧಾರರಹಿತವಾಗಿದೆ ಮತ್ತು ಬ್ಯಾಂಕಿನ ವ್ಯವಹಾರದ ಮೇಲೆ ಕೆಟ್ಟ ಪ್ರಭಾವ ಬೀರುತ್ತಿದೆ.

ನಿಮ್ಮೆಲ್ಲರ ನೆಚ್ಚಿನ ಬ್ಯಾಂಕು ಕಾಲಕಾಲಕ್ಕೆ RBI ಮತ್ತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯನ್ವಯ ನಿಗಧಿಪಡಿಸಿದ ಎಲ್ಲಾ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ ಮತ್ತು RBI ಕಾಲಕಾಲಕ್ಕೆ ಪರಿವೀಕ್ಷಣೆ ನಡೆಸುತ್ತಿದ್ದು, ನಮ್ಮ ಬ್ಯಾಂಕಿನಲ್ಲಿರುವ ಸಾರ್ವಜನಿಕ ಹಣದ ಸುರಕ್ಷತೆಯ ಬಗ್ಗೆ ನಾವು ಭರವಸೆ ನೀಡುತ್ತಿದ್ದೇವೆ.

ಬ್ಯಾಂಕಿನ ಮೇಲೆ ಅಪಪ್ರಚಾರ ನಡೆಸುತ್ತಿರುವವರ ಬಗ್ಗೆ ನಾವು ಈಗಾಗಲೇ ಕಾನೂನು ಕ್ರಮಗಳನ್ನು ಸಹ ಜರುಗಿಸಿದ್ದೇವೆ.

ಮಾನ್ಯ ಸದಸ್ಯರು ಮತ್ತು ಗ್ರಾಹಕರು ಈ ಅಪಪ್ರಚಾರಗಳನ್ನು ನಂಬದೇ ಬ್ಯಾಂಕಿನ ಮೇಲೆ ಎಂದಿನಂತೆ ಭರವಸೆಯಿಟ್ಟು, ಬ್ಯಾಂಕಿನ ಅಭಿವೃದ್ಧಿಗೆ ಸಹಕರಿಸಬೇಕಾಗಿ ವಿನಂತಿ.

ಸಹಿ/– ಆಡಳಿತ ಮಂಡಳಿ
ದಿನಾಂಕ: 04–08–2023 ಟಿ.ಜಿ.ಎಂ.ಸಿ ಬ್ಯಾಂಕ್ ಲಿ., ತುಮಕೂರು